
15-31 ಮೇ, 2011
KARKAN/2007/20389
12-00
ಪ್ರಸ್ತುತ
ಪಾಕ್ಷಿಕ
ಇನ್ನು ಒಬಾಮ ಮಾತ್ರ...

ಸತ್ಯಸುದ್ದಿಯ

# ಪ್ರಸ್ತುತ

ಪಾಕ್ಷಿಕ

PRASTHUTHA KANNADA FORTNIGHTLY

ಮೇ 15-31, 2011 ಸಂಪುಟ : 5 ಸಂಚಿಕೆ : 9 ಬೆಲೆ : 12.00 ಪುಟ : 60 ಮಂಗಳೂರು




## ಅಂತರಾಳದಲ್ಲಿ...

**ಅಂಕಣಗಳು**

ಮೀಟುಗೋಲು 05
ಪ್ರತಿಕ್ರಿಯೆ 04
ರಾಷ್ಟ್ರೀಯ ವಾರ್ತೆ 55
ಅಂತಾರಾಷ್ಟ್ರೀಯ 57
ಮಿನಿಕಥೆ: 20
ಸುದ್ದಿಸಮುಚ್ಚಯ 50
ಇಂಚರ 34
ಇನಿದನಿ 36

**ಲೇಖನಗಳು**

ಉಸಾಮಾ ಹೋದ; ಒಬಾಮಾ? 14
ಗಲಭೆಯ ಸಂಚು 22
ಸಾಯಿಬಾಬಾರ ಧರ್ಮಾರ್ಥಗಳು... 30
ನ್ಯಾಯದ ನಿರೀಕ್ಷೆಯಲ್ಲಿ ಬಾಬರಿ 40
ಉಸಾಮಾ ಹತ್ಯೆಯಾಯಿತು... 44

**ವಿಶೇಷ ಲೇಖನ**

ಇನ್ನು ಒಬಾಮಾ ಮಾತ್ರ... 08



ಜಗತ್ತಿನ ಅತಿದೊಡ್ಡ ಭಯೋತ್ಪಾದಕ ರಾಷ್ಟ್ರ ಅಮೆರಿಕಾ ಲಾಡೆನ್‌ನನ್ನು ಬಲಿಪಡೆದುಕೊಂಡದ್ದು ಹೇಗೆ?



ಸಾಯಿಬಾಬಾ ಮಾಡಿದ ಸಾಮಾಜಿಕ ಸೇವೆಗಳು ಪ್ರಜಾತಂತ್ರವನ್ನು ಅಣಕಿಸಿದವೇ? -30



ಅಲಹಾಬಾದ್ ಹೈಕೋರ್ಟ್ ನೀಡಿದ ತೀರ್ಪಿಗೆ ಅಚ್ಚರಿ ವ್ಯಕ್ತಪಡಿಸಿದ ಸುಪ್ರೀಂ ಕೋರ್ಟ್- 40



ಮಡಿಕೇರಿಯಲ್ಲಿ ಅಮಾಯಕ ಮೇಲೆ ಕೇಸು ದಾಖಲು: ಪೊಲೀಸ್ ಅಧಿಕಾರಿ ಲೋಕಾಯುಕ್ತ ಬಲೆಗೆ - 22

ಪ್ರಧಾನ ಸಂಪಾದಕರು
ಕೆ.ಎಂ. ಶರೀಫ್
ಸಂಪಾದಕರು
ಫಯಾರುಝ್ ಎನ್.
ಸಹ ಸಂಪಾದಕರು
ಶಬೀರ್ ಕೆ.
ಸಂಪಾದಕ ಮಂಡಳಿ:
ಇಲ್ಯಾಸ್ ಮುಹಮ್ಮದ್. ಅಬ್ದುಲ್ ರಝಾಕ್ ಕೆಮ್ಮಾರ.
ಅಸ್ಲಮ್ ಹಸನ್. ಅಬ್ದುಲ್ ಹಮೀದ್ ಕೆ.ವೈ.
ಶಾಹಿದಾ ಎ., ಇಮ್ತಿಯಾಝ್. ಶಾಹಿದಾ ತಸ್ನೀಮ್.
ಗ್ರಾಫಿಕ್ ಡಿಸೈನರ್
ಎಂ. ಶಬೀರ್
ವ್ಯವಸ್ಥಾಪಕರು
ಅಬ್ದುಲ್ ಖಾದರ್ ಪಿ.

PRASTHUTHA
KANNADA FORTNIGHTLY
Media House
10-23-1009(1), Dr.Ansari Road,
Near Yatheem Khana Hall
Bunder, Mangalore-575001
Ph: 0824-2410454 Fax:0824-2410454
e-mail : prasthutha2007@gmail.com

Edited, Printed and published by K.M. Shareef, 10-23-1009(1) Dr.Ansari Road, Bunder, Mangalore-575001, Owned by Sthuthi Publications & Information Trust, 10-23-1009(1) Dr.Ansari Road, Bunder, Mangalore-575001, Tel: 0824-2410454, Email- prasthutha2007@gmail.com Printed at Maadhyama communication Ltd, 127, Industrial Area, Bykampady, Mangalore-11.

ಓದುಗರು, ಬರಹಗಾರರು ತಮ್ಮ ಅಭಿಪ್ರಾಯ, ಲೇಖನ, ಬರಹಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ.

ಹೊಸ ಕಚೇರಿ ವಿಳಾಸ ಇಂತಿದೆ.

ಪ್ರಸ್ತುತ ಪಾಕ್ಷಿಕ
ಡಿ.ನಂ.10-23-1009(1)
ಮೀಡಿಯಾ ಹೌಸ್, ಡಾ.ಅನ್ಸಾರಿ ರಸ್ತೆ
ಯತೀಮ್‌ಖಾನಾ ಹಾಲ್ ಬಳಿ, ಬಂದರ್
ಮಂಗಳೂರು-1
ಈ ಮೇಲ್ ವಿಳಾಸ:
prasthutha2007@gmail.com

### ಕಾರ್ಮಿಕರ ದುಃಸ್ಥಿತಿಯ ಮೇಲೆ ಬೆಳಕು ಚೆಲ್ಲಿದ ಲೇಖನ

ಕಾರ್ಮಿಕರ ಪರಿಸ್ಥಿತಿಯ ತುಂಬಾ ಶೋಚನೀಯವಾಗಿದೆ. ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಅವಲೋಕನ ನಡೆಸಿದರೆ ಹಲವು ಭಯಾನಕ ದೃಶ್ಯಗಳು ನಮ್ಮೆದುರು ಅನಾವರಣಗೊಳ್ಳುತ್ತದೆ. ಈ ಬಗ್ಗೆ ಪ್ರಸ್ತುತ ಪಾಕ್ಷಿಕದಲ್ಲಿ ಮೂಡಿ ಬಂದಿರುವ 'ಅಭದ್ರತೆಯಲ್ಲಿ ಕಾರ್ಮಿಕರು' ಎಂಬ ಮುಖಪುಟ ಲೇಖನವು ಕಾರ್ಮಿಕರು ಅನುಭವಿಸುತ್ತಿರುವ ಸಮಸ್ಯೆಗಳಿಗೆ ಕನ್ನಡಿ ಹಿಡಿದಂತಿದೆ.

ಕಾರ್ಮಿಕರು ಅಭದ್ರತೆಯಿಂದ ಜೀವನ ಸಾಗಿಸುತ್ತಿದ್ದು, ಕೆಲಸದ ಸಂದರ್ಭಗಳಲ್ಲಿ ಯಾವುದೇ ಮೂಲಭೂತ ಸೌಕರ್ಯಗಳನ್ನು ಅವರಿಗೆ ನೀಡಲಾಗುತ್ತಿಲ್ಲ. ಈ ಮೂಲಕ ಕಾರ್ಮಿಕರನ್ನು ಶೋಷಣೆಗೆ ಒಳಪಡಿಸಲಾಗುತ್ತಿದೆ.

ಕಾರ್ಮಿಕರು ತಮ್ಮ ಮೇಲಾಗುತ್ತಿರುವ ದಬ್ಬಾಳಿಕೆಗಳ ವಿರುದ್ಧ ಹೋರಾಡಲು ಸಂಘಟಿತರಾಗಿರುವುದು ಅನಿವಾರ್ಯವಾಗಿದೆ.

ಶಬ್ಬೀರ್ ಅಲಿ, ಬೆಂಗಳೂರು

### ಈಜಿಪ್ಟ್ ಕ್ರಾಂತಿ ಮಾದರಿಯಾಗಲಿ

ಇಸ್ಲಾಮಿನ ಇತಿಹಾಸದ ಪುಟದಲ್ಲಿ ಉಳಿದುಕೊಂಡು, ಮುಸ್ಲಿಮನ ಮನಸ್ಸಿನಲ್ಲಿ ಮರೆಯಲಾಗದ ಭೂಮಿ ಎಂದೇ ಪ್ರಸಿದ್ಧಿಯಾದ ಹಲವಾರು ಯುದ್ಧಕ್ಕೆ ನಾಂದಿಯಾದ ಈಜಿಪ್ಟ್ ಇಂದು ಮತ್ತೊಮ್ಮೆ ಪ್ರಸಿದ್ಧಿಯಾಗಿದೆ.

ಅಲ್ಲಿನ ಜನರ ತುಡಿತ, ಹೋರಾಟದ ಶೈಲಿ ನಿಜವಾಗಿಯೂ ಮೆಚ್ಚುವಂಥದ್ದೇ. ಫರೋವಾಗಳ ವಿರುದ್ಧ ಅಂದು ನಡೆಸಿದ್ದ ಹೋರಾಟವು ಕೂಡ ಇತಿಹಾಸದ ಪುಟಗಳಲ್ಲಿ ಅಜರಾಮರವಾಗಿದೆ. ತಮ್ಮ ಮೇಲಾಗುತ್ತಿರುವ ದೌರ್ಜನ್ಯ, ದಬ್ಬಾಳಿಕೆಯ ವಿರುದ್ಧ ಈಜಿಪ್ಟ್ ಜನತೆ ಸೆಟೆದು ನಿಂತು ಕೆಚ್ಚೆದೆಯಿಂದ ಹೋರಾಡಿ ಸರ್ವಾಧಿಕಾರಿ ಹುಸ್ನಿ ಮುಬಾರಕ್‌ನನ್ನು ಅಧಿಕಾರದಿಂದ ಕೆಳಗಿಳಿಸುವಲ್ಲಿ ಸಫಲವಾಗಿದೆ. ಈಜಿಪ್ಟ್ ಜನತೆಯ ಇಂತಹ ಹೋರಾಟದ ಮಾದರಿ ಇಡೀ ಜಗತ್ತಿಗೇ ಮಾದರಿ.




ಭಾರತ ದೇಶದಲ್ಲಿ ಮುಸ್ಲಿಮರ ಪರಿಸ್ಥಿತಿಯನ್ನು ಕಂಡರೆ ಮತ್ತು ಇಲ್ಲಿನ ರಾಜಕೀಯ ಡೊಂಬರಾಟಗಳನ್ನು ನೋಡಿದರೆ ಈ ದೇಶದಲ್ಲೂ ಕೂಡ ಇಂತಹ ಒಂದು ಕ್ರಾಂತಿಯ ಅಗತ್ಯವಿದೆ ಎಂದೆನಿಸುತ್ತದೆ.

ಶಮೀರ್, ಮಲಾರ್

### ಎಂಡೋಸಲ್ಫಾನ್ ವಿರುದ್ಧ ಪ್ರತಿಭಟನೆ ಅಗತ್ಯ

ಎಂಡೋಸಲ್ಫಾನ್ ನಿಷೇಧಿಸಬೇಕು ಎಂಬ ಕೂಗು ದೇಶದ ಹಲವಾರು ಕಡೆ ಮತ್ತು ದಕ್ಷಿಣ ಭಾರತದ ಕೇರಳದಲ್ಲಿ ಅತೀ ಹೆಚ್ಚು ಕಾವು ಪಡೆದುಕೊಳ್ಳುತ್ತಿರುವುದು ಸಂತೋಷದ ಸಂಗತಿಯಾಗಿದೆ.

ಎಂಡೋಸಲ್ಫಾನ್ ಎಂಬ ಕೀಟ ನಾಶಕದ ಬಳಕೆಯಿಂದ ಅತೀ ಹೆಚ್ಚು ಹಾನಿಗೊಳಗಾಗಿರುವುದು ಕರ್ನಾಟಕ. ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯ ಜನತೆ. ಈ ವಿಷಕಾರಿ ಎಂಡೋಸಲ್ಫಾನ್ ಬಗ್ಗೆ ಇಲ್ಲಿ ಯಾವುದೇ ಪ್ರತಿಭಟನೆಗಳು ನಡೆಯದಿರುವುದು ವಿಷಾದನೀಯ.

ಎಂಡೋಸಲ್ಫಾನ್ ಜೀವಹಾನಿಕರ ಮತ್ತು ಪರಿಸರ ಹಾನಿಕರವಾಗಿದೆ. ಈ ವಿಷಯುಕ್ತ ಕ್ರಿಮಿನಾಶಕದಿಂದ ಅತಿಹೆಚ್ಚು ಹಾನಿಗೊಳಗಾಗುವವರು ಕಾರ್ಮಿಕರು, ರೈತರು ಮತ್ತು ಅವರ ಕುಟುಂಬಸ್ಥರಾಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮಾನ ಮನಸ್ಕ ಸಂಘಟನೆಗಳು ಈ ಬಗ್ಗೆ ಜಾಗೃತಿ ಮೂಡಿಸಿ ಎಂಡೋಸಲ್ಫಾನ್ ಸಂತ್ರಸ್ತರನ್ನು ಒಗ್ಗೂಡಿಸಿಕೊಂಡು ಪ್ರತಿಭಟನೆ ನಡೆಸಿ ಎಂಡೋಸಲ್ಫಾನ್‌ನನ್ನು ದೇಶಾದ್ಯಂತ ನಿಷೇಧಿಸಲು ಕಾರ್ಯಪ್ರವೃತ್ತರಾಗಬೇಕು.

ಝೈನುಲ್ ಆಬಿದ್, ಮಡಿಕೇರಿ

# ಒಬಾಮ ಆಡಿದ್ದೇ ಆಟ, ಹೇಳಿದ್ದೇ ವೇದ

ಸದ್ಯ ನಮ್ಮ ಬಹುತೇಕ ಮಾಧ್ಯಮಗಳು ಒಬಾಮ- ಉಸಾಮ ವಿಚಾರದಲ್ಲಿ ಬ್ಯುಸಿಯಾಗಿವೆ. ಒಬಾಮ ಹೇಳಿದ್ದನ್ನು, ಹೇಳದೇ ಇರುವುದನ್ನು ಮತ್ತು ಇನ್ನು ಹೇಳಬೇಕಾಗಿರುವುದನ್ನು ಈಗಾಗಲೇ ನಮ್ಮ ಬಹುತೇಕ ಮಾಧ್ಯಮಗಳು ಬಿತ್ತರಿಸಿಯಾಗಿವೆ. ಉಸಾಮ ಹತ್ಯೆಗಿಂತಲೂ ಹೆಚ್ಚಾಗಿ ಜಾಗತಿಕವಾಗಿ ಈಗ ಚರ್ಚೆಯಾಗುತ್ತಿರುವುದು ನಮ್ಮ ನೆರೆಯ ದೇಶವಾದ ಪಾಕಿಸ್ತಾನದ ಬಗ್ಗೆ. ವಿಕಿಲೀಕ್ಸ್ ಬಹಿರಂಗಪಡಿಸಿರುವ ಮಾಹಿತಿಗಿಂತ ಅಮೆರಿಕ ಹೊರಗೆಡಹುತ್ತಿರುವ ಸುಳ್ಳಿನ ಕಂತೆಗಳೇ ಇಂದು ಭಾರತಕ್ಕೆ ಮುಖ್ಯವೆನಿಸುತ್ತಿರುವುದು ಮತ್ತು ಅದಕ್ಕೆ ತಕ್ಕಂತೆ ಸ್ಪಂದಿಸುತ್ತಿರುವುದು ಭವಿಷ್ಯದಲ್ಲಿ ಭಾರೀ ಅಪಾಯವೊಂದನ್ನು ಆಹ್ವಾನಿಸಿದಂತೆ.

ಕಳೆದ ವರ್ಷ ಭಾರತಕ್ಕೆ ಭೇಟಿ ನೀಡಿದ ಒಬಾಮನ ಉದ್ದೇಶ ಏನು ಎಂಬುದು ಹೆಚ್ಚಿನ ಭಾರತೀಯರಿಗೆ ಮನದಟ್ಟಾಗಿತ್ತು. ಆದರೆ ಅಮೆರಿಕದ ಕೈಗೊಂಬೆಯಂತೆ ಕಾರ್ಯನಿರ್ವಹಿಸುತ್ತಿರುವ ಕೇಂದ್ರ ಸರಕಾರ ಎಚ್ಚೆತ್ತುಕೊಳ್ಳಲೇ ಇಲ್ಲ. ಏಶ್ಯಾದಲ್ಲಿ ಅತಿವೇಗವಾಗಿ ಬೆಳೆಯುತ್ತಿರುವ ಚೀನಾ ಮತ್ತು ಭಾರತ ದೇಶಗಳು ಅಮೆರಿಕ ಪ್ರಮುಖ ಗುರಿ ಎಂಬುದು ಒಬಾಮನ ಮಾತುಗಳಲ್ಲಿ ಸ್ಪಷ್ಟವಾಗುತ್ತಿತ್ತು. ಅಮೆರಿಕದೊಂದಿಗೆ ಅಣುಒಪ್ಪಂದ, ಜಂಟಿ ಸಮರಾಭ್ಯಾಸ ನಡೆಸುತ್ತಿರುವ ಭಾರತವು ಅಪಾಯವನ್ನು ಮೈಮೇಲೆ ಎಳೆದುಕೊಂಡಿತ್ತು. ಭಾರತವನ್ನು ಉಪಾಯವಾಗಿ ಹತ್ತಿಕ್ಕಲು ಮತ್ತು ತನ್ನ ಉದ್ಯಮದ ಕಾರಸ್ಥಾನವಾಗಿಸಲು ಅಮೆರಿಕವು ನಿಗೂಢ ಯೋಜನೆಗಳನ್ನು ಹಾಕಿಕೊಂಡಿರುವುದನ್ನು ವಿಕಿಲೀಕ್ಸ್ ಹಲವು ಬಾರಿ ಬಹಿರಂಗಪಡಿಸಿದೆ. ಇಂದು ನೆರೆಯ ಪಾಕಿಸ್ತಾನದಿಂದ ಭಾರತವು ಎದುರಿಸುತ್ತಿರುವ ಯಾವುದೇ ಸಮಸ್ಯೆಯ ಮೂಲ ಅಮೆರಿಕವೇ ಆಗಿರುತ್ತದೆ.

ಭಾರತ ಮತ್ತು ಪಾಕಿಸ್ತಾನದ ನಡುವಿನ ಸಂಘರ್ಷವನ್ನು ಬಂಡವಾಳವನ್ನಾಗಿಸಿಕೊಳ್ಳಲು ಅಮೆರಿಕ ಹೊಸ ತಂತ್ರವೊಂದನ್ನು ಹೆಣೆದಿದೆ. ಅದುವೇ ಉಸಾಮಾ ಬಿನ್ ಲಾಡೆನ್ ಹತ್ಯೆ. ಅಮೆರಿಕಕ್ಕೆ ಲಾಡೆನ್ ಹತ್ಯೆಗಿಂತ ಆ ಹತ್ಯೆಯು ಪಾಕಿಸ್ತಾನದಲ್ಲೇ ನಡೆಯುವುದು ಮುಖ್ಯವಾಗಿದೆ. ಈ ಮೂಲಕ ಏಶ್ಯದಲ್ಲಿ ಎರಡು ಯುದ್ಧಜರ್ಜರಿತ ದೇಶಗಳನ್ನು ಸೃಷ್ಟಿಸಿ, ಶಸ್ತ್ರಾಗಳ ಮಾರಾಟಕ್ಕೆ ಮಾರುಕಟ್ಟೆ ನಿರ್ಮಿಸುವುದು ಅಮೆರಿಕದ ಉದ್ದೇಶ. ಈ ದೃಷ್ಟಿಯಿಂದಲೂ ನಾವು ಲಾಡೆನ್ ಹಿಂದಿನ ಹತ್ಯೆಯ ರಹಸ್ಯವನ್ನು ಬೇಧಿಸಬೇಕಾಗಿದೆ.

ಲಾಡೆನ್ ಹತ್ಯೆಯಾಗಿ ವಾರವೊಂದು ಕಳೆಯುವಷ್ಟರಲ್ಲಿ ಅಮೆರಿಕವು ತನ್ನ ಅಜೆಂಡಾವನ್ನು ಒಂದೊಂದಾಗಿಯೇ ಜಾರಿಗೊಳಿಸಲು ಯತ್ನಿಸಿದೆ. ಭಾರತದ ಮುಂಬೈ ಮೇಲಿನ ಭಯೋತ್ಪಾದಕರ ದಾಳಿಯನ್ನು ಪಾಕಿಸ್ತಾನದ ಬೇಹುಗಾರಿಕಾ ಸಂಸ್ಥೆ ಐಎಸ್ಐ ನಿಯೋಜಿಸಿದೆ ಎಂದು ಹೇಳಿರುವ ಅಮೆರಿಕ, ದಾಳಿಯ ಪ್ರಮುಖ ರೂವಾರಿಗಳ ಪಟ್ಟಿಯನ್ನೂ ಬಿಡುಗಡೆಗೊಳಿಸಿದೆ. ಸದ್ಯಕ್ಕೆ ಅವರು ಮೋಸ್ಟ್ ವಾಂಟೆಡ್ ಭಯೋತ್ಪಾದಕರು. ಇನ್ನು ಕೆಲವೇ ಸಮಯದಲ್ಲಿ ಆ ಭಯೋತ್ಪಾದಕರನ್ನು ಹತ್ಯೆಗೈಯ್ಯುವುದಕ್ಕಾಗಿ ಅಮೆರಿಕ ಸೇನೆಯು ಭಾರತಕ್ಕೆ ಸದ್ದಿಲ್ಲದೆ ಬಂದು ಹೋದರೂ ಅಚ್ಚರಿಪಡಬೇಕಾಗಿಲ್ಲ. ಹೀಗೆ ಭಯೋತ್ಪಾದನೆಯ ನಿರ್ಮೂಲನೆಯ ಹೆಸರಿನಲ್ಲಿ ಅಮೆರಿಕವು ಪ್ರಜಾತಂತ್ರ ವ್ಯವಸ್ಥೆ ಇರುವ ದೇಶದೊಳಗೆ ನಿರಾಯಸವಾಗಿ ಪ್ರವೇಶಿಸುತ್ತಿದೆ. ಸದ್ಯ ಪಾಕಿಸ್ತಾನ ಎದುರಿಸುತ್ತಿರುವ ಬಿಕ್ಕಟ್ಟು, ಎಡವಟ್ಟುಗಳು ಕೆಲವೇ ಸಮಯದಲ್ಲಿ ಭಾರತವೂ ಎದುರಿಸಬೇಕಾಗಿ ಬಂದರೆ ಅಚ್ಚರಿಪಡಬೇಕಾಗಿಲ್ಲ.

ಲಾಡೆನ್ ಹತ್ಯೆಯ ನಂತರ ಒಬಾಮ ವ್ಯಕ್ತಪಡಿಸಿರುವ ಪ್ರತಿಕ್ರಿಯೆ ಎಷ್ಟು ಅಪಾಯಕಾರಿ ಮತ್ತು ಕುತಂತ್ರದಿಂದ ಕೂಡಿದ್ದು ಎಂಬುದನ್ನು ಅರಬ್ ಜಗತ್ತು ಅರಿತುಕೊಳ್ಳಬೇಕಾಗಿದೆ. ಅದೇನೆಂದರೆ, ''ಅಮೆರಿಕವು ಮುಸ್ಲಿಮ್ ವಿರೋಧಿಯಲ್ಲ ಮತ್ತು ಮುಸ್ಲಿಮರ ವಿರುದ್ಧ ಕಾರ್ಯಾಚರಣೆ ನಡೆಸುತ್ತಿಲ್ಲ'' ಎಂಬುದಾಗಿ ಒಬಾಮ ಪ್ರತಿಕ್ರಿಯಿಸಿದ್ದ. ಲಾಡೆನ್ ಹತ್ಯೆಯೊಂದಿಗೆ ಧರ್ಮವನ್ನು ಸೇರಿಸಿ ಮಾತನಾಡುವ ಒಬಾಮನ ಮನೋಸ್ಥಿತಿ ಎಂಥದ್ದು ಎಂಬುದನ್ನು ಅರ್ಥೈಸಿಕೊಳ್ಳಬೇಕು.

ಭಯೋತ್ಪಾದಕರ ಜಗತ್ತಿನಲ್ಲಿ ಈವರೆಗೆ ಒಬಾಮ ಮತ್ತು ಉಸಾಮಾ ಹೆಸರುಗಳು ಮಾತ್ರ ಇದ್ದವು. ಈಗ ಉಸಾಮಾ ಹೆಸರು ಅಳಿಸಿ ಹೋಗಿದೆ. ಇನ್ನು ಉಳಿದಿರುವುದು ಒಬಾಮ ಮಾತ್ರ.

## ಪತ್ರಿಕೆಗಳ ದ್ವಿಮುಖ ನೀತಿ

ಪತ್ರಿಕೆಗಳು ನೈಜ ಸುದ್ದಿಗಳನ್ನು ಬಿತ್ತರಿಸುವುದನ್ನು ಬಿಟ್ಟು ಸುಳ್ಳು ಮಾಹಿತಿಗಳನ್ನು ಈ ಸಮಾಜಕ್ಕೆ ನೀಡುತ್ತಾ ಬಂದಿದೆ. ಈ ಪೂರ್ವಾಗ್ರಹ ಪೀಡಿತ ಮಾಧ್ಯಮಗಳು ಸಮಾಜದ ಹಿತವನ್ನು ಬಯಸದೇ ಕೇವಲ ಒಂದು ನಿರ್ದಿಷ್ಟ ವರ್ಗದ ಸೇವೆಯಲ್ಲಿ ತೊಡಗಿದೆ ಎನ್ನಬಹುದು.

ಇತ್ತೀಚಿಗೆ ಅಮೆರಿಕಾದ ಪಡೆಗಳು ಉಸಾಮ ಬಿನ್ ಲಾಡೆನ್‌ನ ಹತ್ಯೆ ಮಾಡಿತು. ಉಸಾಮನನ್ನು ಈ ಹಿಂದೆಯೇ ಅಮೆರಿಕಾದ ಪಡೆಗಳು ಹತ್ಯೆಗೈದಿದೆ ಎಂಬ ವರದಿ ಇತ್ತು. ಇದೀಗ ಅಮೆರಿಕಾ ತಾನು ಪಾಕಿಸ್ತಾನದಲ್ಲಿ ಉಸಾಮನ ಹತ್ಯೆ ನಡೆಸಿದ್ದೇವೆ ಎಂದು ಅಧಿಕೃತವಾಗಿ ಘೋಷಿಸಿದೆ. ಮಾತ್ರವಲ್ಲ ಮೃತದೇಹವನ್ನು ಸಮುದ್ರದಲ್ಲಿ ದಫನ ಮಾಡಲಾಗಿದೆ ಎಂದು ಅಮೆರಿಕಾ ಹೇಳಿದೆ. ಹೀಗೆ ಉಸಾಮನ ಹತ್ಯೆಯ ಬಗ್ಗೆ ಹಲವು ಗೊಂದಲಗಳಿವೆ.

ಉಸಾಮ ಒಬ್ಬ ಮೋಸ್ಟ್ ವಾಂಟೆಡ್ ಎಂದಾದರೆ ಅಮೆರಿಕಾ ಆತನ ಮೃತದೇಹವನ್ನು ಏಕೆ ಆತುರಾತುರವಾಗಿ ದಫನ ಮಾಡಿತು. ಅದು ಕೂಡ ಸಮುದ್ರದಲ್ಲಿ! ಹೀಗೆ ಅಮೆರಿಕಾ ನೀಡುತ್ತಿರುವ ಪ್ರತಿಯೊಂದು ಹೇಳಿಕೆಗಳು ಗೊಂದಲಗಳಿಂದಲೇ ಕೂಡಿವೆ.

ಇಲ್ಲಿನ ಪೂರ್ವಾಗ್ರಹ ಪೀಡಿತ ಹೆಚ್ಚಿನ ಮಾಧ್ಯಮಗಳು ಅಮೆರಿಕಾ ನೀಡುತ್ತಿರುವ ಗೊಂದಲದಿಂದ ಕೂಡಿದ ಸ್ಪಷ್ಟನೆಗಳ ಬಗ್ಗೆ ಚರ್ಚೆ ನಡೆಸುತ್ತಿಲ್ಲ. ಅಮೆರಿಕಾ ಉಸಾಮನ ಹತ್ಯೆ ನಡೆಸಿದೆ ಎಂಬ ವಿಷಯವನ್ನು ಮಾತ್ರ ಹೈಲೈಟ್ ಮಾಡಿ ಅಮೆರಿಕಾದ ಏಜೆಂಟ್ ಆಗಿ ಕಾರ್ಯನಿರ್ವಹಿಸುತ್ತಿವೆ.

ಮುಹಮ್ಮದ್ ತಂಝೀಲ್, ಕೈರಂಗಳ

## ಲೇಖನ ಉತ್ತಮವಾಗಿತ್ತು

ಅರಬ್ ಜಗತ್ತಿನಲ್ಲಿ ಹಲವು ದಿನಗಳಿಂದ ಭಾರೀ ಪ್ರತಿಭಟನೆಗಳು ನಡೆಯುತ್ತಿವೆ. ಆದರೆ ಪ್ರತಿಭಟನೆಗಳು ಎತ್ತ ಸಾಗುತ್ತಿವೆ. ಈ ಪ್ರತಿಭಟನೆಗಳಿಂದ ಅರಬ್ ಜಗತ್ತಿನಲ್ಲಿ ಏನಾದರೂ ಬದಲಾವಣೆಗಳಾಗಿವೆಯೇ ಎಂಬ ವಿಷಯ ಮಾತ್ರ ತಿಳಿಯುತ್ತಿಲ್ಲ.

ಪ್ರಸ್ತುತ ಪಾಕ್ಷಿಕದಲ್ಲಿ ಪ್ರಕಟವಾದ 'ಅರಬ್ ಜಗತ್ತಿನಲ್ಲಾದ ಬದಲಾವಣೆಯೇನು' ಎಂಬ ಲೇಖನವು ಅಲ್ಲಿ ನಡೆಯುತ್ತಿರುವ ಪ್ರತಿಭಟನೆಗಳ ಎತ್ತ ಸಾಗುತ್ತಿವೆ ಎಂಬುದನ್ನು ತಿಳಿಸಿಕೊಟ್ಟಿದೆ.

ಈಜಿಪ್ಟ್‌ನಲ್ಲಿ ಸರ್ವಾಧಿಕಾರಿ ಹುಸ್ನಿ ಮುಬಾರಕ್ ಪದಚ್ಯುತಿಯಾಗಿರುವುದು ನಿಜ. ಆದರೆ ಅಲ್ಲಿನ ಆಡಳಿತ ಆತನ ಉತ್ತರಾಧಿಕಾರಿಗಳ ಮಾತ್ರ ಪದಚ್ಯುತಿಯಾಗಿಲ್ಲ. ಅದೇ ರೀತಿ ಕೆಲವು ಕಡೆಗಳಲ್ಲಿ ಸರ್ವಾಧಿಕಾರಿಗಳು ಉಚ್ಚಾಟನೆಯಾಗಿದೆ. ಆದರೆ ಆಡಳಿತ ವ್ಯವಸ್ಥೆಯು ಸರ್ವಾಧಿಕಾರಿಗಳ ಕರಾಳತೆಯಿಂದ ಮುಕ್ತವಾಗದಿರುವುದು ವಾಸ್ತವವಾಗಿದೆ.




ಅಮೆರಿಕಾದಂತಹ ಬಂಡವಾಳಶಾಹಿ ಆಡಳಿತವು ಇನ್ನು ಲಿಬಿಯಾದಂತಹ ತೈಲ ಸಂಪತ್ಭರಿತ ರಾಷ್ಟ್ರಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಹರಸಾಹಸಪಡುತ್ತಿರುವುದನ್ನು ಕೂಡ ನಾವು ಕಾಣುತ್ತಿದ್ದೇವೆ.

ಅರಬ್ ಜಗತ್ತಿನಲ್ಲಿ ನಡೆಯುತ್ತಿರುವ ಹೋರಾಟಗಳ ಪ್ರಸಕ್ತ ಸನ್ನಿವೇಶಗಳ ಬಗ್ಗೆ ಮಾಹಿತಿ ನೀಡಿದ ಲೇಖಕರಿಗೆ ಅಭಿನಂದನೆಗಳು.

ಶೌಕತ್ ಅಲಿ, ಸುರತ್ಕಲ್

## ಕಾರ್ಮಿಕರು ಜನಾಂದೋಲನ ರೂಪಿಸಲಿ

ಈ ದೇಶದಲ್ಲಿ ಎಲ್ಲಾ ವಿಧಧ ಕಾರ್ಮಿಕರು ಅಭದ್ರತೆಯಲ್ಲಿ ಕೆಲಸ ನಿರ್ವಹಿಸುತ್ತಿರುವುದು ಕಟು ವಾಸ್ತವವಾಗಿದೆ. ಪ್ರಸ್ತುತ ಪಾಕ್ಷಿಕ ಮೇ 1-15ರ ಸಂಚಿಕೆಯಲ್ಲಿ ಪ್ರಕಟವಾಗಿರುವ ಕಾರ್ಮಿಕರ ಬಗೆಗಿನ ಲೇಖನವು ಬಹಳ ಅರ್ಥಪೂರ್ಣವಾಗಿದೆ.

ಕಾರ್ಮಿಕರ ಸಮಸ್ಯೆಗಳನ್ನು ಅರಿಯಲು ಯಾವೊಂದು ರಾಜಕೀಯ ಪಕ್ಷಗಳು ಇಚ್ಚಾಶಕ್ತಿಯನ್ನು ತೋರುತ್ತಿಲ್ಲ. ಕೇವಲ ರಾಜಕೀಯ ದಾಳವನ್ನಾಗಿ ಕಾರ್ಮಿಕರನ್ನು ಬಳಸಿಕೊಳ್ಳಲಾಗುತ್ತಿದೆ. ಒಂದೇ ವೇಳೆ ರಾಜಕೀಯ ಪಕ್ಷಗಳು ಕಾರ್ಮಿಕರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಮನಸು ಮಾಡಿದ್ದರೆ ಕಾರ್ಮಿಕರ ಪರಿಸ್ಥಿತಿ ಅಧೋಗತಿಗೆ ತಳ್ಳಲ್ಪಡುತ್ತಿರಲಿಲ್ಲ.

ಕಾರ್ಮಿಕರೆಲ್ಲರೂ ಒಟ್ಟಾಗಿ ಜನಾಂದೋಲನವನ್ನು ರೂಪಿಸಬೇಕಾಗಿದೆ. ತಮ್ಮ ಮೇಲೆ ದಬ್ಬಾಳಿಕೆ ನಡೆಸುತ್ತಿರುವ ಬಂಡವಾಳಶಾಹಿ, ಸಾಮ್ರಾಜ್ಯಶಾಹಿಗಳ ವಿರುದ್ಧ ಹಾಗೂ ತಮ್ಮ ಸಮಸ್ಯೆಗಳ ವಿರುದ್ಧ ಹೋರಾಟ ನಡೆಸಲು ಕಾರ್ಮಿಕರು ಸನ್ನದ್ಧರಾಗುವ ಕಾಲ ಕೂಡಿ ಬಂದಿದೆ.

ಪುರುಷೋತ್ತಮ್, ಮಂಗಳೂರು (ಓರ್ವ ಕಾರ್ಮಿಕ)

## ತರವಲ್ಲ ಈ ನಿರ್ಲಕ್ಷ್ಯ...!

ರಾಜ್ಯ ಸರಕಾರವು ಪಶುವೈದ್ಯರ ಕೊರತೆ ನೀಗಿಸಲು ಪಶುವೈದ್ಯಕೀಯ ಡಿಪ್ಲೋಮ ಕೋರ್ಸ್ ಆರಂಭಿಸಲು ಚಿಂತನೆ ನಡೆಸಿರುವುದು ಸ್ವಾಗತಾರ್ಹ ಕ್ರಮ.

ಯಾಕೆಂದರೆ ಎಸ್ಸೆಸ್ಸೆಲ್ಸಿ ಓದಿರುವ ವಿದ್ಯಾರ್ಥಿಗಳು ನಂತರ ಡಿಪ್ಲೋಮ, ಐ.ಟಿ.ಐ ಇತ್ಯಾದಿ ಕೋರ್ಸ್‌ಗಳಿಗೆ ಹೆಚ್ಚಿನ ಗಮನ ನೀಡುತ್ತಾರೆ. ಹಾಗೆಯೇ ಈಗ ಪಶು ವೈದ್ಯಕೀಯ ಡಿಪ್ಲೋಮ ಕೋರ್ಸ್‌ನ ಪರಿಚಯದಿಂದಾಗಿ ಎಸ್ಸೆಸ್ಸೆಲ್ಸಿಯ ನಂತರ ಯಾವುದೇ ವಿಜ್ಞಾನ ಪದವಿ ಅಗತ್ಯವಿಲ್ಲದೆ ವೈದ್ಯಕೀಯ ಕ್ಷೇತ್ರಕ್ಕೆ ಕಾಲಿಡುವ ಸುವರ್ಣಾವಕಾಶ ಒದಗಿ ಬರುತ್ತದೆ. ಪಶು ವೈದ್ಯಕೀಯ ಡಿಪ್ಲೋಮ ಕೋರ್ಸ್ ಮುಗಿಸಿದ ವಿದ್ಯಾರ್ಥಿಗಳಿಗೆ ಕೆಲಸ ಖಚಿತ ಎಂದು ಪರೋಕ್ಷವಾಗಿ ಮಾತುಗಳು ಕೇಳಿಬರುತ್ತಿವೆ.

ಆದರೆ ಪಶು ವೈದ್ಯಕೀಯ ಕೊರತೆ ನೀಗಿಸಲು ಒಲವು ತೋರಿಸಿರುವ ಸರಕಾರವು, ಇತ್ತ ಬಹು ಬೇಡಿಕೆಯ ಮುದ್ರಣ ತಂತ್ರಜ್ಞಾನ ( printing technology)ದ ಹೆಚ್ಚಿನ ಕಲಿಕೆಗಾಗಿ ಪದವಿ ಕಾಲೇಜುಗಳನ್ನು ತೆರೆಯದಿರುವುದು ವಿಪರ್ಯಾಸವೇ ಸರಿ...!

ಮುದ್ರಣ ತಂತ್ರಜ್ಞಾನದ ಪದವಿ ತರಗತಿಯ ಆರಂಭದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಲ್ಲಿ ವಿಚಾರಿಸಿದರೆ ಹಾರಿಕೆಯ ಉತ್ತರ ಬರುತ್ತದೆ ಅಥವಾ ಮೇಲಧಿಕಾರಿಗಳಿಗೆ ಪತ್ರ ಬರೆದಿದ್ದೇವೆ. ಅಲ್ಲಿಂದ ಸ್ವೀಕೃತಿಯ ಪ್ರತ್ಯುತ್ತರ ಸಿಗುತ್ತಿಲ್ಲ ಎಂಬಿತ್ಯಾದಿ ಕಾರಣಗಳನ್ನು ನೀಡುತ್ತಾರೆ. ಈ ರೀತಿ ಮುದ್ರಣ ತಂತ್ರಜ್ಞಾನದ ಉನ್ನತ ವ್ಯಾಸಂಗದ ಬಗೆಗಿರುವ ಅಧಿಕಾರಿಗಳ ನಿರ್ಲಕ್ಷ್ಯವು ಮುಂದಿನ ದಿನಗಳಲ್ಲಿ ಹಾಗೂ ಈಗಾಗಲೇ ಮುದ್ರಣ ತಂತ್ರಜ್ಞಾನದ ಡಿಪ್ಲೋಮ ಕೋರ್ಸ್ ಮುಗಿಸಿರುವ ವಿದ್ಯಾರ್ಥಿಗಳಿಗೆ ಆಸಕ್ತಿ ಕಳೆದು ಹೋಗಿದೆ. ಯಾಕೆಂದರೆ ಪ್ರಿಂಟಿಂಗ್ ಕೋರ್ಸ್ ಓದಿರುವ ವಿದ್ಯಾರ್ಥಿಗಳಿಗೆ ಎಂಜಿನಿಯರಿಂಗ್ ಅಥವಾ ಮುದ್ರಣಕ್ಕೆ ಸಂಬಂಧಿಸಿದ ಬೇರೆ ಕೋರ್ಸ್‌ಗಳನ್ನು ಕಲಿಯಲು ಕಷ್ಟವಾಗುತ್ತಿದೆ.

ರಾಜ್ಯದಲ್ಲಿ ಈಗಾಗಲೇ ಎರಡು ಪಶು ವೈದ್ಯಕೀಯ ಕಾಲೇಜುಗಳಲ್ಲಿ ಪಶು ವೈದ್ಯಕೀಯ ಡಿಪ್ಲೋಮ ಕೋರ್ಸ್ ಪ್ರಾರಂಭಿಸಲು ಸಿದ್ಧತೆಗಳು ನಡೆಯುತ್ತಿವೆ. ಹಾಗೆಯೇ ಕನಿಷ್ಠಪಕ್ಷ ಒಂದೇ ಒಂದು ಕಾಲೇಜಿನಲ್ಲಿ ಮುದ್ರಣ ತಂತ್ರಜ್ಞಾನ ಪದವಿ ಕೋರ್ಸ್ ಪ್ರಾರಂಭಿಸಿದರೆ ಈ ಕ್ಷೇತ್ರದಲ್ಲಿ ಆಸಕ್ತಿ ಹೊಂದಿರುವ ಒಂದಿಷ್ಟು ವಿದ್ಯಾರ್ಥಿಗಳಿಗೆ ಪ್ರಯೋಜನವಾಗಬಹುದು. ಎಂಜಿನಿಯರ್‌ಗಳು ದೇಶದ ಅಡಿಗಲ್ಲು ಎಂದು ಹೇಳುವ ಸಂದರ್ಭದಲ್ಲಿ ಅದಕ್ಕೆ ಪೂರಕವಾಗಿರುವ ಎಲ್ಲಾ ಕ್ಷೇತ್ರದ ಬಗ್ಗೆ ಗಮನ ಹರಿಸಿದರೆ ಆ ಮಾತಿಗೆ ಒಂದು ಅರ್ಥ ಬರಬಹುದು. ಆ ಕ್ಷೇತ್ರವನ್ನು (ಮುದ್ರಣ ತಂತ್ರಜ್ಞಾನ) ನೆಚ್ಚಿಕೊಂಡಿರುವ ವಿದ್ಯಾರ್ಥಿಗಳು ಭವಿಷ್ಯವನ್ನು ಉಜ್ವಲಗೊಳಿಸಬಹುದು.

ರಾಕೇಶ್. ಎಸ್, ಯಲಹಂಕ ನ್ಯೂ ಟೌನ್
ಬೆಂಗಳೂರು

## ಐಎಫ್‌ಎಫ್‌ಗೆ ಅಭಿನಂದನೆಗಳು

ಅನಿವಾಸಿ ಭಾರತೀಯರ ಸಂಘಟನೆ ಇಂಡಿಯಾ ಫ್ರೆಟರ್ನಿಟಿ ಫಾರಂ(ಐಎಫ್‌ಎಫ್)ನ ಸಾಮಾಜಿಕ ಕಳಕಳಿ ನಿಜಕ್ಕೂ ಮೆಚ್ಚುವಂಥದ್ದು.

ಸಾಮಾಜಿಕ ಕಾರ್ಯಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಂಡು ಭಾರತೀಯರ ಮತ್ತು ಅನಿವಾಸಿ ಭಾರತೀಯರ ಮನಗೆದ್ದಿರುವ ಐಎಫ್‌ಎಫ್, ಇದೀಗ ಸುಲೈಮಾನ್‌ರವರ ಬಿಡುಗಡೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಸೌದಿ ಅರೇಬಿಯಾದ ಜೈಲಿನಲ್ಲಿ ಬಂಧಿತರಾಗಿದ್ದ ಸುಲೈಮಾನ್‌ರನ್ನು ಬಿಡುಗಡೆಗೊಳಿಸಲು ಐಎಫ್‌ಎಫ್ ಕಾನೂನು ಹೋರಾಟವನ್ನು ನಡೆಸುತ್ತಿತ್ತು ಎಂಬ ವಿಷಯ ಈ ಹಿಂದೆ ಪ್ರಸ್ತುತ ಪಾಕ್ಷಿಕ ಸೇರಿದಂತೆ ಹಲವು ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು.

ಇದೀಗ ಸುಲೈಮಾನ್‌ರವರು ಬಿಡುಗಡೆಯಾಗಿರುವ ಸುದ್ದಿ ಪ್ರಸ್ತುತ ಪಾಕ್ಷಿಕದಲ್ಲಿ ಓದಿ ತುಂಬಾ ಸಂತೋಷವಾಯಿತು. ಸುಲೈಮಾನ್‌ರವರ ಬಿಡುಗಡೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಐಎಫ್‌ಎಫ್ ಹಾಗೂ ಪಾಪ್ಯುಲರ್ ಫ್ರಂಟ್‌ನ ಸದಸ್ಯರಿಗೆ ಅಭಿನಂದನೆಗಳು.

ಸಾಹುಲ್ ಹಮೀದ್ ಎಂ.ಕೆ., ಉಪ್ಪಿನಂಗಡಿ

## ಲೇಖನ ಅರ್ಥಗರ್ಭಿತವಾಗಿತ್ತು

ಪ್ರಸ್ತುತ ಪಾಕ್ಷಿಕದ ಎಪ್ರಿಲ್ 15-30ರ ಸಂಚಿಕೆಯಲ್ಲಿ ಪ್ರಕಟವಾದ ''ನೆಲ್ಲಿ ಹತ್ಯಾಕಾಂಡ''ದಲ್ಲಿ ಅಮಾಯಕರು ಕ್ರೂರವಾಗಿ ಕೊಲ್ಲಲ್ಪಟ್ಟ ಬರಹವನ್ನು ಓದಿದಾಗ ಹೃದಯವು ಗದ್ಗದಿತವಾಗಿತ್ತು. ನೆಲ್ಲಿ ಹತ್ಯಾಕಾಂಡಕ್ಕೆ ಸಂಬಂಧಿಸಿ ಇಂತಹ ಬರಹಗಳು ಈವರೆಗೆ ಎಲ್ಲೂ ಓದಿರಲಿಲ್ಲ. ಈ ಬಗ್ಗೆ ಕೇಳಿರಲಿಲ್ಲ. ಹಾಗೆಯೇ ಅನೇಕ ಜನರಿಗೆ ಈ ವಿಷಯದ ಬಗ್ಗೆ ಅರಿವೇ ಇಲ್ಲ.

ಈ ಸುದ್ದಿಯು ನಿಜವಾಗಿಯೂ ಇಂದಿನ ತಲೆಮಾರಿಗೆ ತಿಳಿಸುವ ಜವಾಬ್ದಾರಿ ಮಾಧ್ಯಮದ ಮೇಲಿದೆ. ''ಮುಸ್ಲಿಂ ನಾಯಕತ್ವ''ದ ಬಗೆಗಿನ ಮಲ್ನಾಡ್ ಮೆಹಬೂಬ್‌ರವರ ಲೇಖನವು ಅರ್ಥಗರ್ಭಿತವಾಗಿತ್ತು. ಇಂದಿನ ಅತೀ ಪ್ರಾಮುಖ್ಯ ವಿಷಯ ಇದಾಗಿದ್ದರಿಂದ ಈ ಬಗ್ಗೆ ಧನಾತ್ಮಕ ಚರ್ಚೆಯ ಅಗತ್ಯವಿದೆ. ಇದು ಕಾಲದ ಬೇಡಿಕೆಯೂ ಮುಸ್ಲಿಮರ ಅಭಿವೃದ್ಧಿಯ ಸಂಕೇತವೂ ಆಗಿದೆ.

ಈ ಎರಡು ಪ್ರಮುಖ ಚರ್ಚಾ ವಿಷಯಗಳನ್ನು ಪ್ರಕಟಿಸಿದ ಪ್ರಸ್ತುತ ಪತ್ರಿಕೆಗೂ, ಲೇಖಕರಿಗೂ ತುಂಬು ಹೃದಯದ ಅಭಿನಂದನೆಗಳು.

ಅಬ್ದುಲ್ ಜಲೀಲ್, ನಂದಾವರ
ಎಸ್‌ಡಿಎಂ ಕಾಲೇಜು ಮಂಗಳೂರು

# ಇನ್ನು ಒಬಾಮ ಮಾತ್ರ...

ಅನೀಸ್ ಅಹ್ಮದ್, ಬೆಂಗಳೂರು



ಉಸಾಮಾ ಬಿನ್ ಲಾದೆನ್‌ನ ಸಾವು ವಿಶ್ವದ ಟಿ.ವಿ ಚಾನೆಲ್‌ಗಳು, ಪತ್ರಿಕೆಗಳು ಮತ್ತು ಇ-ಮಾಧ್ಯಮದಲ್ಲಿ ರಾರಾಜಿಸಿದವು. ಅಮೆರಿಕದ ನೇವಿ ಸೀಲ್ಸ್‌ನ 'ರಹಸ್ಯ ಕಾರ್ಯಾಚರಣೆ'ಯಲ್ಲಿ ಉಸಾಮಾ ಬಿನ್ ಲಾದೆನ್ ಹತನಾಗಿರುವುದನ್ನು ಲಕ್ಷಾಂತರ ಮಂದಿ ಖುಷಿಪಟ್ಟರು. ನಾಗರಿಕ ಜಗತ್ತಿನ ಶ್ರೇಷ್ಠ ವಿಜಯವೆಂದು ಇದನ್ನು ಮಾಧ್ಯಮಗಳು ಬಿಂಬಿಸಿದವು. ಮುಸ್ಲಿಮ್ ರಾಷ್ಟ್ರಗಳನ್ನೊಳಗೊಂಡಂತೆ ಹಲವು ದೇಶಗಳ ನಾಯಕರು ಈ ಸುದ್ದಿಯನ್ನು ಸ್ವಾಗತಿಸಿದರು. ಉಸಾಮಾ ಮತ್ತೊಮ್ಮೆ ವಿಷಯದ ಕೇಂದ್ರ ಬಿಂದುವಾದರು.

ಉಸಾಮಾ ಎಂಬ ಹೆಸರು ಭಯೋತ್ಪಾದನೆಯ ಸಂಕೇತವಾಗಿ ಬಿಂಬಿಸಲ್ಪಡುತ್ತದೆ. ಪಾಶ್ಚಿಮಾತ್ಯ ಮಾಧ್ಯಮಗಳು ಬಣ್ಣಿಸಿದಂತೆ ಜಗತ್ತು ಆತನನ್ನು ನೋಡುತ್ತದೆ. ಆತನ ಪ್ರಶ್ನಾರ್ಥಕ ಸಾವಿನ ಬಳಿಕ ನಾವು ಯಾತಕ್ಕಾಗಿ ಅಮೆರಿಕವನ್ನು ಹೀರೋಗಳ ಭೂಮಿಯಾಗಿ ಮತ್ತು ಅಮೆರಿಕ ವಿರೋಧಿಗಳನ್ನು ಭೂತವನ್ನಾಗಿ ತೋರಿಸಲಾಗುತ್ತದೆ ಎನ್ನುವ ಬಗ್ಗೆ ವಿಚಾರ ಮಾಡಿ ನೋಡಬೇಕಾಗಿದೆ. ಈ ದೃಷ್ಟಿಕೋನದಲ್ಲಿ ಚಿಂತಿಸುವಾಗ, ಖಂಡಿತವಾಗಿಯೂ ಉಸಾಮಾ ಬಿನ್ ಲಾದೆನ್ ಮತ್ತು ಅಮೆರಿಕ ಹಿತಾಸಕ್ತಿಯ ವಿರುದ್ಧ ಆತನ ಚಟುವಟಿಕೆಗಳನ್ನು ತಿಳಿದುಕೊಳ್ಳುವುದು ನಮ್ಮ ಕರ್ತವ್ಯವಾಗಿದೆ.

ಉಸಾಮಾ ಬಿನ್ ಲಾದೆನ್ 1957 ಮಾರ್ಚ್ 10ರಂದು ಸೌದಿ ಅರೇಬಿಯಾದ ಒಂದು ಶ್ರೀಮಂತ ಹಾಗೂ ಗೌರವಾನ್ವಿತ ಕುಟುಂಬದಲ್ಲಿ ಹುಟ್ಟಿದನು. ಆತನ ಪ್ರಾಥಮಿಕ ಶಿಕ್ಷಣವು ತುಂಬಾ ಸೆಕ್ಯುಲರ್ ಆಗಿತ್ತು ಮತ್ತು ವರದಿಗಳ ಪ್ರಕಾರ ಆತನು 1979ರಲ್ಲಿ ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಪದವಿ ಪಡೆದಿದ್ದನು. ಹಲವು ವರದಿಗಳ ಪ್ರಕಾರ ತನ್ನ ಪ್ರೌಢ ವಯಸ್ಸಿನಲ್ಲಿ ಆತ ತುಂಬಾ ಸಂಕೋಚ ಸ್ವಭಾವದವನಾಗಿದ್ದ ಮತ್ತು ಮೌನವಾಗಿರುತ್ತಿದ್ದ. ನಾವು ಯಾವುದೇ ಪ್ರಮುಖ ಕ್ರಿಮಿನಲ್‌ಗಳ ಜೀವನವನ್ನು ನೋಡುವಾಗ ಅವರು ತಮ್ಮ ಬಾಲ್ಯದಲ್ಲೇ ಅಥವಾ ತರುಣಾವಸ್ಥೆಯ ವೇಳೆ ಹಿಂಸಾ ಪ್ರವೃತ್ತಿಯನ್ನು ಮೈಗೂಡಿಸಿಕೊಂಡಿರುವುದು ಗಮನಿಸಬಹುದು. ಲಾದೆನ್‌ನ ಬಾಲ್ಯಾವಸ್ಥೆಯನ್ನು ನೋಡುವಾಗ ಆತನು ಸಂಕೋಚ ಸ್ವಭಾವದವನಾಗಿದ್ದ, ಯಾವುದೇ ಹಿಂಸಾ ಪ್ರವೃತ್ತಿ ಆತನಲ್ಲಿರಲಿಲ್ಲ ಮತ್ತು ಜಗತ್ತು ಅತ್ಯಂತ ಭಯಪಡುವಂತಾಗುವ ವ್ಯಕ್ತಿತ್ವವೇನೂ ಆತನಲ್ಲಿ ಕಂಡಿರಲಿಲ್ಲ. ಉಸಾಮಾನ ಈ ಎಲ್ಲಾ ಗುಣಗಳನ್ನು ಪರಗಣಿಸುವಾಗ ಆತ ಅಮೆರಿಕದ ನಂ.1 ಶತ್ರುವಾಗಿ ಹೇಗೆ ಪರಿವರ್ತಿತನಾದ? ಎಂಬ ಪ್ರಶ್ನೆಗೆ ಉತ್ತರವನ್ನು ನಾವು ಕಂಡುಕೊಳ್ಳಬೇಕಾಗಿದೆ.

ಅಮೆರಿಕ ನಿಯಂತ್ರಿತ ಮಾಧ್ಯಮಗಳಿಗೆ ನಾವು ಈ ಪ್ರಶ್ನೆಯನ್ನು ನಾವು ನಮ್ಮಲ್ಲೇ ಪ್ರಶ್ನಿಸಬೇಕಾಗಿರುವುದೇನೆಂದರೆ, ಒಬ್ಬ ವ್ಯಕ್ತಿಯ ಬಗ್ಗೆ ಆತನ ಶತ್ರುವಿನ ಮುಖವಾಣಿಯಂತಿರುವ ಮಾಧ್ಯಮಗಳು ಬಿಂಬಿಸುವುದನ್ನು ನಂಬುವುದು ಸರಿಯೇ? ಎಂದು. ನಮ್ಮ ಅಭಿಪ್ರಾಯಗಳು ಉಸಾಮಾನ ಶತ್ರುಗಳೊಂದಿಗೆ ಯಾವ ರೀತಿಯಲ್ಲಿ ಮೈತ್ರಿಯಾಗಿದೆ ಎಂಬ ಬಗ್ಗೆ ನಾಗರಿಕರು ಸ್ವಯಂದರ್ಶನ ಮಾಡಿಕೊಳ್ಳುವ ಅಗತ್ಯವಿದೆ. ಒಬ್ಬ ವ್ಯಕ್ತಿ ಅಥವಾ ಗುಂಪು ತನ್ನ ಶತ್ರುವನ್ನು ಯಾವಾಗಲೂ ಕೆಟ್ಟ ವ್ಯಕ್ತಿಯಾಗಿ ಬಿಂಬಿಸುವುದು ಸಹಜವೇ ಆಗಿದೆ. ಹಿಂದೆಯೂ ಹಾಗೂ ಈಗಲೂ ಇದಕ್ಕೆ ನಮಗೆ ಹಲವು ದೃಷ್ಟಾಂತಗಳಿವೆ. ಉದಾಹರಣೆಗೆ ಫಿಡೆಲ್ ಕ್ಯಾಸ್ಟ್ರೊ, ಚೆ ಗ್ವೆರಾ, ಅಯಾತುಲ್ಲಾ ಕೊಮೈನಿ ಮತ್ತು ಇನ್ನೂ ಹಲವರನ್ನು ಕೆಟ್ಟ ವ್ಯಕ್ತಿಗಳಾಗಿ ಬಿಂಬಿಸಲಾಗುತ್ತಿದೆ. ಅಮೆರಿಕ ಮತ್ತು ಅದರ ಸಾಮ್ರಾಜ್ಯಶಾಹಿ ಯೋಜನೆಗಳನ್ನು ವಿರೋಧಿಸಿರುವುದೊಂದೇ ಅವರನ್ನು ಈ ರೀತಿ ಬಿಂಬಿಸಲು ಕಾರಣ. ನಾಗರಿಕ ಜನರು ಎಂದು ಕರೆದುಕೊಳ್ಳುವ

> 1979ರಲ್ಲಿ ರಶ್ಯಾ ಮತ್ತು ಅಮೆರಿಕದ ನಡುವೆ ಶೀತಲ ಯುದ್ಧ ನಡೆಯುತ್ತಿರುವ ಕಾಲದಲ್ಲಿ ರಶ್ಯಾ ಪಡೆಗಳು ಅಫ್ಘಾನಿಸ್ತಾನದ ಮೇಲೆ ದಂಡೆತ್ತಿ ಹೋದವು. ತನ್ನ ವಿರೋಧಿ ಅಮೆರಿಕಾದಂತೇ ರಶ್ಯಾವೂ ಒಂದು ದೊಡ್ಡ ವಸಾಹತುಶಾಹಿ ಪುಂಡ ಎಂಬುದಾಗಿ ಈ ಯುದ್ಧವು ಸಾಬೀತುಪಡಿಸಿತು. ಕಮ್ಯುನಿಸ್ಟ್ ಸೋವಿಯತ್ ಪಡೆಯು ಅಫ್ಘಾನ್ ಜನರನ್ನು ಕೊಲ್ಲುವುದನ್ನು ಇಡೀ ಜಗತ್ತು ಕೇವಲ ಪ್ರೇಕ್ಷಕನಾಗಿ ವೀಕ್ಷಿಸುತ್ತಿತ್ತು. ಈ ಅವಧಿಯಲ್ಲಿ ಅಹ್ಮದ್ ಶಾ ಮಸೂದ್, ಗುಲ್ಬುದ್ದೀನ್ ಹಿಕ್ಮತ್ಯಾರ್ ಮತ್ತು ಬದ್ರುದ್ದೀನ್ ರಬ್ಬಾನಿಯಂತಹ ಅಫ್ಘಾನ್ ಪ್ರತಿರೋಧ ಯೋಧರ ಉದಯವಾಯಿತು. ಸೋವಿಯತ್ ರಶ್ಯಾವನ್ನು ಮಣಿಸುವುದಕ್ಕಾಗಿ ಅಮೆರಿಕ ಆಡಳಿತದ ನೇರ ಸೂಚನೆಯೊಂದಿಗೆ ಸಿಐಎ ಈ ಯುದ್ಧದಲ್ಲಿ ಹಸ್ತಕ್ಷೇಪ ಮಾಡಿತು. ಅಮೆರಿಕ ಮಾಧ್ಯಮಗಳು ಅಫ್ಘಾನ್ ಹೋರಾಟಗಾರರನ್ನು ಹೀರೋಗಳಾಗಿ ಬಿಂಬಿಸಿದವು ಮತ್ತು ಅವರಿಗೆ ಮುಜಾಹಿದೀನ್ ಎಂಬ ಹೆಸರನ್ನು ನೀಡಿತು.

*ರಶ್ಯಾದ ಕುಸಿತದೊಂದಿಗೆ ಮತ್ತು ಅಫ್ಘಾನ್ ಯುದ್ಧದ ಅಂತ್ಯದಲ್ಲಿ ಕೆಲವು ಮುಜಾಹಿದೀನ್‌ಗಳು ತಮ್ಮ ತವರಿಗೆ ಹಿಂದಿರುಗಿದರೆ, ಇನ್ನು ಕೆಲವರು ಚೆಚೆನ್ಯಾ ಮತ್ತು ಬೋಸ್ನಿಯಾದಲ್ಲಿ ಹೋರಾಟ ನಡೆಸುವುದಕ್ಕಾಗಿ ತೆರಳಿದರು. ಈ ಸಂದರ್ಭದಲ್ಲಿ ಉಸಾಮಾ ಬಿನ್ ಲಾದೆನ್ ತನ್ನ ಜಾಲವನ್ನು ಬಲಿಷ್ಠಗೊಳಿಸಲು ಆರಂಭಿಸಿದನು ಮತ್ತು ಅಫ್ಘಾನಿಸ್ತಾನದಂತಹ ಪರಿಸ್ಥಿತಿಯಿರುವ ಜಗತ್ತಿನ ವಿವಿಧ ಸ್ಥಳಗಳಿಗೆ ಜನರನ್ನು ಸಿದ್ಧಪಡಿಸಲು ಆರಂಭಿಸಿದನು. ಈ ಅವಧಿಯಲ್ಲಿಯೂ ಆತನು ಸಿಐಎಗೆ ಡಾರ್ಲಿಂಗ್ ಆಗಿದ್ದನು. 1989ರ ನಂತರ ತನ್ನ ಶೀತಲ ಸಮರದ ಶತ್ರು ರಶ್ಯಾದ ಕುಸಿತದೊಂದಿಗೆ ಅಮೆರಿಕ ತನ್ನ ಬಲವನ್ನು ಮುಸ್ಲಿಮ್ ಜಗತ್ತಿನತ್ತ ತಿರುಗಿಸಿತು. ವಿಶೇಷವಾಗಿ ಅದರ ಕರಿ ನೆರಳು ತೈಲ ಶ್ರೀಮಂತ ರಾಷ್ಟ್ರಗಳ ಮೇಲೆ ಬಿತ್ತು.*

ಕೇಳಿದರೆ, ಆತನು ವಹಾಬಿ ಚಿಂತನೆಯನ್ನು ಅನುಸರಿಸಿದನು ಮತ್ತು ಸಯ್ಯದ್ ಕುತುಬ್‌ರ ಬರಹಗಳು ಅದರಲ್ಲೂ ವಿಶೇಷವಾಗಿ ಮೈಲ್‌ಸ್ಟೋನ್‌ನಿಂದ ಪ್ರಭಾವಿತನಾಗಿದ್ದನು. ವಹ್ಹಾಬಿ ಅಥವಾ ಮೈಲ್ ಸ್ಟೋನ್‌ನ ಬಗ್ಗೆ ಹೆಚ್ಚೇನು ತಿಳಿದಿರದ ಜನರಿಗೆ ಈ ಕಾರಣಗಳು ಬಹಳ ದೊಡ್ಡದಾಗಿ ಕಾಣಬಹುದು. ಆದರೆ ಇವುಗಳನ್ನು ತಿಳಿದಿರುವವರಿಗೆ ಇದು ಹಾಸ್ಯಾಸ್ಪದವಾಗಿ ಮತ್ತು ತಮಾಷೆಯಾಗಿ ಕಾಣಬಹುದು. 19ನೆ ಶತಮಾನದ ಇಸ್ಲಾಮಿಕ್ ಸುಧಾರಕ ಶೈಖ್ ಮುಹಮ್ಮದ್ ಬಿನ್ ಅಬ್ದುಲ್ ವಹಾಬ್‌ನ ಬೋಧನೆಗಳನ್ನು ಅನುಸರಿಸುವ ಜನರನ್ನು ವಹಾಬ್‌ಗಳೆಂದು ಕರೆಯಲಾಗುತ್ತದೆ. ಅಬ್ದುಲ್ ವಹಾಬ್ ಸೌದಿ ಅರೇಬಿಯಾವನ್ನು ಸ್ಥಾಪಿಸಲು ಸೌದ್ ಕುಟುಂಬಕ್ಕೆ ನೆರವಾಗುವುದರಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಆತನ ಕಾಲದಲ್ಲಿ ರೂಢಿಯಲ್ಲಿದ್ದ ಚಿಂತನೆಗಳನ್ನು ಆತನು ವಿರೋಧಿಸಿದನು ಮತ್ತು ತನ್ನ ಚಿಂತನೆಗಳನ್ನು ಪ್ರಚಾರಪಡಿಸಿದನು. ವಹಾಬ್‌ರ ಚಿಂತನೆ ಆತನ ಸ್ವಂತದ್ದಾಗಿರಲಿಲ್ಲ. ಬದಲಾಗಿ ಅವರಿಗಿಂತ ಹಿಂದೆಯೇ ಹಲವು ಮಂದಿ ವಿದ್ವಾಂಸರು ಇಂತಹ ಚಿಂತನೆಗಳನ್ನು ಪ್ರತಿಪಾದಿಸಿದ್ದರು. ಇಸ್ಲಾಮಿಕ್ ಜಗತ್ತಿನಲ್ಲಿದ್ದ ಹಲವು ಚಿಂತನೆಗಳಲ್ಲಿ ಇದೂ ಒಂದು ಎಂದಷ್ಟೇ ನಾವು ತಿಳಿಯಬಹುದು. ಆದರೆ ಅವರ ಚಿಂತನೆಯು ಇತರರಿಗಿಂತ ಬಹಳ ವೇಗವಾಗಿ ಪ್ರಚಾರ ಪಡೆಯಿತು. ಅವರು ಸೌದ್ ಕುಟುಂಬದಿಂದ ರಾಜಕೀಯ ಬೆಂಬಲ ಪಡೆದಿರುವುದು ಇದಕ್ಕೆ ಕಾರಣವಾಗಿರಬಹುದು. ಅಧಿಕಾರದಲ್ಲಿರುವವರು ಒಪ್ಪಿದ ಯಾವುದೇ ಸಿದ್ಧಾಂತವೂ ಬಹಳ ವೇಗವಾಗಿ ಪ್ರಚಾರವಾಗುವುದು ಎಲ್ಲರಿಗೂ ತಿಳಿದಿರುವ ವಾಸ್ತವವಾಗಿದೆ. ಇದಕ್ಕೆ ಹಲವು ಉದಾಹರಣೆಗಳು ನಮಗೆ ಕಾಣ ಸಿಗುತ್ತವೆ. ಭಾರತದಲ್ಲಿ ಅಕ್ಬರ್ ಚಕ್ರವರ್ತಿಯ ದೀನ್-ಇ-ಇಲಾಹಿ ಅಥವಾ ರೋಮನ್ ಚಕ್ರವರ್ತಿಗಳು ಅನುಸರಿಸಿದ ಆರ್ಥಡಕ್ಸ್ ಕ್ರಿಶ್ಚಿಯಾನಿಟಿ ಇದಕ್ಕಿರುವ ನಿದರ್ಶನಗಳಾಗಿವೆ.

ವಹಾಬಿ ಚಿಂತನೆಯನ್ನು ಅನುಸರಿಸಿದವರಲ್ಲಿ ಉಸಾಮಾ ಒಬ್ಬನಾಗಿದ್ದ ಮತ್ತು ಭಯೋತ್ಪಾದನೆಯ ಸಂಕೇತವಾಗಲು ಇದು ಕಾರಣವಾಗಲು ಸಾಧ್ಯವೇ ಇಲ್ಲ. ಈಜಿಪ್ಟ್‌ನ ಇಸ್ಲಾಮಿಸ್ಟ್ ಚಿಂತಕ ಶಹೀದ್ ಸಯ್ಯದ್ ಕುತುಬ್‌ನಿಂದ ಉಸಾಮಾ ಪ್ರಭಾವಿತನಾಗಿದ್ದ ಎಂಬುದು ಇನ್ನೊಂದು ವಾದ. ಸಯ್ಯದ್ ಕುತುಬ್ ಈಜಿಪ್ಟ್‌ನ ಇಸ್ಲಾಮಿಕ್ ಚಳವಳಿ 'ಅಲ್ ಇಖ್ವಾನುಲ್ ಮುಸ್ಲಿಮೀನ್'ನ ಭಾಗವಾಗಿದ್ದರು. 'ಮೈಲ್‌ಸ್ಟೋನ್' ಪುಸ್ತಕವನ್ನು ಬರೆದಿರುವುದಕ್ಕಾಗಿ ಅವರನ್ನು ಈಜಿಪ್ಟ್‌ನ ಗಮಲ್ ಅಬ್ದುಲ್ ನಾಸಿರ್‌ನ ಅಧಿಕಾರಿಗಳು ಬಂಧಿಸಿ ಚಿತ್ರಹಿಂಸೆ ನೀಡಿ ನಂತರ ಹತ್ಯೆಗೈದರು. ಮೈಲ್‌ಸ್ಟೋನ್ ಪುಸ್ತಕದಲ್ಲಿ ಇರುವುದಾದರೂ ಏನು? ಸಯ್ಯದ್ ಕುತುಬ್ ತನ್ನ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಇತರ ಸಿದ್ಧಾಂತಗಳಾದ ಬಂಡವಾಳಶಾಹಿತ್ವ, ಕಮ್ಯುನಿಸಂ ಮತ್ತು ರಾಷ್ಟ್ರೀಯವಾದವನ್ನು ಇಸ್ಲಾಮ್‌ನೊಂದಿಗೆ ಹೋಲಿಕೆ ಮಾಡಿದ್ದಾರೆ. ಹಲವು ಅಂತಾರಾಷ್ಟ್ರೀಯ ಸಿದ್ಧಾಂತಗಳನ್ನು ಪುಸ್ತಕವು ವಿಮರ್ಶಿಸಿದೆ ಮತ್ತು ಅಂತಿಮವಾಗಿ ಎಲ್ಲಾ ಸಿದ್ಧಾಂತಗಳಿಗಿಂತಲೂ ಇಸ್ಲಾಮ್ ಉತ್ತಮವಾದುದು ಎಂಬ ಉಪಾಂತ್ಯಕ್ಕೆ ಬರುತ್ತದೆ. ಇದು ಪುಸ್ತಕವನ್ನು ಅಷ್ಟೊಂದು ಅಪಾಯಕಾರಿಯಾಗಿಸುತ್ತದೆಯೇ? ಕಮ್ಯುನಿಸಂಅನ್ನು ಭೂತವಾಗಿ ಕಲ್ಪಿಸಿ ಬಂಡವಾಳಶಾಹಿಗಳು ಬರೆದ ಪುಸ್ತಕಗಳಿಲ್ಲವೇ? ಆರ್ಥಡಕ್ಸ್ ಕಮ್ಯುನಿಸ್ಟ್ ಐಡಿಯಾಲಜಿಗಳು ಮತ್ತು ಬಂಡವಾಳ ಶಾಹಿತ್ವವನ್ನು ಟೀಕಿಸಿ ಮಾವೋವಾದಿಗಳು ಬರೆದ ಪುಸ್ತಕಗಳಿಲ್ಲವೇ? ಹೌದು ಇವೆ. ಇದು ಕೇವಲ ಹಲವು ಸಿದ್ಧಾಂತಗಳ ಬಗೆಗೆ ಒಬ್ಬನ ಅಭಿಪ್ರಾಯವಾಗಿದೆಯಷ್ಟೇ. ಸಯ್ಯದ್ ಕುತುಬ್‌ರ ಈ ಪುಸ್ತಕವು ಮುಸ್ಲಿಮರು, ಅದರಲ್ಲೂ ಅರಬ್ ಯುವಕರು ಹೆಚ್ಚಾಗಿ ಓದುತ್ತಾರೆ. ಸಯ್ಯದ್ ಕುತುಬ್‌ರ ಈ ಪುಸ್ತಕ ಒಬ್ಬ ಮನುಷ್ಯನನ್ನು ಭಯೋತ್ಪಾದಕನಾಗಿ ಪರಿವರ್ತಿಸುತ್ತದೆಯಾದರೆ ಅದನ್ನು ಹೆಚ್ಚು ಮಂದಿ ಖರೀದಿಸಲಾರರು ಎಂಬುದು ನನ್ನ ನಂಬಿಕೆ. ಉಸಾಮಾನ ಜೀವನವು ಬದಲಾಗಲು ಇದು ಕಾರಣವಲ್ಲ. ಬದಲಾಗಿ ಅದಕ್ಕೆ ಬೇರೆಯದೇ ಕಾರಣಗಳಿವೆ.

1979ರಲ್ಲಿ ರಶ್ಯಾ ಮತ್ತು ಅಮೆರಿಕದ ನಡುವೆ ಶೀತಲ ಯುದ್ಧ ನಡೆಯುತ್ತಿರುವ ಕಾಲದಲ್ಲಿ ರಶ್ಯಾ ಪಡೆಗಳು ಅಫ್ಘಾನಿಸ್ತಾನದ



ಮೇಲೆ ದಂಡೆತ್ತಿ ಹೋದವು. ತನ್ನ ವಿರೋಧಿ ಅಮೆರಿಕಾದಂತೇ ರಶ್ಯಾವೂ ಒಂದು ದೊಡ್ಡ ವಸಾಹತುಶಾಹಿ ಪುಂಡ ಎಂಬುದಾಗಿ ಈ ಯುದ್ಧವು ಸಾಬೀತುಪಡಿಸಿತು. ಕಮ್ಯುನಿಸ್ಟ್ ಸೋವಿಯತ್ ಪಡೆಯು ಅಫ್ಘಾನ್ ಜನರನ್ನು ಕೊಲ್ಲುವುದನ್ನು ಇಡೀ ಜಗತ್ತು ಕೇವಲ ಪ್ರೇಕ್ಷಕನಾಗಿ ವೀಕ್ಷಿಸುತ್ತಿತ್ತು. ಈ ಅವಧಿಯಲ್ಲಿ ಅಹ್ಮದ್ ಶಾ ಮಸೂದ್, ಗುಲ್ಬುದ್ದೀನ್ ಹಿಕ್ಮತ್ಯಾರ್ ಮತ್ತು ಬದ್ರುದ್ದೀನ್ ರಬ್ಬಾನಿಯಂತಹ ಅಫ್ಘಾನ್ ಪ್ರತಿರೋಧ ಯೋಧರ ಉದಯವಾಯಿತು. ಸೋವಿಯತ್ ರಶ್ಯಾವನ್ನು ಮಣಿಸುವುದಕ್ಕಾಗಿ ಅಮೆರಿಕ ಆಡಳಿತದ ನೇರ ಸೂಚನೆಯೊಂದಿಗೆ ಸಿಐಎ ಈ ಯುದ್ಧದಲ್ಲಿ ಹಸ್ತಕ್ಷೇಪ ಮಾಡಿತು. ಅಮೆರಿಕ ಮಾಧ್ಯಮಗಳು ಅಫ್ಘಾನ್ ಹೋರಾಟಗಾರರನ್ನು ಹೀರೊಗಳಾಗಿ ಬಿಂಬಿಸಿದವು ಮತ್ತು ಅವರಿಗೆ ಮುಜಾಹಿದೀನ್ ಎಂಬ ಹೆಸರನ್ನು ನೀಡಿತು. ಚಾರ್ಲಿಯಂತಹ ಅಮೆರಿಕದ ಹಲವು ಸೆನೆಟರ್‌ಗಳು ಮುಜಾಹಿದೀನ್‌ಗಳನ್ನು ನೇರವಾಗಿ ಬೆಂಬಲಿಸಿದರು ಮತ್ತು ಮುಜಾಹಿದೀನ್‌ಗಳಿಗೆ ಹಣಕಾಸಿನ ಸಹಾಯ ಮಾಡುವುದರಲ್ಲಿ ಪ್ರಮುಖವಾಗಿದ್ದರು. ಮುಜಾಹಿದೀನ್‌ಗಳ ಸಾಹಸವನ್ನು ಕೊಂಡಾಡಿ ಹಾಲಿವುಡ್ ಕೂಡ ಸಿನಿಮಾಗಳನ್ನು ಹೊರ ತಂದಿತು. ಆರಂಭದಲ್ಲಿ ಅಫ್ಘಾನ್ ಯುದ್ಧದಲ್ಲಿ ಅಫ್ಘಾನಿಗರು ಮೇಲುಗೈ ಸಾಧಿಸಿದರು.ಆದರೆ ಮಧ್ಯ ಹಂತದಲ್ಲಿ ಮುಸ್ಲಿಮ್ ಜಗತ್ತು ಅಫ್ಘಾನ್ ಮುಜಾಹಿದೀನ್‌ಗಳ ಕರೆಗೆ ಓಗೊಟ್ಟಿತು ಮತ್ತು ಅಫ್ಘಾನಿಸ್ತಾನವನ್ನು ಪ್ರವೇಶಿಸಿತು. ಹಲವು ಶತಮಾನಗಳ ನಂತರ ಮೊದಲ ಬಾರಿಗೆ ಹಲವು ರಾಷ್ಟ್ರೀಯತೆ, ಜಾತಿ, ದೇಶ ಮತ್ತು ಪ್ರದೇಶಗಳ ಮುಸ್ಲಿಮರು ಒಂದೇ ವೇದಿಕೆಯಡಿಯಲ್ಲಿ ಒಟ್ಟು ಸೇರಿ ಒಂದೇ ಸೇನೆಯ ವಿರುದ್ಧ ಯುದ್ಧ ನಡೆಸಿದರು. ಇದು ಮುಸ್ಲಿಮ್ ಜಗತ್ತು ಮರೆತೇ ಬಿಟ್ಟಿದ್ದ ನಿಜವಾದ ಜಿಹಾದ್ ಆಗಿತ್ತು. ಉಸಾಮಾ ಬಿನ್ ಲಾದೆನ್, ಐಮನ್ ಅಲ್ ಝುವಾಹಿರಿ, ಕಮಾಂಡರ್ ಇಬ್ನುಲ್ ಖತ್ತಾಬ್ ಮತ್ತು ಇಮಾಮ್ ತಮೀಮ್‌ರಂತಹ ಅಫ್ಘಾನೇತರ ಹೋರಾಟಗಾರರು ಈ ಸಂದರ್ಭದಲ್ಲಿ ನಮಗೆ ಕಾಣಸಿಗುತ್ತಾರೆ ಮತ್ತು ನಂತರ ಇವರನ್ನು ಅಫ್ಘಾನಿಸ್ತಾನ ಪ್ರವೇಶಿಸಿದ ಭಯೋತ್ಪಾದಕರಾಗಿ ಬಿಂಬಿಸಲಾಗುತ್ತದೆ.

ಸೌದಿ ಅರೇಬಿಯಾ ಅಫ್ಘಾನ್ ಯುದ್ಧಕ್ಕೆ ಪ್ರಮುಖವಾಗಿ ಹಣಕಾಸಿನ ನೆರವು ನೀಡಿತ್ತು. ವರದಿಗಳ ಪ್ರಕಾರ ಅಮೆರಿಕ ಸುಮಾರು 1 ಬಿಲಿಯನ್ ಡಾಲರ್ ಹಣವನ್ನು ಅಫ್ಘಾನ್ ಯುದ್ಧಕ್ಕಾಗಿ ಸಂಗ್ರಹಿಸಿತ್ತು ಮತ್ತು ಇದರಲ್ಲಿ 500 ಮಿಲಿಯನ್ ಡಾಲರ್‌ಗಳು ಸೌದಿಯಿಂದ ಬಂದಿತ್ತು. ಅಮೆರಿಕ ಉತ್ಪಾದಿತ ಶಸ್ತ್ರಾಸ್ತ್ರಗಳನ್ನು ಸಾಗಿಸುವುದಕ್ಕಾಗಿ ಈಜಿಪ್ಟ್ ಬೇಹುಗಾರಿಕಾ ಸಂಸ್ಥೆಗಳ ಜಾಲವನ್ನು ಬಳಸಲಾಗಿತ್ತು. ಸೌದಿ ಮತ್ತು ಈಜಿಪ್ಟ್‌ನಂತಹ ಅರಬ್ ರಾಷ್ಟ್ರಗಳು ಯುದ್ಧದಲ್ಲಿ ಪರೋಕ್ಷವಾಗಿ ನಿರ್ಣಾಯಕ ಪಾತ್ರ ವಹಿಸುತ್ತಿರುವಾಗ, ಅಫ್ಘಾನ್ ಯುದ್ಧದಲ್ಲಿ ಅರಬ್ ಮುಜಾಹಿದೀನ್‌ಗಳ ಪಾತ್ರವೂ ನಿರ್ಣಾಯಕವಾಯಿತು ಮತ್ತು ಉಸಾಮಾ ಬಿನ್ ಲಾದೆನ್ ಈ ಅರಬ್ ತಂಡದ ಪ್ರಮುಖ ಪಾತ್ರವಾಗಿದ್ದರು. ಹಣ ತರುವುದಕ್ಕೆ, ಆಯುಧಗಳನ್ನು ಮತ್ತು ಮುಜಾಹಿದೀನ್‌ಗಳನ್ನು

*ಹಲವು ರಾಷ್ಟ್ರಗಳ ಮುಜಾಹಿದೀನ್‌ಗಳ ಜಾಲಗಳ ಪರಿಣಾಮಕಾರಿ ಸಂಯೋಜನೆಗಾಗಿ ಸಿಐಎ ಉಸಾಮಾ ಬಿನ್ ಲಾದೆನ್‌ಗೆ ನೆರವಾಗಿತ್ತು. ಸಿಐಎಯ ಈ ಪ್ರಯತ್ನವು ಫಲಕಾರಿಯಾಯಿತು ಮತ್ತು ಜಲಾಲಾಬಾದ್ ಯುದ್ಧದಲ್ಲಿ ಜಯ ಗಳಿಸುವುದರಲ್ಲಿ ಅರಬ್ ಮುಜಾಹಿದೀನ್‌ಗಳು ಪ್ರಮುಖ ಪಾತ್ರವಹಿಸಿದರು. ಈ ಯುದ್ಧವನ್ನು ಸೋವಿಯತ್ ರಶ್ಯಾದ ಕುಸಿತದ ಆರಂಭವೆಂದೂ ಪರಿಗಣಿಸಲಾಗುತ್ತದೆ. ಜಲಾಲಾಬಾದ್ ಯುದ್ಧದ ನಂತರ ಸೋವಿಯತ್ ಪಡೆಗಳಿಗೆ ಸಂಪೂರ್ಣ ಹಿನ್ನಡೆಯಾಯಿತು ಮತ್ತು ಅಂತಿಮವಾಗಿ 1989ರಲ್ಲಿ ಸೋವಿಯತ್ ಪಡೆಗಳು ಅಫ್ಘಾನಿಸ್ತಾನದಿಂದ ಹಿಂದಿರುಗಿದವು. ಇದು 10 ವರ್ಷಗಳ ಹಿಂದೆ ಕಲ್ಪಿಸಲೂ ಸಾಧ್ಯವಾಗದ್ದಾಗಿದೆ. ತಿನ್ನಲು ಸರಿಯಾದ ಆಹಾರವನ್ನು ಹೊಂದಿರದ ಜನರಿಂದ ಬಲಿಷ್ಠ ರಶ್ಯಾ ಶಿಕ್ಷಿಸಲ್ಪಟ್ಟಿತು ಮತ್ತು ಸೋಲುಂಡಿತು. ಅಫ್ಘಾನಿಸ್ತಾನದಲ್ಲಿನ ಸೋಲು ಸೋವಿಯತ್ ರಶ್ಯಾದ ಕುಸಿತಕ್ಕೆ ಪ್ರಮುಖ ಕಾರಣವಾಯಿತು.*



ಹಿಂದಿರುಗಿದರೆ, ಇನ್ನು ಕೆಲವರು ಚೆಚೆನ್ಯಾ ಮತ್ತು ಬೋಸ್ನಿಯಾದಲ್ಲಿ ಹೋರಾಟ ನಡೆಸುವುದಕ್ಕಾಗಿ ತೆರಳಿದರು. ಈ ಸಂದರ್ಭದಲ್ಲಿ ಉಸಾಮಾ ಬಿನ್ ಲಾದೆನ್ ತನ್ನ ಜಾಲವನ್ನು ಬಲಿಷ್ಠಗೊಳಿಸಲು ಆರಂಭಿಸಿದನು ಮತ್ತು ಅಫ್ಘಾನಿಸ್ತಾನದಂತಹ ಪರಿಸ್ಥಿತಿಯಿರುವ ಜಗತ್ತಿನ ವಿವಿಧ ಸ್ಥಳಗಳಿಗೆ ಜನರನ್ನು ಸಿದ್ಧಪಡಿಸಲು ಆರಂಭಿಸಿದನು. ಈ ಅವಧಿಯಲ್ಲಿಯೂ ಆತನು ಸಿಐಎಗೆ ಡಾರ್ಲಿಂಗ್ ಆಗಿದ್ದನು. 1989ರ ನಂತರ ತನ್ನ ಶೀತಲ ಸಮರದ ಶತ್ರು ರಶ್ಯಾದ ಕುಸಿತದೊಂದಿಗೆ ಅಮೆರಿಕ ತನ್ನ ಬಲವನ್ನು ಮುಸ್ಲಿಮ್ ಜಗತ್ತಿನತ್ತ ತಿರುಗಿಸಿತು. ವಿಶೇಷವಾಗಿ ಅದರ ಕರಿ ನೆರಳು ತೈಲ ಶ್ರೀಮಂತ ರಾಷ್ಟ್ರಗಳ ಮೇಲೆ ಬಿತ್ತು. 1991ರಲ್ಲಿ ಅಮೆರಿಕ ಮತ್ತು ಅದರ ಮಿತ್ರ ರಾಷ್ಟ್ರಗಳು ಇರಾಕ್‌ನ ಮೇಲೆ ದಂಡೆತ್ತಿ ಹೋಯಿತು ಮತ್ತು ಸಾವಿರಾರು ಅಮಾಯಕ ನಾಗರಿಕರನ್ನು ಕೊಂದು ಹಾಕಿತು. ಮುಸ್ಲಿಮರು ಆಕ್ರಮಣಕ್ಕೊಳಗಾಗುತ್ತಿದ್ದಾರೆನ್ನುವ ಒಂದೇ ಕಾರಣಕ್ಕಾಗಿ ಅಫ್ಘಾನಿಸ್ತಾನ ಮತ್ತು ಬೋಸ್ನಿಯಾಕ್ಕೆ ಹೋಗಿದ್ದ ಅಂತಾರಾಷ್ಟ್ರೀಯ ಮುಜಾಹಿದ್‌ಗಳು ಇರಾಕ್ ದಮನವನ್ನು ಕಂಡರು. ಅದು ಮುಸ್ಲಿಮ್ ಜಗತ್ತಿನ ಎದೆಯ ಮೇಲೆ ನಡೆಸಿದ ನೇರ ದಾಳಿಯಾಗಿತ್ತು.

ತನ್ನದೇ ಜನರ ವಿರುದ್ಧ ಯುದ್ಧಕ್ಕೆ ಅಮೆರಿಕದ ಕೈಗೊಂಬೆಗಳಾದ ಅರಬ್ ನಾಯಕರ ಬೆಂಬಲವು ಮುಸ್ಲಿಮ್ ಮುಜಾಹಿದೀನ್‌ಗಳಿಗೆ ವಿಶೇಷವಾಗಿ ಅರಬ್ಬರಲ್ಲಿ ಒಂದು ರೀತಿಯ ವಂಚನೆಗೊಳಗಾದ ಭಾವನೆಯನ್ನು ಮೂಡಿಸಿತು. ಅರಬ್ ದ್ವೀಪದಲ್ಲಿ ಸೈನಿಕ ನೆಲೆಯನ್ನು ತೆರೆಯಲು ಅನುಮತಿಸಲಾಯಿತು ಮತ್ತು ಇದು ಪ್ರವಾದಿ ಮುಹಮ್ಮದ್ (ಸ.ಅ)ರ ವಿರುದ್ಧವಾಗಿತ್ತು. ಅರಬ್ ದ್ವೀಪದಲ್ಲಿ ಮುಸ್ಲಿಮೇತರರು ತಮ್ಮ ಪಾದವನ್ನು ಗಟ್ಟಿಗೊಳಿಸುವುದನ್ನು ಅನುಮತಿಸಲಾಗುತ್ತದೆ ಎಂಬ 1400 ವರ್ಷಗಳ ಹಿಂದೆ ಮುಹಮ್ಮದ್ (ಸ.ಅ) ನೀಡಿದ ಸೂಚನೆಯು ಇಲ್ಲಿ ನಿಜವಾಗಿತ್ತು. ಅಮೆರಿಕ ವಿರುದ್ಧ ಉಸಾಮಾ ಬಿನ್ ಲಾದೆನ್ ಮತ್ತು ಇತರ ಮುಜಾಹಿದೀನ್‌ಗಳು ಹೊಸ ಯುದ್ಧವನ್ನು ಆರಂಭಿಸಲು ಇದು ಕಾರಣವಾಯಿತು.

9/11 ಅವಳಿ ಕಟ್ಟಡಗಳ ಮೇಲೆ ನಡೆದ ದಾಳಿಯೊಂದಿಗೆ ಉಸಾಮಾ ಬಿನ್ ಲಾದೆನ್ ಮನೆ ಮಾತಾದ. 9/11 ದಾಳಿಗೆ ಬುಶ್ ಆಡಳಿತವು ಉಸಾಮಾನನ್ನು ಆಕ್ಷೇಪಿಸುತ್ತಾ ಬಂದಿತು. ಆದರೆ 9/11 ದಾಳಿಯನ್ನು ಉಸಾಮಾ ಅಥವಾ ಆತನ ಜನ ಮಾಡಿದ್ದಾರೆಂಬುದನ್ನು ಸಾಬೀತುಪಡಿಸುವ ಮಹತ್ವದ ಸಾಕ್ಷಗಳನ್ನು

ನೇಮಿಸುವುದರಲ್ಲಿ ಅರಬ್ ದೇಶಗಳೊಂದಿಗೆ ಉಸಾಮಾ ಬಿನ್ ಲಾದೆನ್ ಸಂಯೋಜಕನಾಗಿ ಪ್ರಮುಖ ಪಾತ್ರವಹಿಸಿದ್ದನು. ಹಲವು ವರದಿಗಳ ಪ್ರಕಾರ ಉಸಾಮಾ ಬಿನ್ ಲಾದೆನ್ ಸಿಐಎಯ ನಿರೂಪಣೆಯೊಂದಿಗೆ ಕೆಲಸ ಮಾಡುತ್ತಿದ್ದನು. ಯುದ್ಧಕ್ಕೆ ಪೂರ್ವಭಾವಿಯಾಗಿ ಮುಜಾಹಿದೀನ್‌ಗಳಿಗೆ ತರಬೇತಿ ನೀಡಿದ ಸಿಐಎಯ ವಿಶೇಷ ತಂಡವು ಉಸಾಮಾ ಬಿನ್ ಲಾದೆನ್‌ನೊಂದಿಗೆ ಹತ್ತಿರದ ನಂಟನ್ನು ಹೊಂದಿತ್ತು. ಹಲವು ರಾಷ್ಟ್ರಗಳ ಮುಜಾಹಿದೀನ್‌ಗಳ ಜಾಲಗಳ ಪರಿಣಾಮಕಾರಿ ಸಂಯೋಜನೆಗಾಗಿ ಸಿಐಎ ಉಸಾಮಾ ಬಿನ್ ಲಾದೆನ್‌ಗೆ ನೆರವಾಗಿತ್ತು. ಸಿಐಎಯ ಈ ಪ್ರಯತ್ನವು ಫಲಕಾರಿಯಾಯಿತು ಮತ್ತು ಜಲಾಲಾಬಾದ್ ಯುದ್ಧದಲ್ಲಿ ಜಯ ಗಳಿಸುವುದರಲ್ಲಿ ಅರಬ್ ಮುಜಾಹಿದೀನ್‌ಗಳು ಪ್ರಮುಖ ಪಾತ್ರವಹಿಸಿದರು. ಈ ಯುದ್ಧವನ್ನು ಸೋವಿಯತ್ ರಶ್ಯಾದ ಕುಸಿತದ ಆರಂಭವೆಂದೂ ಪರಿಗಣಿಸಲಾಗುತ್ತದೆ. ಜಲಾಲಾಬಾದ್ ಯುದ್ಧದ ನಂತರ ಸೋವಿಯತ್ ಪಡೆಗಳಿಗೆ ಸಂಪೂರ್ಣ ಹಿನ್ನಡೆಯಾಯಿತು ಮತ್ತು ಅಂತಿಮವಾಗಿ 1989ರಲ್ಲಿ ಸೋವಿಯತ್ ಪಡೆಗಳು ಅಫ್ಘಾನಿಸ್ತಾನದಿಂದ ಹಿಂದಿರುಗಿದವು. ಇದು 10 ವರ್ಷಗಳ ಹಿಂದೆ ಕಲ್ಪಿಸಲೂ ಸಾಧ್ಯವಾಗದ್ದಾಗಿದೆ. ತಿನ್ನಲು ಸರಿಯಾದ ಆಹಾರವನ್ನು ಹೊಂದಿರದ ಜನರಿಂದ ಬಲಿಷ್ಠ ರಶ್ಯಾ ಶಿಕ್ಷಿಸಲ್ಪಟ್ಟಿತು ಮತ್ತು ಸೋಲುಂಡಿತು. ಅಫ್ಘಾನಿಸ್ತಾನದಲ್ಲಿನ ಸೋಲು ಸೋವಿಯತ್ ರಶ್ಯಾದ ಕುಸಿತಕ್ಕೆ ಪ್ರಮುಖ ಕಾರಣವಾಯಿತು.

ರಶ್ಯಾದ ಕುಸಿತದೊಂದಿಗೆ ಮತ್ತು ಅಫ್ಘಾನ್ ಯುದ್ಧದ ಅಂತ್ಯದಲ್ಲಿ ಕೆಲವು ಮುಜಾಹಿದೀನ್‌ಗಳು ತಮ್ಮ ತವರಿಗೆ

ಒದಗಿಸಲು ಅದು ವಿಫಲವಾಯಿತು. 9/11 ದಾಳಿಯ ಬಗ್ಗೆ ಹಲವು ಸಂಚು ಸಿದ್ಧಾಂತಗಳಿವೆ ಮತ್ತು ಇದನ್ನು ಯಾರು ನಡೆಸಿದ್ದಾರೆಂಬ ಉಪಾಂತ್ಯಕ್ಕೆ ಬರಲು ಇದುವರೆಗೆ ಯಾವುದೇ ಪ್ರಜ್ಞಾವಂತ ಮನಸ್ಸಿಗೆ ಸಾಧ್ಯವಾಗಿಲ್ಲ. 9/11 ದಾಳಿಯು ಅಫ್ಘಾನ್ ಮೇಲೆ ದಾಳಿ ನಡೆಸಲು ಬುಶ್ ಸೇನೆಗೆ ಉತ್ತಮ ಅವಕಾಶವನ್ನುಂಟುಮಾಡಿತು. ದಾಳಿಯಲ್ಲಿ ಆತನು ಭಾಗಿಯಾಗಿರುವುದಕ್ಕೆ ಸ್ಪಷ್ಟ ಸಾಕ್ಷ್ಯಗಳು ನೀಡಿದರೆ ಆತನನ್ನು ಅಮೆರಿಕಕ್ಕೆ ಹಸ್ತಾಂತರಿಸುವ ಪ್ರಸ್ತಾಪವನ್ನು ತಾಲಿಬಾನ್ ಅಂದು ಇಟ್ಟಿತ್ತು.

ಅಫ್ಘಾನಿಸ್ತಾನದ ಮೇಲೆ ಅಮೆರಿಕ ಯುದ್ಧದ ಉದ್ದೇಶ ಉಸಾಮಾನನ್ನು ಬಂಧಿಸುವುದು ಅಥವಾ ಕೊಲ್ಲುವುದಾಗಿತ್ತು. ಆದರೆ ಇದು ನಡೆಯಲೇ ಇಲ್ಲ. ಬದಲಾಗಿ ಅಮೆರಿಕ ಲಕ್ಷಾಂತರ ಅಮಾಯಕ ನಾಗರಿಕರನ್ನು ಕೊಂದು ಹಾಕಿತು, ಸಾವಿರಾರು ಮಂದಿ ಅಫ್ಘಾನಿಗಳನ್ನು ಅಬೂ ಗುರೈಬ್ ಮತ್ತು ಗ್ವಾಂಟನಾಮೊ ಜೈಲುಗಳಲ್ಲಿ ಅಮಾನವೀಯ ರೀತಿಯಲ್ಲಿ ಬಂಧಿಸಿಟ್ಟಿತು. ಅಂತಿಮವಾಗಿ ತನ್ನ ಕೈಗೊಂಬೆ ಹಮೀದ್ ಖರ್ಝಾಯಿ ಸರಕಾರವನ್ನು ಸ್ಥಾಪಿಸಿತು. ಆದರೆ ಈಗಲೂ ಉಳಿದಿರುವ ಪ್ರಶ್ನೆಯೆಂದರೆ ಉಸಾಮಾ ಬಿನ್ ಲಾದೆನ್‌ಗೆ ಏನಾಯಿತು? ಆತ ಎಲ್ಲಿ ನಾಪತ್ತೆಯಾದನು? ಇಡೀ ತಾಲಿಬಾನ್ ಅಫ್ಘಾನಿಸ್ತಾನದ ಭೂಪಟದಿಂದ ಹೋಗಿರುವಾಗ, ಇಡೀ ದೇಶವು ನಿರಂತರ ಬಾಂಬ್ ದಾಳಿಗೊಳಗಾಗಿರುವಾಗ, ಇಡೀ ಸರಕಾರವನ್ನೇ ಬದಲಾಯಿಸಲು ಸಾಧ್ಯವಾಗಿರುವಾಗ, ಇಡೀ ದೇಶವನ್ನೇ ಅಮೆರಿಕದ ಮಿಲಿಟರಿ ಶಿಬಿರವಾಗಿ ಪರಿವರ್ತಿಸಲು ಸಾಧ್ಯವಾಗಿರುವಾಗ, ಉಸಾಮಾನನ್ನು ಕೊಲ್ಲಲು ಅಥವಾ ಬಂಧಿಸಲು ಸಾಧ್ಯವಾಗಿಲ್ಲವೇಕೆ?

ಇದಕ್ಕಿರುವ ಉತ್ತರ ತುಂಬಾ ಸರಳವಾದುದು. ಅಫ್ಘಾನ್ ಯುದ್ಧದಲ್ಲಿ ಉಸಾಮಾ ಬಂಧಿಸಲ್ಪಡುವುದು ಅಥವಾ ಹತ್ಯೆಗಯ್ಯಲ್ಪಡುವುದು ಸಾಧ್ಯವೇ ಇಲ್ಲ. ಯಾಕೆಂದರೆ ಆತ ಅಮೆರಿಕ ಸೇನೆಯು ಅಫ್ಘಾನ್ ಮೇಲೆ ದಾಳಿ ನಡೆಸುವ ಮೊದಲೇ ಸಾಮಾನ್ಯ ಸಾವನ್ನಪ್ಪಿದ್ದನು. ಇದು ತುಂಬಾ ಅಪರಿಚಿತವಾಗಿ ಕಾಣಬಹುದು. ಆದರೆ ಇದನ್ನು ಸಾಬೀತುಪಡಿಸುವ ಹಲವು ಅಂಶಗಳು ನಮ್ಮ ಮುಂದಿವೆ. ಡೇವಿಡ್ ರೇ ಗ್ರಿಫಿನ್ ಬರೆದ ಹಲವು ಪುಸ್ತಕಗಳು ಇದನ್ನು ಸಾಬೀತುಪಡಿಸಲು ಇರುವ ಹಲವು ಪುರಾವೆಗಳಾಗಿವೆ. ಉದಾಹರಣೆಗೆ 'ದಿ ನ್ಯೂ ಪಿಯರ್ಲ್ ಹಾರ್ಬರ್'', ''ದಿ 9/11 ಕಮಿಶನ್ ರಿಪೋರ್ಟ್'', ''9/11 ಆ್ಯಂಡ್ ಅಮೆರಿಕನ್ ಎಂಪೈರ್'', ''9/11 ಕಾಂಟ್ರಾಡಿಕ್ಷನ್ಸ್'', ''ಮಿಸ್ಟೀರಿಯಸ್ ಕೊಲ್ಯಾಪ್ಸ್ ಆಫ್ ವರ್ಲ್ಡ್ ಟ್ರೇಡ್ ಸೆಂಟರ್ 7'' ಮತ್ತು ''ಉಸಾಮಾ ಬಿನ್ ಲಾದೆನ್; ಡೆಡ್ ಆರ್ ಅಲೈವ್?''.

2001ರ ಜುಲೈ-ಸೆಪ್ಟಂಬರ್ ವೇಳೆಗೆ ಉಸಾಮಾ ಬಿನ್ ಲಾದೆನ್ ತೀವ್ರ ಕಿಡ್ನಿ ಕಾಯಿಲೆಯಲ್ಲಿ ಬಳಲುತ್ತಿದ್ದ ಮತ್ತು ಪಾಕಿಸ್ತಾನದ ರಾವಲ್ಪಿಂಡಿಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಎಂಬ ಖಚಿತ ವರದಿಗಳಿವೆ. 2001ರ ಡಿಸೆಂಬರ್ ನಂತರ ಉಸಾಮಾ ಬಿನ್ ಲಾದೆನ್‌ನಿಂದ ಬರುತ್ತಿದ್ದ ಸಂದೇಶಗಳು ಸಂಪೂರ್ಣವಾಗಿ ನಿಂತು ಹೋಯಿತು. ಪಾಕಿಸ್ತಾನದ ಪ್ರಮುಖ ದಿನಪತ್ರಿಕೆಯೊಂದರ ಪ್ರಕಾರ 2002ರ ಜುಲೈಯಲ್ಲಿ ಪಾಕಿಸ್ತಾನದ ಅಧಿಕಾರಿಗಳು ಉಸಾಮಾನ ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದರು. 2002ರ ಜುಲೈಯಲ್ಲಿ ಸಿಎನ್‌ಎನ್ ''ಆ ವರ್ಷದ ಫೆಬ್ರವರಿಯಲ್ಲಿ ಉಸಾಮಾ ಬಿನ್ ಲಾದೆನ್‌ನ ಅಂಗರಕ್ಷಕರನ್ನು ಬಂಧಿಸಲಾಗಿದೆ. ಅಂಗರಕ್ಷಕರನ್ನು ಹಿಡಿಯಲಾಗಿದೆಯೆಂದರೆ ವಿಶ್ವದ ಮೋಸ್ಟ್ ವಾಂಟೆಡ್ ಪರ್ಸನ್ ಸಾವನ್ನಪ್ಪಿದ್ದಾನೆ ಎಂಬುದು ಅರ್ಥವಾಗಿದೆ ಎಂದು ಮೂಲಗಳು ತಿಳಿಸಿರುವುದಾಗಿ''ವರದಿ ಮಾಡಿತ್ತು. ಆತನ ಸಾವನ್ನು ಖಚಿತಪಡಿಸಿರುವವರಲ್ಲಿ ಪ್ರಮುಖರೆಂದರೆ; ಪಾಕಿಸ್ತಾನದ ಅಧ್ಯಕ್ಷ ಮುಶರ್ರಫ್, ಎಫ್‌ಬಿಐನ ಕೌಂಟರ್ ಟೆರರಿಸಮ್‌ನ ಮುಖ್ಯಸ್ಥ ಡೇಲ್ ವಾಟ್ಸನ್, ಅಫ್ಘಾನಿಸ್ತಾನದ ಅಧ್ಯಕ್ಷ ಕರ್ಝಾಯಿ. ಇಸ್ರೇಲ್‌ನ ಬೇಹುಗಾರಿಕಾ

28ನೇ ಪುಟಕ್ಕೆ

ಈಗ ಇನ್ನೊಂದು ಪ್ರಶ್ನೆ ಏಳುವುದೇನೆಂದರೆ ಉಸಾಮಾ ಸತ್ತಿರುವುದಾಗಿದ್ದರೆ, ಅದನ್ನು ಪ್ರಕಟಿಸಿಲ್ಲವೇಕೆ? ಅದಕ್ಕಿರುವ ಉತ್ತರವೆಂದರೆ ಜೀವಂತವಾಗಿರುವ ಹಾಗೂ ಅವಿತುಕೊಂಡಿರುವ ಉಸಾಮಾ ಸತ್ತ ಉಸಾಮಾಗಿಂತ ಅಮೆರಿಕ ಸಾಮ್ರಾಜ್ಯಶಾಹಿ ಯೋಜನೆಗಳಿಗೆ ಪ್ರಮುಖವಾಗಿತ್ತು. ಸ್ಪಷ್ಟ ಸಾಕ್ಷ್ಯಗಳು ಹೇಳುವಂತೆ ಲಾದೆನ್ ವರ್ಷಗಳ ಹಿಂದೆಯೇ ಡಿಸೆಂಬರ್ 2001ರಲ್ಲಿ ಸಾವನ್ನಪ್ಪಿದ್ದಾನೆ. 'ಭಯೋತ್ಪಾದನೆಯ ವಿರುದ್ಧ ಸಮರ'ವನ್ನು ಮುಂದುವರಿಸಲು ಈ ವರದಿಯನ್ನು ಅಮೆರಿಕ ಅಡಗಿಸಿಡಬೇಕಾಗಿತ್ತು. ಅಫ್ಘಾನಿಸ್ತಾನ, ಇರಾಕ್, ಪಾಕಿಸ್ತಾನ, ಲಿಬಿಯಾ ಮತ್ತು ಸೋಮಾಲಿಯಾ, ಯಮನ್, ಬಹ್ರೈನ್, ಫೆಲೆಸ್ತೀನ್, ಮಧ್ಯ ಆಫ್ರಿಕಾ, ಕೊಲಂಬಿಯಾ ಮತ್ತು ಇತರೆಡೆಗಳಲ್ಲಿ 'ಎನಿಮಿ ನಂಬರ್ ವನ್'ನನ್ನು ನೆಪವಾಗಿ ಬಳಸಲಾಗುತ್ತಿದೆ.

# ಉಸಾಮಾ ಹೋದ; ಒಬಾಮಾ?

■ ಶಬೀರ್ ಕೆ.





ಅಮೆರಿಕ ಹೇಳುವಂತೆ ವಿಶ್ವದ ಮೋಸ್ಟ್ ವಾಂಟೆಡ್ ಟೆರರಿಸ್ಟ್ ಉಸಾಮಾ ಬಿನ್ ಲಾಡೆನ್‌ನ ಅಂತ್ಯವಾಗಿದೆ. ಅಮೆರಿಕದ ಘೋಷಣೆಯನ್ನು ಎಲ್ಲರೂ ಒಪ್ಪಲೇ ಬೇಕು. ಯಾಕೆಂದರೆ ಈ ಬಗ್ಗೆ ಸುದ್ದಿಯ ಮೂಲ ಅಮೆರಿಕ ಮಾತ್ರವೇ.

ಒಬ್ಬ ವ್ಯಕ್ತಿಯ ಸಾವು ಸಂಭವಿಸಿ ಆತನ ಸಾವು ಹೇಗಾಯಿತು ಎಂದು ದೃಢಪಡಿಸಬೇಕಾದರೆ ಮರಣೋತ್ತರ ಪರೀಕ್ಷೆಯ ಅಗತ್ಯವಿದೆ. ಮರಣೋತ್ತರ ಪರೀಕ್ಷೆಯು ನಡೆಯಬೇಕಾದರೆ ಆ ವ್ಯಕ್ತಿಯ ಮೃತದೇಹವಿರಬೇಕು. ಅಮೆರಿಕ ಜಗತ್ತಿನಲ್ಲೇ ಅತ್ಯಂತ ಭಯೋತ್ಪಾದಕನೆಂದು ತಾನು ಬಿಂಬಿಸಿದ ಉಸಾಮಾ ಬಿನ್ ಲಾದೆನ್‌ನ ಮೃತದೇಹವನ್ನು ಸಮುದ್ರದಲ್ಲಿ ದಫನ ಮಾಡಿದೆ! ಆತನ ಮರಣೋತ್ತರ ಪರೀಕ್ಷೆ ಅಥವಾ ಡಿಎನ್‌ಎ ಪರೀಕ್ಷೆ ನಡೆಸುವ ಅಗತ್ಯ ಅಮೆರಿಕಕ್ಕೆ ಕಂಡು ಬರಲಿಲ್ಲ! ಆತನ ದಫನ ಕ್ರಿಯೆಯನ್ನು ವೀಡಿಯೊ ಚಿತ್ರೀಕರಿಸಬೇಕೆಂದೂ ಅಮೆರಿಕಕ್ಕೆ ಅನಿಸಲಿಲ್ಲ! ಆತನ ಮೃತದೇಹದ ಫೋಟೊವನ್ನು ಬಿಡುಗಡೆಗೊಳಿಸಲಾಗುತ್ತಿಲ್ಲ! ಅಂತೂ ಮೇ 1ರಂದು ಅಮೆರಿಕ ಸೈನಿಕರು ನಡೆಸಿದ ದಾಳಿಯಲ್ಲಿ ಉಸಾಮಾ ಹತ್ಯೆಯಾಗಿರುವುದನ್ನು ನಾವು ನಂಬಲೇಬೇಕು.

ಉಸಾಮಾ ಬಿನ್ ಲಾಡೆನ್ ಹಿಂದೆಯೇ

ಸಾವನ್ನಪ್ಪಿದ್ದಾನೆಂದು ಹಲವು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದರು ಎಂಬುದು ವಾಸ್ತವವಾಗಿದೆ. ಲಾದೆನ್‌ನನ್ನು ಅಮೆರಿಕ ಮೇ 1ರಂದು ಹತ್ಯೆಗೈದಿರುವುದು ಸುಳ್ಳು, ಬದಲಾಗಿ ಆತ 2001ರಲ್ಲೇ ಸಾವನ್ನಪ್ಪಿದ್ದನೆಂದು ವಾದಿಸುವ ವಿಶ್ಲೇಷಕರು ಇನ್ನೂ ಇದ್ದಾರೆ.


ಭಯೋತ್ಪಾದಕ ರಾಷ್ಟ್ರ ಅಮೆರಿಕಾ ಹಿರೋಶಿಮಾದಲ್ಲಿ ನಡೆಸಿದ ಅಣುಬಾಂಬ್ ದಾಳಿಗೆ ಸಾಕ್ಷಿಯಾಗಿರುವ ತಲೆಬುರುಡೆಗಳು

ಲಾದೆನ್ ಹಿಂದೆಯೇ ಸತ್ತಿರುವನೇ ಅಥವಾ ಅಮೆರಿಕ ಮೊನ್ನೆ ನಡೆಸಿದ ದಾಳಿಯಲ್ಲಿ ಸಾವನ್ನಪ್ಪಿದನೇ ಅಥವಾ ಆತನನ್ನು ಅಮೆರಿಕ ಅಧಿಕಾರಿಗಳು ಬಂಧಿಸಿದ್ದು, ಕೆಲವು ಸತ್ಯಗಳನ್ನು ಮರೆಮಾಚುವುದಕ್ಕಾಗಿ ಆತನನ್ನು ಕೊಂದು ಸಮುದ್ರದಲ್ಲಿ ದಫನ ಮಾಡಲಾಗಿದೆಯೆಂಬ ಸುಳ್ಳನ್ನು ಜಗತ್ತಿಗೆ ಹೇಳುತ್ತಿದೆಯೇ ಅಥವಾ ಆತನನ್ನು ಸಿಐಎಯು ಯಾವುದಾದರೂ ರಹಸ್ಯ ಬಂಧೀಖಾನೆಯಲ್ಲಿರಿಸಿದೆಯೇ ಎಂಬ ಪ್ರಶ್ನೆಗಳು ಈಗ ಉದ್ಭವವಾಗಿವೆ.

*ವಿಶ್ವದ ಭಯೋತ್ಪಾದಕರ ಹಿರಿಯಣ್ಣ ಅಮೆರಿಕ. ವಿಶ್ವದ ಎಲ್ಲಾ ಭಯೋತ್ಪಾದಕರನ್ನು ಸೃಷ್ಟಿಸಿದ ಮತ್ತು ಭಯೋತ್ಪಾದನೆಯನ್ನು ನಡೆಸಿದ ಕುಖ್ಯಾತಿ ಅಮೆರಿಕಕ್ಕೆ ಸಲ್ಲಬೇಕು. ಅದಕ್ಕೆ ಪೂರಕವಾಗುವ ಹಲವು ಅಂಶಗಳೂ ಇವೆ. ಅಂತಾರಾಷ್ಟ್ರೀಯ ವಿಷಯಗಳ ಬಗ್ಗೆ ಪರಿಜ್ಞಾನವಿಲ್ಲದಂತೆ ಮಾತನಾಡುವ ನಮ್ಮ ಪ್ರಾದೇಶಿಕ ಟಿವಿ ಆ್ಯಂಕರ್‌ಗಳು ಮತ್ತು ಪಾಶ್ಚಿಮಾತ್ಯರು ಹಾಗೂ ಬಂಡವಾಳಶಾಹಿಗಳ ಹಣದಲ್ಲಿ ನಡೆಯುವ ನಮ್ಮ ಇಂಗ್ಲಿಷ್ ಮಾಧ್ಯಮಗಳು ಅಮೆರಿಕದ ಭಯೋತ್ಪಾದನೆಯನ್ನು ಬೆಳಕಿಗೆ ತರುವುದನ್ನು ಕಲ್ಪಿಸಲು ಸಾಧ್ಯವೇ ಇಲ್ಲ.*

ಏನೇ ಆದರೂ ಲಾದೆನ್ ಇನ್ನೆಂದೂ ಈ ಜಗತ್ತಿನ ಮುಂದೆ ಬರಲಾರನೆಂಬುದು ಖಚಿತವಾದ ನಂತರವೇ ಅಮೆರಿಕ ಏನೋ ಒಂದು ನಾಟಕವನ್ನು ಜಗತ್ತಿನ ಮುಂದೆ ಪ್ರದರ್ಶಿಸುತ್ತಿದೆಯೆಂಬುದು ವಾಸ್ತವ. ಉಸಾಮಾ ಹತ್ಯೆಯ ಬಗೆಗಿರುವ ಅನುಮಾನವನ್ನು ನಾವು ಬದಿಗಿಡೋಣ.

9/11ನಂತಹ ದಾಳಿಗಯನ್ನು ಉಸಾಮಾ ಮಾಡಿರುವುದು ಹೌದು ಎಂದಾದರೆ ಆತನನ್ನು ಸಾವಿರ ಬಾರಿ ಗಲ್ಲಿಗೇರಿಸಿದರೂ ತಪ್ಪಾಗದು. ಆದರೆ ಆತನಂತಹ ಸಾವಿರ ಭಯೋತ್ಪಾದಕರು ಜಗತ್ತಿನಲ್ಲಿದ್ದರೂ ಅಂತಹವರನ್ನು ಪ್ರಶ್ನಿಸುವ ಅಥವಾ ಕೊಲ್ಲುವ ಯಾವುದೇ ಅರ್ಹತೆ ಅಮೆರಿಕಕ್ಕಂತೂ ಇಲ್ಲ. ಅದಕ್ಕೆ ಹಲವು ಕಾರಣಗಳೂ ಇವೆ.

ವಿಶ್ವದಲ್ಲಿ ಅತ್ಯಂತ ಭಯಾನಕ ಹಾಗೂ ಜೀವ ಜಗತ್ತಿಗೆ ಮಾರಕವೆಂದು ಎಲ್ಲರೂ ಒಪ್ಪಿಕೊಳ್ಳುವ ಒಂದು ಆಯುಧವಿದ್ದರೆ ಅದು ಅಣುಬಾಂಬ್. ಈ ಬಾಂಬನ್ನು ಜಗತ್ತಿನಲ್ಲಿ ಮೊದಲ ಬಾರಿಗೆ ಬಳಸಿದ ಕುಖ್ಯಾತಿ ಸೇರುವುದು ಅಮೆರಿಕಕ್ಕೆ ಮಾತ್ರ. 2001ರ ಸೆಪ್ಟಂಬರ್ 11 ದಾಳಿಯನ್ನು ಲಾದೆನ್ ಮಾಡಿದ್ದಾನೆಯೇ ಎಂಬುದು ಜಗತ್ತಿನಲ್ಲಿ ಇನ್ನೂ ಅನುಮಾನವಾಗಿಯೇ ಉಳಿದಿದೆ. ಇಸ್ರೇಲ್‌ನ ಬೇಹುಗಾರಿಕೆ ಮೊಸಾದ್ ಮತ್ತು ಅಮೆರಿಕದ ಸಿಐಎ ಜಂಟಿಯಾಗಿ ಈ ಕೃತ್ಯ ನಡೆಸಿದೆಯೇ ಎಂಬ ಸಂಶಯಗಳು ಅಲ್ಲಿನ ಜನರಲ್ಲೇ ಇವೆ. ಆದರೆ ಜಪಾನ್‌ನ ಹಿರೋಶಿಮಾ ಮತ್ತು ನಾಗಸಾಕಿಯ ಮೇಲೆ ಅಣು ಬಾಂಬ್ ದಾಳಿ ನಡೆಸಿದ್ದು ಅಮೆರಿಕ ಎನ್ನುವುದರಲ್ಲಿ ಯೊರೊಬ್ಬನಿಗೂ ಯಾವುದೇ ಅನುಮಾನವಿಲ್ಲ. ಜಗತ್ತಿನ ಅತ್ಯಂತ ದೊಡ್ಡ ಭಯೋತ್ಪಾದಕ ರಾಷ್ಟ್ರವೆಂಬ ಪಟ್ಟವನ್ನು ಅಮೆರಿಕಕ್ಕೆ ನೀಡಲು ಇನ್ನೇನೂ ಬೇಡ.

ಲಾದೆನ್ ಭಯೋತ್ಪಾದಕನಾದದ್ದು ಇತ್ತೀಚೆಗಷ್ಟೇ. 1979ರಿಂದ 1989ರ ತನಕ ಅಫ್ಘಾನ್‌ನ ಮೇಲೆ ರಶ್ಯಾ ದಂಡೆತ್ತಿ ಹೋದಾಗ ಅಮೆರಿಕಾಗೆ ಲಾದೆನ್ ಒಬ್ಬ ಧೀರ

■ *ಈ ಅಣು ಬಾಂಬ್ ದಾಳಿ ನಡೆಸುವ ಮೊದಲೂ ಹಾಗೂ ನಂತರವೂ ಅಮೆರಿಕ ಭಯೋತ್ಪಾದನೆ ನಡೆಸುತ್ತಲೇ ಬಂದಿದೆ. 1955ರಿಂದ 1975ರ ತನಕ ನಡೆದ ವಿಯೆಟ್ನಾ ಯುದ್ಧದಲ್ಲಿ ಅಮೆರಿಕ ಉತ್ತರ ವಿಯೆಟ್ನಾಂನ ವಿರುದ್ಧವಾಗಿ ದಕ್ಷಿಣ ವಿಯೆಟ್ನಾಮನ್ನು ಬೆಂಬಲಿಸಿತು. ಸುಮಾರು 30 ಲಕ್ಷ ಮಂದಿ ಈ ಯುದ್ಧದಲ್ಲಿ ಹತರಾದರು. ಅಮೆರಿಕ ಈ ಯುದ್ಧದಲ್ಲಿ ಗುರಿ ಮಾಡಿರುವುದು ಕೇವಲ ಉತ್ತರ ವಿಯೆಟ್ನಾಮ್‌ನ ಸೈನಿಕರನ್ನಲ್ಲ. ಅದೆಷ್ಟೋ ಮಂದಿ ನಾಗರಿಕರು ಈ ಯುದ್ಧದಲ್ಲಿ ಸಾವನ್ನಪ್ಪಿದರು. ತನ್ನ ವಿರುದ್ಧ ನಾಗರಿಕರು ಯಾವುದೇ ಪ್ರತಿರೋಧ ತೋರುವುದನ್ನು ತಡೆಯುವುದಕ್ಕಾಗಿ ಅವರಲ್ಲಿ ಭೀತಿಯನ್ನು ಸೃಷ್ಟಿಸಲಾಗಿತ್ತು. ಆಸ್ಪತ್ರೆ, ಶಾಲೆಗಳು, ಚರ್ಚ್‌ಗಳು ಮತ್ತು ಸಣ್ಣ ಪುಟ್ಟ ಗ್ರಾಮಗಳ ಮೇಲೆ ಅಮೆರಿಕ ದಾಳಿ ನಡೆಸಿತು.* ■

ಸ್ವಾತಂತ್ರ್ಯ ಯೋಧನಾಗಿದ್ದ. ಈಗ ಗದ್ದಾಫಿ ವಿರುದ್ಧ ಲಿಬಿಯಾದ ಹೋರಾಟಗಾರರಿಗೆ ಅಮೆರಿಕದ ಸಿಐಎ ಶಸ್ತ್ರಾಸ್ತ್ರ ಸರಬರಾಜು ಮಾಡುತ್ತಿರುವಂತೆಯೇ, ಆಗ ಅದು ಲಾದೆನ್‌ಗೆ ನೆರವು ನೀಡಿತ್ತು. ಲಾದೆನ್‌ನ ಬಂದೂಕಿನ ಗುರಿ ಅಮೆರಿಕದ ನೆತ್ತಿಗೆ ತಿರುಗಿದಾಗ ಮಾತ್ರ, ಆತ ಭಯೋತ್ಪಾದಕನಾಗಿ ಪರಿವರ್ತಿತನಾದ!

ವಿಶ್ವದ ಭಯೋತ್ಪಾದಕರ ಹಿರಿಯಣ್ಣ ಅಮೆರಿಕ. ವಿಶ್ವದ ಎಲ್ಲಾ ಭಯೋತ್ಪಾದಕರನ್ನು ಸೃಷ್ಟಿಸಿದ ಮತ್ತು ಭಯೋತ್ಪಾದನೆಯನ್ನು ನಡೆಸಿದ ಕುಖ್ಯಾತಿ ಅಮೆರಿಕಕ್ಕೆ ಸಲ್ಲಬೇಕು. ಅದಕ್ಕೆ ಪೂರಕವಾಗುವ ಹಲವು ಅಂಶಗಳೂ ಇವೆ. ಅಂತಾರಾಷ್ಟ್ರೀಯ ವಿಷಯಗಳ ಬಗ್ಗೆ ಪರಿಜ್ಞಾನವಿಲ್ಲದಂತೆ ಮಾತನಾಡುವ ನಮ್ಮ ಪ್ರಾದೇಶಿಕ ಟಿವಿ ಆ್ಯಂಕರ್‌ಗಳು ಮತ್ತು ಪಾಶ್ಚಿಮಾತ್ಯರು ಹಾಗೂ ಬಂಡವಾಳಶಾಹಿಗಳ ಹಣದಲ್ಲಿ ನಡೆಯುವ ನಮ್ಮ ಇಂಗ್ಲಿಷ್ ಮಾಧ್ಯಮಗಳು ಅಮೆರಿಕದ ಭಯೋತ್ಪಾದನೆಯನ್ನು ಬೆಳಕಿಗೆ ತರುವುದನ್ನು ಕನಸ್ಸಿನಲ್ಲೂ ಕಲ್ಪಿಸಲು ಸಾಧ್ಯವೇ ಇಲ್ಲ.

ದ್ವಿತೀಯ ಮಹಾಯುದ್ಧದ ಕೊನೆ ಹಂತದಲ್ಲಿ 1945ರ ಆಗಸ್ಟ್ 6ರಂದು ಅಮೆರಿಕ ಜಪಾನ್‌ನ ಪ್ರಮುಖ ನಗರಗಳಾದ ಹಿರೋಶಿಮಾ ಮತ್ತು ನಾಗಸಾಕಿ ಮೇಲೆ ದಾಳಿ ನಡೆಸಿತು. ಅದಕ್ಕೂ ಮೊದಲು 67 ಜಪಾನಿ ನಗರಗಳ ಮೇಲೆ ಅದರ ಸವಾರಿ ಆಗಿತ್ತು. ಯುದ್ಧದ ಕೊನೆಯಲ್ಲಿ ಹಿರೋಶಿಮಾ ಮೇಲೆ ನಡೆಸಿದ ಅಣು ಬಾಂಬ್ ದಾಳಿಯಲ್ಲಿ ಸುಮಾರು 1,66,000 ಮಂದಿ ಸಾವನ್ನಪ್ಪಿದರೆ, ನಾಗಸಾಕಿಯಲ್ಲಿ ಸುಮಾರು 80,000 ಮಂದಿ ಕೊಲ್ಲಲ್ಪಟ್ಟರು. ಅದೂ ಅಲ್ಲದೆ ಇಂದಿಗೂ ಇಲ್ಲಿ ಜನಿಸುವ ಮಕ್ಕಳು ವಿಕಲಾಂಗ, ಶ್ವಾಸಕೋಶದ ತೊಂದರೆಯನ್ನೊಳಗೊಂಡಂತೆ ಹಲವು ಸಮಸ್ಯೆಗಳನ್ನು ಹೊಂದಿರುತ್ತಾರೆ. ಅಂದು ಅಮೆರಿಕ ಜಪಾನಿಯರ ಎದೆಯಲ್ಲಿ ಉತ್ಪಾದಿಸಿದ ಭಯದಿಂದ ಅವರು ಇನ್ನೂ ಚೇತರಿಸಕೊಂಡಿಲ್ಲ.

ಈ ಅಣು ಬಾಂಬ್ ದಾಳಿ ನಡೆಸುವ ಮೊದಲೂ ಹಾಗೂ ನಂತರವೂ ಅಮೆರಿಕ ಭಯೋತ್ಪಾದನೆ ನಡೆಸುತ್ತಲೇ ಬಂದಿದೆ. 1955ರಿಂದ 1975ರ ತನಕ ನಡೆದ ವಿಯೆಟ್ನಾ ಯುದ್ಧದಲ್ಲಿ ಅಮೆರಿಕ ಉತ್ತರ ವಿಯೆಟ್ನಾಂನ ವಿರುದ್ಧವಾಗಿ ದಕ್ಷಿಣ ವಿಯೆಟ್ನಾಮನ್ನು ಬೆಂಬಲಿಸಿತು. ಸುಮಾರು 30 ಲಕ್ಷ ಮಂದಿ ಈ ಯುದ್ಧದಲ್ಲಿ ಹತರಾದರು. ಅಮೆರಿಕ ಈ ಯುದ್ಧದಲ್ಲಿ ಗುರಿ ಮಾಡಿರುವುದು ಕೇವಲ ಉತ್ತರ ವಿಯೆಟ್ನಾಮ್‌ನ ಸೈನಿಕರನ್ನಲ್ಲ. ಅದೆಷ್ಟೋ ಮಂದಿ ನಾಗರಿಕರು ಈ ಯುದ್ಧದಲ್ಲಿ ಸಾವನ್ನಪ್ಪಿದರು. ತನ್ನ ವಿರುದ್ಧ ನಾಗರಿಕರು ಯಾವುದೇ



ಅಮೆರಿಕಾ ಬೆಂಬಲದೊಂದಿಗೆ ವಿಯೆಟ್ನಾಂನಲ್ಲಿ ನಡೆದ ಯುದ್ಧದಲ್ಲಿ ಬಲಿಯಾದ ವಿಯೆಟ್ನಾಂ ನಾಗರಿಕರ ಮೃತದೇಹಗಳು ರಾಶಿಬಿದ್ದಿರುವುದು.

ಪ್ರತಿರೋಧ ತೋರುವುದನ್ನು ತಡೆಯುವುದಕ್ಕಾಗಿ ಅವರಲ್ಲಿ ಭೀತಿಯನ್ನು ಸೃಷ್ಟಿಸಲಾಗಿತ್ತು. ಆಸ್ಪತ್ರೆ, ಶಾಲೆಗಳು, ಚರ್ಚ್‌ಗಳು ಮತ್ತು ಸಣ್ಣಪುಟ್ಟ ಗ್ರಾಮಗಳ ಮೇಲೆ ಅಮೆರಿಕ ದಾಳಿ ನಡೆಸಿತು.

ಅಮೆರಿಕ ನಡೆಸುವ ಎಲ್ಲಾ ಭಯೋತ್ಪಾದನೆಯೂ ಕಾರ್ಯರೂಪಕ್ಕೆ ಬರುವುದು ಅಲ್ಲಿನ ಬೇಹುಗಾರಿಕಾ ಸಂಸ್ಥೆಯಾದ ಸಿಐಎಯ ಮೂಲಕ. ವಿಯೆಟ್ನಾಂ ಯುದ್ಧದ ವೇಳೆಯೂ ಸಿಐಎ ಪ್ರಮುಖ ಪಾತ್ರವಹಿಸಿತ್ತು. 1968ರಿಂದ 1971ರ ತನಕ ಸಿಐಎಯ ಹತ್ಯಾ ದಳವು ಆಪರೇಶನ್ ಫೋನಿಕ್ಸ್ ಎಂಬ ಕಾರ್ಯಚರಣೆಯಲ್ಲಿ ಸುಮಾರು 20 ರಿಂದ 40 ಸಾವಿರ ವಿಯೆಟ್ನಾಮಿಯನ್ನರನ್ನು ಹತ್ಯೆಗೈದಿತು.



1954ರಲ್ಲಿ ಗ್ವಾಟೆಮಾಲದಲ್ಲಿ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಅಧ್ಯಕ್ಷ ಜೇಕಬ್ ಅರ್ಬೆನ್ಝ್ ಗುರ್ಝ್ಮಾನ್‌ನನ್ನು ಉಚ್ಚಾಟಿಸುವುದಕ್ಕಾಗಿ ಸಿಐಎ ಕಾರ್ಯಚರಣೆ ನಡೆಸಿತು. ಅರ್ಬೆನ್ಝ್ ಗುರ್ಝ್ಮಾನ್ ಹಲವು ಭೂ ಸುಧಾರಣಾ ಕಾಯ್ದೆಗಳನ್ನು ಜಾರಿಗೆ ತಂದ ಉತ್ತಮ ಕಮ್ಯುನಿಸ್ಟ್ ಆಡಳಿತಗಾರನಾಗಿದ್ದರು. ಇವರ ಭೂ ಸುಧಾರಣಾ ಕಾಯ್ದೆ ಅಮೆರಿಕದ ಯುನೈಟೆಡ್ ಫ್ರೂಟ್ ಕಂಪೆನಿಗೆ ದೊಡ್ಡ ನಷ್ಟವುಂಟುಮಾಡಿತು. ಅಂತಿಮವಾಗಿ ಸಿಐಎ ಗುರ್ಝ್ಮಾನ್‌ನನ್ನು ಹೊಡೆದುರುಳಿಸುವುದಕ್ಕಾಗಿ ಆಪರೇಶನ್ ಪಿಬಿಸಕ್ಸೆಸ್ (PBSUCCESS) ಪ್ರಾರಂಭಿಸಿತು. ಅದು ಗ್ವಾಟೆಮಾಲದ ದೇಶಭ್ರಷ್ಟ ಸೇನಾಧಿಕಾರಿಯೊಬ್ಬನಿಗೆ ಶಸ್ತ್ರಾಸ್ತ್ರವನ್ನು ಸರಬರಾಜು ಮಾಡಿತು ಹಾಗೂ ಆತನ ಲಿಬರೇಶನ್ ಆರ್ಮಿಗೆ ಬೇಕಾದ ಎಲ್ಲಾ ತರಬೇತಿಗಳನ್ನೂ ನೀಡಿತು. ಅಂತಿಮವಾಗಿ ಗುರ್ಝ್ಮಾನ್‌ನನ್ನು ಅಧಿಕಾರದಿಂದ ಕೆಳಗಿಳಿಸುವುದರಲ್ಲಿ ಸಿಐಎ ಯಶಸ್ವಿಯಾಯಿತು. ಈ ಯುದ್ಧದಲ್ಲಿ ಸಾವನ್ನಪ್ಪಿರುವ ಗ್ವಾಟೆಮಾಲ ಪ್ರಜೆಗಳ ಸಂಖ್ಯೆ ಸುಮಾರು 1,20,000. ಇದರ ಕ್ರೆಡಿಟ್ ಸಿಐಎಗೆ ಸಲ್ಲಬೇಕು.

1965ರಲ್ಲಿ ಇಂಡೊನೇಶ್ಯದ ಚುನಾಯಿತ ಅಧ್ಯಕ್ಷ ಸುಕಾರ್ನೊನನ್ನು ಅಧಿಕಾರದಿಂದ ಇಳಿಸುವುದಕ್ಕಾಗಿ ಅಮೆರಿಕ ಸೇನಾಧಿಕಾರಿ ಜನರಲ್ ಸುಹಾರ್ತೊನನ್ನು ಬಳಸಿತು. ಅಧಿಕಾರ ಹಿಡಿದ ಈ ಸೇನಾಧಿಕಾರಿ ಕಾರ್ಮಿಕರು, ರೈತರು, ವಿದ್ಯಾರ್ಥಿಗಳು ಮತ್ತು ರಾಜಕೀಯ ಕಾರ್ಯಕರ್ತರನ್ನು ಸೇರಿದಂತೆ ಸುಮಾರು 10 ಲಕ್ಷಮಂದಿಯನ್ನು ಕೊಂದು ಹಾಕಿತು.

ಪ್ರಜಾಪ್ರಭುತ್ವದ ರಕ್ಷಕನೆಂದು ಹೇಳುವ ಅಮೆರಿಕ 1973ರಲ್ಲಿ ಚಿಲಿಯಲ್ಲಿ ಅಲ್ಲಿನ ಚುನಾಯಿತ ಅಧ್ಯಕ್ಷ ಸಾಲ್ವೆಡರ್ ಅಲೆಂಡೆಯನ್ನು ಕಿತ್ತೆಸೆದು ಸೇನಾಡಳಿತವನ್ನು ಜಾರಿ ಮಾಡಿತು. ಅನಂತರವುಂಟಾದ ಅಶಾಂತಿಯಲ್ಲಿ ಸುಮಾರು 30,000 ಮಂದಿ ಸಾವನ್ನಪ್ಪಿದರು. ಇದು 1990ರ ತನಕ ಚಿಲಿಯನ್ನು ಸೇನಾಡಳಿತಕ್ಕೆ ತಳ್ಳಿತು. ಈ ಅವಧಿಯಲ್ಲಿ ಬುದ್ಧಿ ಜೀವಿಗಳು, ಸಾಮಾಜಿಕ ಕಾರ್ಯಕರ್ತರು, ಮಾರ್ಕಿಸ್ಟ್‌ಗಳು ಹಾಗೂ ರಾಜಕೀಯ ಕಾರ್ಯಕರ್ತರ ಕೊಲೆ, ದಬ್ಬಾಳಿಕೆಗಳು ನಡೆಯಿತು. ನಂತರ ಮಾಕ್ಸಿಸ್ಟ್ ಗುಂಪುಗಳು ದೇಶದಲ್ಲಿ ಗೆರಿಲ್ಲಾ ಪಡೆಗಳನ್ನು ಹುಟ್ಟುಹಾಕಿದವು. ಇದು ದೇಶದಲ್ಲಿ ಅಶಾಂತಿಯು ಮುಂದುವರಿಯಲು ಕಾರಣವಾಯಿತು. ಈ ಎಲ್ಲಾ ಅಶಾಂತಿಯ ಮೂಲ ಅಮೆರಿಕವಾಗಿತ್ತು.

2nd Floor,
Saibeen Complex,
Lalbagh, **Mangalore-4**
**Ph : 0824-2452998**

casual wear
the menz shoppe

B.J.M.Complex,
**Moodbidri**
**Cell : 9916820707**

email : cwear_1999@hotmail.com

1975ರ ಡಿಸೆಂಬರ್‌ನಲ್ಲಿ ಇಂಡೋನೇಶ್ಯಾ ಸೇನೆಯು ವಸಾಹತುಶಾಹಿ ವಿರೋಧಿ ಯುದ್ಧ ಎಂಬ ನೆಪದಲ್ಲಿ ಪೂರ್ವ ತೈಮೊರ್‌ನ ಮೇಲೆ ದಂಡೆತ್ತಿ ಹೋಯಿತು. ಇಂಡೋನೇಶ್ಯ ಸೇನೆಗೆ ಎಲ್ಲಾ ರೀತಿಯ ಶಸ್ತ್ರಾಸ್ತ್ರಗಳು ಅಮೆರಿಕದಿಂದ ಸರಬರಾಜಾಯಿತು. ಈ ಯುದ್ಧದಲ್ಲಿ ಸೈನಿಕರು, ಮಕ್ಕಳು ಮಹಿಳೆಯನ್ನೊಳಗೊಂಡಂತೆ ನಾಗರಿಕರೂ ಸೇರಿದಂತೆ ಸುಮಾರು ಎರಡೂವರೆ ಲಕ್ಷ ಮಂದಿ ಹತರಾದರು.

1970ರಲ್ಲಿ ಆಂಗೋಲಾ ನಾಗರಿಕ ಯುದ್ಧದ ವೇಳೆ ಅಮೆರಿಕ ಯುನಿಟಾ (ಯುಎನ್‌ಐಟಿಎ) ಬಂಡುಗೋರರನ್ನು ಬೆಂಬಲಿಸಿತು. ಈ ಯುದ್ಧದಲ್ಲಿ ಲಕ್ಷಾಂತರ ಆಂಗೋಲನ್ ನಾಗರಿಕರು ಸಾವನ್ನಪ್ಪಿದರು.

1984ರಲ್ಲಿ ನಿಕಾರ್ಗೋವಾ ಸರಕಾರದ ವಿರುದ್ಧ ಬಂಡೇಳಲು ಅಮೆರಿಕದ ಸಿಐಎ ಅಲ್ಲಿನ ಕೋಂಟ್ರಾ ಗೆರಿಲ್ಲಾಗೆ ಶಸ್ತ್ರಾಸ್ತ್ರ ಪೂರೈಸಿತು. ಈ ಗಲಭೆಯಲ್ಲಿ 30 ಸಾವಿರ ನಿಕಾರ್ಗೋವನ್ನರು ಸಾವನ್ನಪ್ಪಿದರು. ನಿಕಾರ್ಗೋವಾ ಸರಕಾರ ಅಮೆರಿಕದ ವಿರುದ್ಧ ಅಂತಾರಾಷ್ಟ್ರೀಯ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿತು. ನಿಕೋರ್ಗಾವಾದ ಸಾರ್ವಭೌಮತ್ವದಲ್ಲಿ ಹಸ್ತಕ್ಷೇಪ ಮಾಡುವ ಹಕ್ಕು ಅಮೆರಿಕಕ್ಕಿಲ್ಲ ಮತ್ತು ಅಂತಾರಾಷ್ಟ್ರೀಯ ಕಾನೂನನ್ನು ಉಲ್ಲಂಘಿಸಿರುವ ಅಮೆರಿಕ ನಿಕಾರ್ಗೋವಾಗೆ ಪರಿಹಾರ ನೀಡಬೇಕೆಂದು ತೀರ್ಪಿತ್ತಿತು. ಪ್ರಕರಣದ ವಿಚಾರಣೆ ನಡೆಸಲು ಅಂತಾರಾಷ್ಟ್ರೀಯ ನ್ಯಾಯಾಲಯದ ವ್ಯಾಪ್ತಿಯು ಸಾಕಾಗದು ಎನ್ನುವ ಮೂಲಕ ಅಮೆರಿಕ ವಿಚಾರಣೆಯಿಂದ ತಪ್ಪಿಸಿಕೊಂಡಿತು. ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯಲ್ಲಿ ವಿಟೊ ಅಧಿಕಾರವನ್ನು ಹೊಂದಿರುವ ಅಮೆರಿಕ ಈ ತೀರ್ಪು ಜಾರಿಗೆ ಬರದಂತೆ ನೋಡಿಕೊಂಡಿತು.

80ರ ದಶಕದಲ್ಲಿ ಲೆಬನಾನ್ ಮೇಲೆ ದಾಳಿ ನಡೆಸಿದ ಇಸ್ರೇಲ್‌ಗೆ ಸಂಪೂರ್ಣ ಬೆಂಬಲ ಅಮೆರಿಕದ್ದಾಗಿತ್ತು. ಕ್ಲಸ್ಟರ್ ಬಾಂಬ್‌ಗಳನ್ನೊಳಗೊಂಡಂತೆ ಹಲವು ಮಾರಕ ಶಸ್ತ್ರಾಸ್ತ್ರಗಳನ್ನು ಅಮೆರಿಕ ಇಸ್ರೇಲ್‌ಗೆ ನೀಡಿತು. ಇಲ್ಲಿ ಇಸ್ರೇಲ್ ಸೇನೆ ಆಸ್ಪತ್ರೆಗಳ ಮೇಲೆ ದಾಳಿಗಳನ್ನು ನಡೆಸಿತು. ಸಿಂಗಾಪುರದ ವೈದ್ಯೆ ಅಂಗ್ ಸ್ವಿ ಚಾಯ್ ತನ್ನ 'ಬೇರೂತಿನಿಂದ ಜರೂಸಲೇಮಿಗೆ' ಪುಸ್ತಕದಲ್ಲಿ ಈ ಯುದ್ಧದಲ್ಲಿ ನಾಗರಿಕರ ಮೇಲಾದ ದಾಳಿಯ ಬಗ್ಗೆ ಸ್ಪಷ್ಟವಾಗಿ ವಿವರಿಸುತ್ತಾರೆ. ಲೆಬನಾನ್‌ನ ಆಸ್ಪತ್ರೆಯ ಮೇಲೆ ದಾಳಿ ನಡೆಸಿದ ಇಸ್ರೇಲ್ ಅದಾಗಲೇ ಬಾಂಬ್ ದಾಳಿಯಲ್ಲಿ ಗಾಯಗೊಂಡಿದ್ದ ಮಕ್ಕಳನ್ನೂ, ಮಹಿಳೆಯರನ್ನೂ ಕೊಂದು ಹಾಕಿತ್ತು. ತಮ್ಮ ಮನೆ ಮಠಗಳನ್ನು ಕಳೆದುಕೊಂಡು ಸಬ್ರ-ಶಾತಿಲ ನಿರಾಶ್ರಿತ ಶಿಬಿರದಲ್ಲಿದ್ದ ನಿರಾಶ್ರಿತರನ್ನು ಇಸ್ರೇಲ್ ಸೈನಿಕರು ಮಕ್ಕಳು, ಮಹಿಳೆಯರನ್ನದೆ ಕ್ರೂರವಾಗಿ ಗುಂಡಿಕ್ಕಿ ಹತ್ಯೆಗೈದಿದ್ದರು. ಇಂತಹ ಕೃತ್ಯಗಳಾಗಿ ಅಮೆರಿಕ ಇಸ್ರೇಲ್‌ಗೆ ನೀಡುವ ಬೆಂಬಲ ಈಗಲೂ ಮುಂದುವರಿದಿದೆ.

*ಉಸಾಮಾ ಹತ್ಯೆಯಾಗಿರುವುದರಿಂದ ವಿಶ್ವದಲ್ಲಿ ಭಯೋತ್ಪಾದನೆಯು ಕೊನೆಗೊಂಡಿದೆಯೆಂಬಂತೆ ಮಾಧ್ಯಮಗಳು ಬಿತ್ತರಿಸುತ್ತಿವೆ. ಅದು ಎಂದಿಗೂ ಸಾಧ್ಯವಿಲ್ಲ. ಒಬಾಮಾ ಇನ್ನೂ ಉಳಿದಿದ್ದಾರೆ. ಅವರ ನಂತರ ಅಮೆರಿಕ ಇನ್ನೂ ಹಲವು ಅಧ್ಯಕ್ಷರುಗಳನ್ನು ಕಾಣಲಿದೆ. ಎಲ್ಲಿಯವರೆಗೆ ಅಮೆರಿಕವಿರುತ್ತದೋ, ಅದರ ವಿದೇಶಾಂಗ ನೀತಿಯು ಬದಲಾಗಲಾರದೋ, ಅಲ್ಲಿಯ ತನಕ ಭಯೋತ್ಪಾದನೆ ಮುಂದುವರಿಯುತ್ತದೆ.*




1989ರಲ್ಲಿ ಅಮೆರಿಕ ಆಪರೇಶನ್ ಜಸ್ಟ್ ಕ್ವಾಸ್ ಎಂಬ ಹೆಸರಿನಲ್ಲಿ ಪನಾಮಾದ ಮೇಲೆ ದಂಡೆತ್ತಿ ಹೋಯಿತು. ಇದರಲ್ಲಿ ಸಾವಿರಾರು ಪನಾಮಾ ನಾಗರಿಕರು ಕೊಲ್ಲಲ್ಪಟ್ಟರು.

1980ರಿಂದ 88ರ ತನಕ ನಡೆದ ಮೊದಲ ಗಲ್ಫ್ ಯುದ್ಧದಲ್ಲಿ ಇರಾನ್ ಮೇಲೆ ಇರಾಕ್ ದಾಳಿ ನಡೆಸಿದಾಗ,

ಇರಾಕ್‌ನ ಕುರ್ದಿಶ್ ಜನಾಂಗ ಹಾಗೂ ಇರಾನ್ ಸೈನಿಕರ ಮೇಲೆ ಮಸ್ಟರ್ಡ್ ಗ್ಯಾಸ್ ಒಳಗೊಂಡಂತೆ ರಾಸಾಯನಿಕಗಳನ್ನು ಬಳಸಿದಾಗ ಅಮೆರಿಕ ಸದ್ದಾಂ ಹುಸೈನ್‌ರನ್ನು ಬೆಂಬಲಿಸಿತ್ತು. ಅದೇ ಸದ್ದಾಂ ಹುಸೇನ್ ಅಮೆರಿಕಕ್ಕೆ ತಿರುಗಿ ನಿಂತು 1991ರಲ್ಲಿ ಇರಾಕ್ ಮೇಲೆ ದಾಳಿ ನಡೆಸಿದ ಅಮೆರಿಕ ಅಲ್ಲಿ ಲಕ್ಷಾಂತರ ಹಸು ಕಂದಮ್ಮಗಳನ್ನೊಳಗೊಂಡಂತೆ 6 ಲಕ್ಷ ಮಂದಿಯನ್ನು ಕೊಂದು ಹಾಕಿತು. ಪೆಂಟಗಾನ್ ಮತ್ತು ವಿಶ್ವ ವಾಣಿಜ್ಯ ಕೇಂದ್ರಗಳನ್ನು ಹೊಡೆದುರುಳಿಸಿದ್ದಕ್ಕಾಗಿ ಅಫ್ಘಾನಿಸ್ತಾನದ ಮೇಲೆ ದಾಳಿ ನಡೆಸಿದ ಅಮೆರಿಕ 6 ಲಕ್ಷ ಮಂದಿಯನ್ನು ಕೊಂದು ಹಾಕಿತು. 2200 ಅಮಾಯಕರ ಜೀವಗಳಿಗೆ ಪ್ರತಿಯಾಗಿ 6 ಲಕ್ಷ ಮಂದಿಯ ಪ್ರಾಣ!

ಅಮೆರಿಕದ ಭಯೋತ್ಪಾದನಾ ಕೃತ್ಯಗಳ ಚರಿತ್ರೆ ಇನ್ನೂ ಮುಂದುವರಿಯುತ್ತಲೇ ಇದೆ. ಲಿಬಿಯಾ, ಗ್ರೆನಾಡ್, ಸೊಮಾಲಿಯಾ, ಹೈಟಿ, ಸುಡಾನ್, ಬ್ರೆಝಿಲ್, ಅರ್ಜೆಂಟೀನಾ, ಯುಗೋಸ್ಲಾವಿಯಾ, ಯಮನ್ ಎಲ್ಲೆಲ್ಲೂ ತನ್ನ ಸಾಮ್ರಾಜ್ಯಶಾಹಿತ್ವವನ್ನು ಪ್ರಶ್ನಿಸಿದವರ ವಿರುದ್ಧ ಅಮೆರಿಕ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಯುದ್ಧವನ್ನು ಸಾರಿದೆ. ಅಮೆರಿಕದ ವಿರುದ್ಧ ಮಾತೆತ್ತಿದವರೆಲ್ಲಾ ಭಯೋತ್ಪಾದಕರಾಗಿ ಪರಿವರ್ತಿತರಾಗುತ್ತಾರೆ.

ವಾಸ್ತವದಲ್ಲಿ ಜಗತ್ತಿನಲ್ಲಿ ಅಮೆರಿಕ ನಡೆಸಿದ ಭಯೋತ್ಪಾದನೆಯ ಮುಂದೆ ಉಸಾಮಾ ಬಿನ್ ಲಾದೆನ್ ಏನೇನೂ ಅಲ್ಲ. ಬಿನ್ ಲಾದೆನ್‌ನಂತಹ ಅದೆಷ್ಟೋ ಭಯೋತ್ಪಾದಕರನ್ನು ಅಮೆರಿಕ ಸೃಷ್ಟಿಸಿದೆ.

ಅಮೆರಿಕ ಎಲ್ಲಾ ದೇಶಗಳಲ್ಲಿಯೂ ನಡೆಯುವ ಆಂತರಿಕ ಕಲಹಗಳನ್ನು ಉಪಯೋಗಿಸಿಕೊಳ್ಳುತ್ತದೆ. ಲಿಬಿಯಾದಲ್ಲಿ ಈಗ ನಡೆಯುತ್ತಿರುವುದೂ ಅದುವೇ. ಇರಾನ್‌ನ ಶಿಯಾ ಮಸ್ಜಿದ್‌ನೊಳಗೆ ಬಾಂಬಿಟ್ಟು ಸುನ್ನಿ-ಶಿಯಾ ಗಲಭೆಗೆ ಹುನ್ನಾರ ನಡೆಸುತ್ತಿರುವುದೂ ಇದೇ ಅಮೆರಿಕದ ಬೇಹುಗಾರಿಕಾ ಸಂಸ್ಥೆ ಸಿಐಎ. ಮುಸ್ಲಿಮ್ ಜಗತ್ತನ್ನು ಮಟ್ಟ ಹಾಕಲು ಅದು ಮಾಡುತ್ತಾ ಬಂದಿರುವುದು ಸುನ್ನೀ-ಶಿಯಾ ಪಂಥಗಳ ನಡುವಿನ ಕಚ್ಚಾಟದ ದುರುಪಯೋಗ.

***39ನೆ ಪುಟಕ್ಕೆ***


**ಶಿಹಾಬ್ ರೆಸಿಡೆನ್ಸಿಯಲ್ ಸ್ಕೂಲ್** | **ಶಿಹಾಬ್ ಇಂಗ್ಲೀಷ್ ಮೀಡಿಯಂ ಸ್ಕೂಲ್**

ಪ್ರೈಮರಿ, ಅಪ್ಪರ್ ಪ್ರೈಮರಿ ಮತ್ತು ಪ್ರೌಢ ಶಾಲೆಯ ಮಕ್ಕಳ ಧಾರ್ಮಿಕ ಹಾಗೂ ಲೌಕಿಕ ವಿದ್ಯಾ ಕೇಂದ್ರ



ಪ್ರತೀ ವರ್ಷದಂತೆ ಈ ವರ್ಷವೂ S.S.L.C ಪಬ್ಲಿಕ್ ಪರೀಕ್ಷೆಯಲ್ಲಿ ಶೇ.100% ಫಲಿತಾಂಶ ಬಂದಿರುತ್ತದೆ.

ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಹಾಸ್ಟೆಲ್ ಸೌಲಭ್ಯವಿದೆ.

- ಧಾರ್ಮಿಕ ಹಾಗೂ ಲೌಕಿಕ ಶಿಕ್ಷಣ.
- ಎಸ್.ಎಸ್.ಎಲ್.ಸಿ. ವಿದ್ಯಾಭ್ಯಾಸದ ಜೊತೆಗೆ ಕಂಪ್ಯೂಟರ್ ತರಬೇತಿ.
- ಅರ್ಹತೆಗನುಸಾರ ವಿದ್ಯಾರ್ಥಿವೇತನ.
- ಮಂಗಳೂರಿನಿಂದ 32ಕಿ.ಮೀ. ದಕ್ಷಿಣದಲ್ಲಿ ರಾಷ್ಟ್ರೀಯ ಹೆದ್ದಾರಿ 17ರ ಪಕ್ಕದ ಪ್ರಶಾಂತ ವಾತಾವರಣ.

ದಾಖಲಾತಿಗಾಗಿ ಸಂಪರ್ಕಿಸಿರಿ

ಚೆಯರ್‌ಮೆನ್,
ಶೇಕ್ ಅಬ್ದುಲ್ಲಾ, ಬಿ.ಎ; ಎಫ್.ಸಿ.ಎ.,
ಚಾರ್ಟರ್ಡ್ ಅಕೌಂಟೆಂಟ್, ಚರ್ಚ್ ಬಿಲ್ಡಿಂಗ್, ಕೊಡಿಯಾಲ್ ಬೈಲ್,
ಮಂಗಳೂರು - 575003,
ಫೋನ್ : 0824-2440339(O), 2495121(R)
ಇಮೈಲ್ : sheikhabdullah@email.com
ಫ್ಯಾಕ್ಸ್ : 0824 : 4256762 ಮೊಬೈಲ್ : 98440 35786

ಪ್ರಾಂಶುಪಾಲರು,
ಶಿಹಾಬುಲ್ ಉಲೂಮ್ ರೆಸಿಡೆನ್ಸಿಯಲ್ ಸ್ಕೂಲ್,
ಅಡ್ಕಬಂದಿಯೋಡ್, ಮಂಗಲಪಾಡಿ - 671 324
ಉಪ್ಪಳ, ಕಾಸರಗೋಡ್ ಜಿಲ್ಲೆ,
ಫೋನ್ : 04998 - 240222, 240333
ಫ್ಯಾಕ್ಸ್ : 04998-240333
ವೆಬ್‌ಸೈಟ್ : www.shihabfoundation.org

# ಅಲಮಾರದ ಸುತ್ತ

ಉಸ್ಮಾನ್‌ಹಾಜಿ ಮನೆಮಂದಿಯೊಡನೆ ಬೆಳಗಿನಿಂದ ಒಂದೇ ಸವನೆ ಸಿಡುಕುತ್ತಿದ್ದರು. ಅಲಮಾರದಲ್ಲಿ ಇಟ್ಟಿದ್ದ ಅವರಿಗೆ ಅತ್ಯಗತ್ಯವಾಗಿ ಬೇಕಾಗಿದ್ದ ಕೆಲವು ಕಾಗದ ಪತ್ರಗಳು ಕಾಣೆಯಾಗಿದ್ದವು. ಅದನ್ನು ಹುಡುಕುವ ಸಲುವಾಗಿ ಅವರು ಮನೆಯಲ್ಲಿದ್ದ ಕಬ್ಬಿಣದ ಅಲಮಾರವನ್ನು ಸಂಪೂರ್ಣ ಜಾಲಾಡುತ್ತಿದ್ದರು. ಆ ಕಪಾಟಿನಲ್ಲಿ ಅವರು ಜೋಪಾನವಾಗಿ ಇಡದ ಸಾಮಾನಿಲ್ಲ. ವಿದ್ಯುತ್‌ಬಿಲ್, ಮನೆತೆರಿಗೆ ರಶೀದಿ, ಜಮಾಅತ್ ಕಮಿಟಿ ನೀಡಿದ ವಂತಿಗೆ ರಶೀದಿಯಿಂದ ತೊಡಗಿ ಸ್ಪ್ಯಾನರ್, ಸ್ಕ್ರೂಡ್ರೈವರ್, ಮೊಳೆ ಹೀಗೆ ಎಲ್ಲದಕ್ಕೂ ಅದರೊಳಗೆ ಸ್ಥಾನವಿತ್ತು. ಕಪಾಟಿನ ಬಾಗಿಲು ತೆರೆದು ನೋಡಿದರೆ ಗುಜರಿ ಅಂಗಡಿಯ ಗೋಡಾನಿನ ದೃಶ್ಯ ನೆನಪಿಗೆ ಬರುತ್ತಿತ್ತು. ಮೊದಲ ಬಾರಿಗೆ ನೋಡುವವನಿಗೆ ದಿಗಿಲಾಗುವ ರೀತಿಯಲ್ಲಿದ್ದ ಆ ಕಪಾಟಿನೊಳಗೆ ಆ ಮನೆಯ ಯಾರೂ ತಪ್ಪಿಯೂ ಕೈ ಹಾಕುತ್ತಿರಲಿಲ್ಲ. ಅಗತ್ಯಕ್ಕೆ ಬೇಕಾದ ಯಾವುದಾದರು ವಸ್ತು ಅದರೊಳಗಿದೆ ಎಂದು ತಿಳಿದರೆ ಅದನ್ನು ಹುಡುಕಿ ತೆಗೆಯುವುದು ಹೇಗೆ ಎಂಬ ಚಿಂತೆ ಆ ಮನೆಯಲ್ಲಿದ್ದ ಎಲ್ಲರ ತಲೆ ತಿನ್ನುತ್ತಿತ್ತು.



ಉಸ್ಮಾನ್ ಹಾಜಿ ಪ್ರತಿಯೊಂದು ವಸ್ತುವಿನ ಕುರಿತು ಬಹಳ ಎಚ್ಚರಿಕೆ ವಹಿಸುವ ಅಸಾಮಿ. ಮನೆಯವರಿಗೆ ಅಗತ್ಯ ಸಾಮಾನುಗಳ ಬಗ್ಗೆ ಕಾಳಜಿ ಇಲ್ಲ ಎಂಬುದು ಅವರು ದಿನನಿತ್ಯ ಮಾಡುವ ಆರೋಪ. ಉಸ್ಮಾನ್‌ಹಾಜಿಯ ಅತಿಯಾದ ಕಾಳಜಿ ಮನೆಯವರಲ್ಲಿ ಒಂದು ರೀತಿಯ ನಿರ್ಲಕ್ಷ್ಯ ಬೆಳೆಯಲು ಕಾರಣವಾಗಿತ್ತು. ಮನೆಯಲ್ಲಿ ಸಣ್ಣಪುಟ್ಟ ಸಲಕರಣೆಗಳನ್ನು ಬಳಸಿದ ಬಳಿಕ ಅದನ್ನು ಬಳಸಿದ ಜಾಗದಲ್ಲೆ ಬಿಟ್ಟುಬರುವುದು ಮನೆಯವರೆಲ್ಲರ ಜಾಯಮಾನವಾಗಿ ಬಿಟ್ಟಿತ್ತು. ಸದಾ ಕಣ್ಣರಳಿಸಿ ಹುಡುಕಾಟ ನಡೆಸುವವರಂತೆ ಮನೆ ವಠಾರದಲ್ಲಿ ಸುಳಿದಾಡುವ ಉಸ್ಮಾನ್ ಹಾಜಿಗೆ ಇಂತಹ ವಸ್ತುಗಳು ಕಣ್ಣಿಗೆ ಬಿದ್ದೇ ಬೀಳುತ್ತಿತ್ತು. ಆ ಬಳಿಕ ಮನೆಯಲ್ಲಿ ಮನೆಯವರ ನಿರ್ಲಕ್ಷ್ಯದ ಕುರಿತಂತೆ ನಿರರ್ಗಳವಾಗಿ ಅವರ ಬಾಯಿಯಿಂದ ಉದುರುವ ಅಣಿಮುತ್ತುಗಳನ್ನು ಕೇಳುವ ಸೌಭಾಗ್ಯ ಆ ಮನೆಯವರದಾಗಿತ್ತು. ಇದು ದಿನನಿತ್ಯ ಮಾಮೂಲಿಯಾಗಿ ನಡೆಯುವ ಆಚಾರದಂತೆ ತಪ್ಪದೆ ನಡೆಯುತ್ತಿತ್ತು.

ಅನಿವಾರ್ಯ ಸಂದರ್ಭದಲ್ಲಿ ಉಸ್ಮಾನ್ ಹಾಜಿಯ ಕಪಾಟನ್ನು ಆಶ್ರಯಿಸಬೇಕಾಗಿ ಬಂದರೆ ಬಹಳ ಎಚ್ಚರಿಕೆಯಿಂದ ಮನೆಯವರು ಅದನ್ನು ಉಪಯೋಗಿಸುತ್ತಿದ್ದರು. ಕಾರಣ ಅದರೊಳಗೆ ಕೈ ಹಾಕುವುದು ಹುತ್ತಕ್ಕೆ ಕೈ ಹಾಕಿದಷ್ಟೆ ಅಪಾಯಕಾರಿ ಎಂಬುದು ಅನುಭವದ ಮೂಲಕ ಮನೆಯವರು ಕಂಡುಕೊಂಡ ವಿಚಾರ. ಇತ್ತೀಚೆಗೆ ಉಸ್ಮಾನಾಕರ ಮಗ ಶಾಕಿರ್ ಸ್ವಿಚ್ ಬೋರ್ಡ್ ರಿಪೇರಿ ಮಾಡಲು ಸ್ಕ್ರೂಡ್ರೈವರ್‌ಗಾಗಿ ಕಪಾಟಿನಲ್ಲಿ ಹುಡುಕಾಟ ನಡೆಸುತ್ತಿದ್ದ ವೇಳೆ ಅದರೊಳಗಿದ್ದ ಕಬ್ಬಿಣದ ತುಂಡೊಂದು ಕಾಲಿಗೆ ಬಿದ್ದು ವಾರಗಟ್ಟಲೆ ನರಳಾಡಿದ್ದ. ಇದಾದ ಎರಡೇ

*ಉಸ್ಮಾನ್ ಹಾಜಿಯ ಮುಖದಲ್ಲಿ ಆಗುವ ಕ್ಷಣಕ್ಷಣದ ಬದಲಾವಣೆಯನ್ನು ಮನೆ ಕೆಲಸ ಮಧ್ಯೆ ಗಮನಿಸುತ್ತಿದ್ದ ಪತ್ನಿ ರಹ್ಮತ್ತಾದ ಉಸ್ಮಾನ್‌ಹಾಜಿಯ ಏರಿದ ಬಿಸಿಯನ್ನು ಸ್ವಲ್ಪ ತಣಿಸುವ ಸಲುವಾಗಿ ಒಂದು ಗ್ಲಾಸ್ ಲಿಂಬೆ ಶರಬತ್ ಮಾಡಿಕೊಂಡು ಹುಲಿ ಬೋನಿಗೆ ತೆರಳುವವರಂತೆ ಬೆದರುತ್ತಲೆ ಅವರ ಬಳಿಗೆ ಹೋಗಿದ್ದರು. ಉಸ್ಮಾನ್‌ಅಲ್ಲಿ ಪೇರಿಸಿಟ್ಟ ಸಾಮಾನುಗಳ ರಾಶಿಯೊಂದನ್ನು ಕಾಣದೆ ಎಡವಿದ ಕಾರಣ ಗಲಿಬಿಲಿಯಲ್ಲಿದ್ದ ರಹ್ಮತ್ತಾದರ ಗ್ಲಾಸಿನಲ್ಲಿದ್ದ ಶರಬತ್ ಸ್ವಲ್ಪ ಕೆಳಗೆ ಚೆಲ್ಲಿಬಿಟ್ಟಿತು. ಉಸ್ಮಾನ್‌ಹಾಜಿಯ ಮನದಲ್ಲಿ ಕುದಿಯುತ್ತಿದ್ದ ಜ್ವಾಲಾಮುಖಿ ಸ್ಫೋಟಗೊಳ್ಳಲು ಇಷ್ಟು ಸಾಕಾಯಿತು. ಅವರು ತನ್ನ ಕೈಯಲ್ಲಿದ್ದ ಪುಸ್ತಕದ ಕಟ್ಟನ್ನು ಎತ್ತಿ ಒಗೆದು ''ನಿನಗೇನು ಕಣ್ಣು ಕಾಣಿಸುವುದಿಲ್ಲವೇ, ಇಷ್ಟು ಹೊತ್ತು ಕಷ್ಟಪಟ್ಟದ್ದು ಎಲ್ಲಾ ಹಾಳಾಯಿತು '' ಎಂದು ಆಕಾಶ ಭೂಮಿ ಒಂದಾಗುವಂತೆ ಒದರತೊಡಗಿದರು.*

ದಿನದಲ್ಲಿ ಉಸ್ಮಾನಾಕರ ಪತ್ನಿ ರಹ್ಮತ್ತಾದ ಅದೇ ಕಪಾಟಿನೊಳಗೆ ಯಾವುದೋ ವಸ್ತುಗಾಗಿ ಜಾಲಾಡಿದಾಗ ಅದರೊಳಗಿದ್ದ ಹರಿತವಾದ ಬ್ಲೇಡಿನಿಂದ ಕೈಗೆ ಗಾಯ ಮಾಡಿಕೊಂಡಿದ್ದರು. ಅನಿವಾರ್ಯವಾಗಿ ಅದರ ಸಹವಾಸಕ್ಕೆ ಹೋದವನನ್ನು ಆ ಕಪಾಟು ಸಾಕಷ್ಟು ಸತಾಯಿಸದೆ ಬಿಡುತ್ತಿರಲಿಲ್ಲ. ಮನೆಯವರು ಆ ಕಪಾಟಿಗೆ 'ಗುಜರಿ' ಎಂಬ ಸಾಂಕೇತಿಕ ನಾಮವನಿಟ್ಟು ಅದೇ ಹೆಸರಿನಿಂದ ಕರೆಯುತ್ತಿರುವುದು ಉಸ್ಮಾನ್ ಹಾಜಿಗೆ ಮಾತ್ರ ತಿಳಿದಿರಲಿಲ್ಲ.

ಇಂದು ಅದರ ಉಸಾಬರಿಗೆ ಹೋದವರು ಅದರ ಒಡೆಯ ಉಸ್ಮಾನ್‌ಹಾಜಿ. ಅದು ನೀಡುವ ಕಷ್ಟ ಏನೆಂದು ಅವರೇ ಸ್ವತಃ ಅನುಭವಿಸುತ್ತಿರುವುದನ್ನು ಕಂಡು ಮನೆ ಮಂದಿ ಒಳಗೊಳಗೆ ಸಂತೋಷ ಅನುಭವಿಸುತ್ತಿದ್ದರು. ಇದಾವುದೂ ತಿಳಿಯದ ಉಸ್ಮಾನ್ ಹಾಜಿ ಹಣೆಯಲ್ಲಿ ಬೆವರಿಳಿಸಿಕೊಂಡು ಯಾವುದೋ ಒಂದೆರಡು ಕಾಗದ ಪತ್ರಕ್ಕಾಗಿ ಹುಡುಕಾಡಿ ಹುಡುಕಾಡಿ ಸೋತು ಹೋಗಿದ್ದರು. ಸುಬ್‌ಹ್ ನಮಾಝ್ ಮುಗಿಸಿದ ತಕ್ಷಣ ಅವರ ಹುಡುಕಾಟ ಕ್ರಿಯೆ ಆರಂಭವಾಗಿತ್ತು. ಅದರೊಳಗಿದ್ದ ಎಲ್ಲಾ ಸಾಮಾನನ್ನು ಒಂದೊಂದಾಗಿ ತೆಗದು ಕೆಳಗಿರಿಸಿದ ಬಳಿಕವೂ ಅವರಿಗೆ ಬೇಕಾದ ದಾಖಲೆ ಪತ್ರ ಸಿಕ್ಕಿರಲಿಲ್ಲ. ಅದಾಗಲೆ ಅವರ ಸಹನೆಯ ಕಟ್ಟೆ ಒಡೆಯತೊಡಗಿತ್ತು. ಯಾವುದೇ ಕ್ಷಣದಲ್ಲಿ ಅವರು ಸ್ಫೋಟಗೊಳ್ಳುವ ಹಂತಕ್ಕೆ ಅವರು ಬಂದು ತಲುಪಿದ್ದರು. ಉಕ್ಕಿ ಬರುವ ಕೋಪವನ್ನು ಒಂದು ರೀತಿಯಲ್ಲಿ ತಡೆಹಿಡಿದು ಹಣೆಯಲ್ಲಿ ನೆರಿಗಟ್ಟಿದ್ದ ಬೆವರಿನ ಸಾಲನ್ನು ಬಲಗೈಯ ತೋರುಬೆರಳಿನಿಂದ ಒರೆಸಿ ತೆಗೆದು ಬಲವಾಗಿ ಒಗೆದರು.

ಉಸ್ಮಾನ್ ಹಾಜಿಯ ಮುಖದಲ್ಲಿ ಆಗುವ ಕ್ಷಣಕ್ಷಣದ ಬದಲಾವಣೆಯನ್ನು ಮನೆ ಕೆಲಸ ಮಧ್ಯೆ ಗಮನಿಸುತ್ತಿದ್ದ ಪತ್ನಿ ರಹ್ಮತ್ತಾದ ಉಸ್ಮಾನ್‌ಹಾಜಿಯ ಏರಿದ ಬಿಸಿಯನ್ನು ಸ್ವಲ್ಪ ತಣಿಸುವ ಸಲುವಾಗಿ ಒಂದು ಗ್ಲಾಸ್ ಲಿಂಬೆ ಶರಬತ್ ಮಾಡಿಕೊಂಡು ಹುಲಿ ಬೋನಿಗೆ ತೆರಳುವವರಂತೆ ಬೆದರುತ್ತಲೆ ಅವರ ಬಳಿಗೆ ಹೋಗಿದ್ದರು. ಉಸ್ಮಾನ್‌ಅಲ್ಲಿ ಪೇರಿಸಿಟ್ಟ ಸಾಮಾನುಗಳ ರಾಶಿಯೊಂದನ್ನು ಕಾಣದೆ ಎಡವಿದ ಕಾರಣ ಗಲಿಬಿಲಿಯಲ್ಲಿದ್ದ ರಹ್ಮತ್ತಾದರ ಗ್ಲಾಸಿನಲ್ಲಿದ್ದ ಶರಬತ್ ಸ್ವಲ್ಪ ಕೆಳಗೆ ಚೆಲ್ಲಿಬಿಟ್ಟಿತು. ಉಸ್ಮಾನ್‌ಹಾಜಿಯ ಮನದಲ್ಲಿ ಕುದಿಯುತ್ತಿದ್ದ ಜ್ವಾಲಾಮುಖಿ ಸ್ಫೋಟಗೊಳ್ಳಲು ಇಷ್ಟು ಸಾಕಾಯಿತು. ಅವರು ತನ್ನ ಕೈಯಲ್ಲಿದ್ದ ಪುಸ್ತಕದ ಕಟ್ಟನ್ನು ಎತ್ತಿ ಒಗೆದು ''ನಿನಗೇನು ಕಣ್ಣು ಕಾಣಿಸುವುದಿಲ್ಲವೇ, ಇಷ್ಟು ಹೊತ್ತು ಕಷ್ಟಪಟ್ಟದ್ದು ಎಲ್ಲಾ ಹಾಳಾಯಿತು '' ಎಂದು ಆಕಾಶ ಭೂಮಿ ಒಂದಾಗುವಂತೆ ಒದರತೊಡಗಿದರು.

ಸ್ವಲ್ಪ ಹೊತ್ತು ಎಲ್ಲವನ್ನು ತಾಳ್ಮೆಯಿಂದ ಆಲಿಸಿದ ರಹ್ಮತ್‌ದಾದ ಕೈಲಿದ್ದ ಶರಬತ್‌ನ ಗ್ಲಾಸನ್ನು ಜೋರಾಗಿ ಕುಕ್ಕಿದಂತೆ ಅಲ್ಲಿಟ್ಟು 'ನಿಮಗೇನು ಹುಚ್ಚು ಹಿಡಿದಿದೆಯೇ, ಹೋಗಿ ಕಂಕನಾಡಿಯಲ್ಲಿ ಅಡ್ಮಿಟ್ ಆಗಿರಿ' ಎಂದು ಜೋರಾಗಿ ಹೇಳಿ ಗೊಣಗುತ್ತಾ ಅಲ್ಲಿಂದ ಜಾಗ ಖಾಲಿ ಮಾಡಿದರು.

ಅಗ್ನಿಪರ್ವತದಂತೆ ಕುದಿಯುತ್ತಿದ್ದ ಉಸ್ಮಾನ್ ಹಾಜಿ ತನ್ನ ಮನದಲ್ಲಿದ್ದ ಲಾವರಸವನ್ನೆಲ್ಲ ಕಕ್ಕಿದ ಬಳಿಕ ಸ್ವಲ್ಪ ಶಾಂತವಾಗಿದ್ದರು. ಕೋಪದ ಭರದಲ್ಲಿ ತನ್ನಿಂದಾದ ಕೆಟ್ಟ ವರ್ತನೆ ಅವರಲ್ಲಿ ಪಶ್ಚಾತಾಪ ಮೂಡಿಸಿತ್ತು. ಏನು ಮಾಡುವುದೆಂದು ತಿಳಿಯದೆ ಚಡಪಡಿಸುತ್ತಾ ಜಗಲಿಯ ಮೂಲೆಯಲ್ಲಿ ಕುಳಿತು ಬೀಡಿ ಸೇದತೊಡಗಿ ಯೋಚನಾ ಮಗ್ನರಾಗಿದ್ದ ಅವರಿಗೆ 'ಗುಜರಿ ಉಂಟಾ ಗುಜರೀ' ಎಂದು ರಾಗವಾಗಿ ಹೇಳುತ್ತಾ ಬಂದ ಅಬ್ಬಾಸ್‌ನ ಕರೆಗೆ ಎಚ್ಚರಗೊಂಡರು.

''ಇಲ್ಲೊಂದು ಗುಜರಿ ಕಪಾಟಿದೆ ಕೊಂಡುಹೋಗು,ಕೊಟ್ಟ ಹಣ ಸಾಕು '' ಎಂದು ಮನೆಯೊಳಗಿನಿಂದ ಜೋರಾಗಿ ರಹ್ಮತ್ತಾದ ಹೇಳಿದ ಮಾತು ಅಬ್ಬಾಸ್‌ನ ಮುಖದಲ್ಲಿ ಕಿರುನಗೆ ಮೂಡಿಸಿದರೆ ಉಸ್ಮಾನ್ ಹಾಜಿ ಎಂಬ ಅಗ್ನಿಪರ್ವತದಲ್ಲಿ ಮತ್ತೊಂದು ಸ್ಫೋಟಕ್ಕೆ ಸಿದ್ಧತೆಯೋ ಎಂಬಂತೆ ಹೊಗೆ ಏಳತೊಡಗಿತ್ತು.

★★★

# ಲೋಕಾಯುಕ್ತರ ಬಲೆಗೆ ಬಿದ್ದ ಮಡಿಕೇರಿ ಪೊಲೀಸರು

## ಬಹಿರಂಗಗೊಳ್ಳುತ್ತಿರುವ ಗಲಭೆಯ ಸಂಚು

**24-3-2011**ರಂದು ಮಡಿಕೇರಿಯಲ್ಲಿ ನಡೆದ ಹಿಂದು ಸಮಾಜೋತ್ಸವದ ಬೆನ್ನಿಗೆ ಹುಟ್ಟಿಕೊಂಡ ಗಲಭೆಯಲ್ಲಿ ಅಮಾಯಕ ಮುಸ್ಲಿಮರನ್ನು ಫಿಕ್ಸ್ ಮಾಡಿದ ವಿಚಾರ ಎಲ್ಲರಿಗೂ ತಿಳಿದದ್ದೇ. ಸಂಘಪರಿವಾರದ ಮುಖಂಡರು, ಸ್ಥಳೀಯ ಬಿಜೆಪಿ ಶಾಸಕರು ಪೊಲೀಸ್ ಇಲಾಖೆಯ ಮೇಲೆ ಒತ್ತಡ ಹೇರುವ ಮೂಲಕ ಇಡೀ ಗಲಭೆಯ ಆರೋಪವನ್ನು ಮುಸ್ಲಿಮರ ತಲೆಗೆ ಕಟ್ಟಿದ್ದಲ್ಲದೆ, ಸಂಘಪರಿವಾರದ ಮುಖಂಡ ಅಜಿತ್ ಕುಮಾರ್ ನೀಡಿದ ದೂರಿನ ಮೇರೆಗೆ ಹಲವು ಮಂದಿ ಮುಸ್ಲಿಮ್ ಯುವಕರನ್ನು ಪ್ರಕರಣಗಳಲ್ಲಿ ಫಿಕ್ಸ್ ಮಾಡಲಾಗಿತ್ತು. ಮುಸ್ಲಿಮರಿಗಾದ ಅನ್ಯಾಯದ ವಿರುದ್ಧ ದನಿಯೆತ್ತಿದ 'ಮುಸ್ಲಿಮ್ ಹಿತರಕ್ಷಣಾ ವೇದಿಕೆ ಮತ್ತು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ'ದ ಜಂಟಿ ನಿಯೋಗವು ಪೊಲೀಸರು ಅನುಸರಿಸುತ್ತಿರುವ ದ್ವಿಮುಖ, ಪಕ್ಷಪಾತಿ ಕಾರ್ಯವೈಖರಿಯ ವಿರುದ್ಧ ಉನ್ನತ ಪೊಲೀಸ್ ಅಧಿಕಾರಿಗೆ ಹಾಗೂ ರಾಜ್ಯಪಾಲರಿಗೆ ದೂರು ಸಲ್ಲಿಸಿತ್ತು. ಇದೆಲ್ಲ ಹಳೆಯ ವಿಚಾರವಾಗಿದ್ದರೂ ಇದೀಗ ಪ್ರಕರಣವು ತಿರುವು ಪಡೆದುಕೊಂಡಿದ್ದು, ಸಂಘಪರಿವಾರದ ಅಣತಿಯಂತೆ ಕಾರ್ಯನಿರ್ವಹಿಸುತ್ತಿದ್ದ ಮಡಿಕೇರಿ ಪೊಲೀಸ್ ವೃತ್ತನಿರೀಕ್ಷಕ ಕೃಷ್ಣಕುಮಾರ್ ಇದೀಗ ಲೋಕಾಯುಕ್ತ ಬಲೆಗೆ ಬಿದ್ದು ತಲೆಮರೆಸಿಕೊಂಡಿದ್ದಾರೆ. ಇದೇ ಅಮಾಯಕರ ವಿರುದ್ಧ ಕೇಸು ದಾಖಲಿಸಿಕೊಂಡು ಕಿರುಕುಳ ನೀಡುತ್ತಿದ್ದ ಕೃಷ್ಣಕುಮಾರ್, ಜಾವೀದ್ ಎಂಬವರಿಂದ ಸುಮಾರು 30 ಸಾವಿರ ರೂ. ಬೇಡಿಕೆಯನ್ನೂ ಇಟ್ಟಿದ್ದರು. ಪ್ರಕರಣದಲ್ಲಿ ಜಾವೀದ್ ಹೆಸರು ಕೂಡ ಇತ್ತು. ಕೇಸ್‌ಫೈಲ್‌ನಿಂದ ಹೆಸರು ತೆಗೆದುಹಾಕುವುದಕ್ಕಾಗಿ 30 ಸಾವಿರ ರೂ. ಬೇಡಿಕೆ ಇಟ್ಟಿದ್ದ ಕೃಷ್ಣಕುಮಾರ್, ಕೊನೆಗೆ 10 ಸಾವಿರ ರೂಪಾಯಿಗೆ ಡೀಲ್ ಮಾಡಿಕೊಂಡಿದ್ದರು. ಜಾವೀದ್‌ರಿಂದ ಈ ಹಣವನ್ನು ಪಡೆಯುವುದಕ್ಕಾಗಿ ಪೊಲೀಸ್ ಸಿಬ್ಬಂದಿ ಮಹದೇವ ಸ್ವಾಮಿ ಮತ್ತು ಎಚ್.ಎಸ್.ಮಧು ಎಂಬಿಬ್ಬರನ್ನು ಕಳುಹಿಸಿದ್ದರು.

ಜಾವೀದ್‌ರಿಂದ ಹಣ ಪಡೆಯುತ್ತಿದ್ದಾಗ ರೆಡ್‌ಹ್ಯಾಂಡ್ ಆಗಿ ಸ್ವಾಮಿ ಮತ್ತು ಮಧು ಸಿಕ್ಕಿಬಿದ್ದರೆ, ಪ್ರಮುಖ ಆರೋಪಿ ಕೃಷ್ಣಕುಮಾರ್ ಸುದ್ದಿತಿಳಿಯುತ್ತಿದ್ದಂತೆಯೇ ತಲೆಮರೆಸಿಕೊಂಡಿದ್ದರು. ಲೋಕಾಯುಕ್ತರ ದಾಳಿಯಿಂದಾಗಿ ಮಡಿಕೇರಿಯಲ್ಲಿ ನಡೆದ ಗಲಭೆಯ ಹಿಂದಿನ ಷಡ್ಯಂತ್ರಗಳು ಒಂದೊಂದಾಗಿಯೇ ಹೊರಬರತೊಡಗಿವೆ.



ಮಡಿಕೇರಿಯಲ್ಲಿ ನಡೆದ ಹಿಂದು ಸಮಾಜೋತ್ಸವದಲ್ಲಿ ಪಾಲ್ಗೊಂಡಿದ್ದ ಸಂಘಪರಿವಾರದ ಕಾರ್ಯಕರ್ತರು.

**ಮಡಿಕೇರಿ ಗಲಭೆ : 2011**ರ ಮಾರ್ಚ್ 24ರಂದು ಮಡಿಕೇರಿಯಲ್ಲಿ ನಡೆದ ಹಿಂದು ಸಮಾಜೋತ್ಸವದ ಹೊತ್ತಿನಲ್ಲೇ ಗಲಭೆಯೂ ಸೃಷ್ಟಿಯಾಗಿತ್ತು. ಸಂಘಪರಿವಾರದ ಕಿಡಿಗೇಡಿಗಳು ನಗರದ ಮುಸ್ಲಿಮರ ಅಂಗಡಿಗಳಿಗೆ ನುಗ್ಗಿ ದಾಂಧಲೆ ನಡೆಸಿದ್ದರು. ಇದರ ವಿರುದ್ಧ ಅಂಗಡಿ ಮಾಲಕರು ಪೊಲೀಸರಿಗೆ ದೂರು ನೀಡಿದ್ದರೂ ಪ್ರಕರಣವನ್ನು ತಿರುಚಿ ದಾಖಲಿಸಿಕೊಂಡಿದ್ದಲ್ಲದೆ, ಸಂಘಪರಿವಾರದ ಮುಖಂಡರು ಮತ್ತು ಸ್ಥಳೀಯ ಬಿಜೆಪಿ ಶಾಸಕರ ಪ್ರಭಾವಕ್ಕೊಳಗಾಗಿ ಪೊಲೀಸರು ಮುಸ್ಲಿಮ್ ಅಂಗಡಿ ಮುಂಗಟ್ಟುಗಳಿಗೆ ರಕ್ಷಣೆ ನೀಡದೆ ಮೌನವಹಿಸಿದರು.

ಇದರ ವಿರುದ್ಧ ಮುಸ್ಲಿಮ್ ಹಿತರಕ್ಷಣಾ ವೇದಿಕೆ ಮತ್ತು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಮಡಿಕೇರಿ ನಗರ ಬಂದ್‌ಗೆ ಕರೆ ನೀಡಿತ್ತು. ಇದೇ ಸಂದರ್ಭದಲ್ಲಿ ಪೊಲೀಸ್ ಇಲಾಖೆ ನಗರದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿತ್ತು. ಬಂದ್ ಕರೆಯನ್ನು ಹಿಂಪಡೆಯುವಂತೆ ಇಲಾಖೆಯು ಸಂಘಟಕರಲ್ಲಿ

ಮನವಿ ಮಾಡಿಕೊಂಡಿತ್ತು. ಆದರೆ ನ್ಯಾಯ ಸಿಗುವವರೆಗೆ ಹೋರಾಟವನ್ನು ಮುಂದುವರಿಸುವುದಾಗಿ ತಿಳಿಸಿದ ಸಂಘಟನೆಗಳು, ಆರೋಪಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಆಗ್ರಹಿಸಿದವು. ಇದೇ ದಿನ ಸಂಘಪರಿವಾರದ ಮುಖಂಡ ಅಜಿತ್ ಕುಮಾರ್‌ಗೆ ಸೇರಿದ ಮೂಕಾಂಬಿಕಾ ಎಂಟರ್‌ಪ್ರೈಸಸ್ ಎಂಬ ಅಂಗಡಿಗೆ ದುಷ್ಕರ್ಮಿಗಳು ಕಲ್ಲುತೂರಾಟ ನಡೆಸಿದ್ದರು. ಈ ವಿಚಾರವಾಗಿ ಪೊಲೀಸರಿಗೆ ದೂರು ನೀಡಿದ ಅಜಿತ್ ಕುಮಾರ್, ಕೆಲವು ಮಂದಿ ಮುಸ್ಲಿಮ್ ಯುವಕರ ಹೆಸರನ್ನು ನೀಡಿದ. ಆ ಕೂಡಲೇ ಪೊಲೀಸರು ಅಮಾಯಕ ಮುಸ್ಲಿಮ್ ಯುವಕರ ಮೇಲೆ ಕೇಸು ದಾಖಲಿಸಿಕೊಂಡು ಬೇಟೆಯಾಡಲಾರಂಭಿಸಿದರು. ಈ ಹಿಂದೆ ಮುಸ್ಲಿಮ್ ಅಂಗಡಿಗಳಿಗೆ ನುಗ್ಗಿ ದಾಂಧಲೆ ನಡೆಸಿದವರ ವಿರುದ್ಧ ದೂರು ನೀಡಿದರೂ ಯಾವುದೇ ಕ್ರಮ ತೆಗೆದುಕೊಳ್ಳದ ಪೊಲೀಸರು, ಅಜಿತ್ ಕುಮಾರ್ ನೀಡಿದ ಸುಳ್ಳು ದೂರಿನ ಮೇಲೆ ಕ್ಷಿಪ್ರವಾಗಿ ಕ್ರಮ ತೆಗೆದುಕೊಂಡಿದ್ದರ ಉದ್ದೇಶವೇನು? ನಿಜವಾಗಿಯೂ ಅಜಿತ್ ಕುಮಾರ್ ಅಂಗಡಿಗೆ ಕಲ್ಲು ತೂರಿರುವುದು ಷಡ್ಯಂತ್ರವೇ?


ದುಷ್ಕರ್ಮಿಗಳಿಂದ ದಾಳಿಗೊಳಗಾಗಿರುವ ಸ್ಮಾರಕದ ಬಾಗಿಲು.

ಪೊಲೀಸರ ವರ್ತನೆ ನೋಡಿದಾಗ ಯಾರಿಗೆ ಬೇಕಾದರೂ ಇಂತಹ ಸಂದೇಹ ಹುಟ್ಟಬಹುದು. ಅಷ್ಟೇ ಅಲ್ಲ, ಸಮಾಜೋತ್ಸವಕ್ಕೆ ಮುಂಚೆ ಮಡಿಕೇರಿಯ ರಾಜರ ಗದ್ದುಗೆ ಸ್ಮಾರಕದ ಬಾಗಿಲಿಗೆ ಬೆಂಕಿ ಹಚ್ಚಿದ ಪ್ರಕರಣದಲ್ಲೂ ಮುಸ್ಲಿಮ್ ಯುವಕರ ಹೆಸರನ್ನು ಫಿಕ್ಸ್ ಮಾಡಲಾಗಿದೆ ಎಂಬುದು ಮುಸ್ಲಿಮ್ ಹಿತರಕ್ಷಣಾ ವೇದಿಕೆ ಮತ್ತು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ಆರೋಪ. ಇಡೀ ಘಟನೆಯನ್ನು ಸಿಬಿಐ ತನಿಖೆಗೊಳಪಡಿಸಬೇಕು ಎಂದು ಒತ್ತಾಯಿಸಲಾಗುತ್ತಿದೆ.


ರಾಜ್ಯಪಾಲರಿಗೆ ದೂರು ಸಲ್ಲಿಸುತ್ತಿರುವ ಮುಸ್ಲಿಮ್ ಹಿತರಕ್ಷಣಾ ವೇದಿಕೆ ಮತ್ತು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ಮುಖಂಡರು.

**ಮಡಿಕೇರಿ ಗಲಭೆ ಪೂರ್ವ ಯೋಜಿತವೇ? :** ಮಡಿಕೇರಿಯ ರಾಜರಗದ್ದುಗೆ ಸ್ಮಾರಕ ಬಾಗಿಲಿಗೆ ಬೆಂಕಿಹಚ್ಚಿದ ಪ್ರಕರಣವು ಹಲವು ಸಂಶಯಗಳನ್ನು ಹುಟ್ಟುಹಾಕಿದೆ. ಈ ಘಟನೆಯನ್ನು ಹಿನ್ನೆಲೆಯಾಗಿಟ್ಟು ಕೋಮುವಾದಿ ಅಜೆಂಡಾವೊಂದನ್ನು ಮಡಿಕೇರಿಯಲ್ಲಿ ಜಾರಿಗೆ ತರುವ ಷಡ್ಯಂತ್ರವೊಂದು ನಡೆದಿದೆ ಎಂದು ತಿಳಿದುಬಂದಿದೆ. ಕಾರಣ, ಗದ್ದುಗೆಯ ಆಸುಪಾಸಿನಲ್ಲಿ 31 ಮುಸ್ಲಿಮ್ ಕುಟುಂಬಗಳು ನೆಲೆಸಿವೆ. ಈ ಕುಟುಂಬಗಳನ್ನು ಒಕ್ಕಲೆಬ್ಬಿಸುವುದಕ್ಕಾಗಿ ಮಡಿಕೇರಿ ನಗರದಲ್ಲಿ ಗಲಭೆ ಸೃಷ್ಟಿಸಲು ವ್ಯವಸ್ಥಿತ ಸಂಚು ನಡೆದಿದೆ ಮತ್ತು ನಡೆಯುತ್ತಿದೆ ಎಂಬುದು ಪ್ರಗತಿಪರ ಸಂಘಟನೆಗಳ ಆರೋಪ. ಸಂಘಪರಿವಾರದ ಹಿನ್ನೆಲೆಯನ್ನು ಅವಲೋಕಿಸಿದಾಗ ಈ ಆರೋಪವು ವಾಸ್ತವಾಂಶದಿಂದ ಕೂಡಿದ್ದು ಎಂದೇ ಹೇಳಬಹುದು.

**ರಾಜ್ಯಪಾಲರಿಗೆ ದೂರು :** ಸಂಘಪರಿವಾರದ ಸಂಚು, ಪೊಲೀಸರ ಪಕ್ಷಪಾತಿ ಧೋರಣೆಯ ವಿರುದ್ಧ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ಸಲ್ಲಿಸಲಾಗಿದ್ದರೂ ಯಾವುದೇ ಪ್ರಯೋಜನವಾಗದ ಹಿನ್ನೆಲೆಯಲ್ಲಿ ಮಾನ್ಯ ರಾಜ್ಯಪಾಲರಿಗೆ ಸಮಗ್ರ ವರದಿಯನ್ನು ಒಪ್ಪಿಸಿ ದೂರು ನೀಡಲಾಗಿದೆ. ಮಡಿಕೇರಿ ನಗರದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ತಪ್ಪಿತಸ್ಥ ಪೊಲೀಸ್ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಮಡಿಕೇರಿಯ ಘಟನೆಯನ್ನು ಸಮಗ್ರವಾಗಿ ಸಿಬಿಐಗೆ ಒಪ್ಪಿಸಬೇಕು, ಆರೋಪಿಗಳಿಗೆ ಶಿಕ್ಷೆಯಾಗಬೇಕು ಎಂಬುದು ನಾಗರಿಕರ ಆಗ್ರಹ.

ಆದರೆ ಮಡಿಕೇರಿಯ ಸದ್ಯದ ಪರಿಸ್ಥಿತಿ ಬೇಲಿಯೇ ಎದ್ದು ಹೊಲ ಮೇಯಿದಂತಾಗಿದೆ.

# ಇಸ್ಲಾಮ್‌ನ ಸಮಗ್ರತೆ

ಪ್ರಪಂಚಕ್ಕೆ ಕಾಲಿರಿಸಿ ಮಾನವನಲ್ಲಿ ಬೆಳೆದು ವಿಕಾಸ ಹೊಂದಿ ಅವನನ್ನು ಹೆಚ್ಚು ಆಕರ್ಷಿಸಲು ಮತ್ತು ಪ್ರಭಾವಕ್ಕೆ ಒಳಪಡಿಸಲು ಇಸ್ಲಾಮ್‌ಗೆ ಸಾಧ್ಯವಾಗಿದೆ. ಖಲೀಫಾ ಉಮರ್(ರ), ಡ್ಯಾನಿಯಲ್ ಸ್ಟ್ರೀಕ್‌ರಂತಹ ಐತಿಹಾಸಿಕ ಮತ್ತು ವರ್ತಮಾನ ಕಾಲದ ಇಸ್ಲಾಮಿನ ಕಡು ವೈರಿಗಳಾಗಿ ಹೋರಾಟಕ್ಕಿಳಿದವರೂ ಕೂಡ ಕೊನೆಗೆ ಇಸ್ಲಾಮಿನ ವಕ್ತಾರರಾಗಿ ಮಾರ್ಪಟ್ಟದ್ದು ಅದಕ್ಕೆ ಜನರ ಮನಸ್ಸನ್ನು ಗೆಲ್ಲುವ ಮತ್ತು ಜನರನ್ನು ಆಕರ್ಷಿಸುವ ಶಕ್ತಿಯಿದೆ ಎಂಬ ಕಾರಣದಿಂದಾಗಿತ್ತು.

ಆದಿ ಮಾನವನಿಂದ ತೊಡಗಿ ವಿವಿಧ ರಾಷ್ಟ್ರದ ವಿವಿಧ ಗುಣಸ್ವಭಾವ ಹೊಂದಿದ ಮಾನವರ ಮೂಲಕ ವಿಕಾಸವನ್ನು ಹೊಂದುತ್ತಾ ತಲೆಮಾರಿನಿಂದ ತಲೆಮಾರಿಗೆ ಕೈ ಬದಲಾಗುತ್ತಾ ಅಂತ್ಯ ಪ್ರವಾದಿ (ಸ)ರೊಂದಿಗೆ ಪೂರ್ಣಗೊಂಡ ಇಸ್ಲಾಂ ಕೇವಲ 100 ವರ್ಷಗಳ ಅವಧಿಯಲ್ಲಿ ಏಷ್ಯಾ, ಆಫ್ರಿಕಾ, ಯುರೋಪ್ ಮೊದಲಾದ ದೇಶಗಳಲ್ಲಿ ವ್ಯಾಪಿಸುತ್ತಾ ಜನರ ಮನವನ್ನು ಗೆಲ್ಲುವ ಧರ್ಮವಾಗಿ ಮಾರ್ಪಟ್ಟಿರುವುದು ಈ ಆಕರ್ಷಕ ಶಕ್ತಿಯಿಂದ ಎಂಬುದನ್ನು ತಿಳಿಯಬೇಕು. ಇಸ್ಲಾಮಿಗೆ ಬಾಗಿಲನ್ನು ಮುಚ್ಚಿದ ರಾಷ್ಟ್ರಗಳ ಜನರ ಮನಸ್ಸಿನೊಳಗೂ ಪ್ರವೇಶಿಸುವ ಇಸ್ಲಾಮಿನ ಈ ಸಾಮರ್ಥ್ಯ, ಅಲ್ಲಾಹನು ಅದಕ್ಕೆ ನೀಡಿದ ಪರಿಪೂರ್ಣತೆಯಿಂದ ಎಂದು ನಾವು ತಿಳಿದುಕೊಳ್ಳಬೇಕು. ಜನರು ಮತ್ತು ರಾಷ್ಟ್ರಗಳು ವಿವಿಧ ಸಮಸ್ಯೆಗಳಿಗೆ ಪರಿಹಾರವೆಂಬಂತೆ ಇಸ್ಲಾಮಿನ ಬಳಿಗೆ ಎಡತಾಕುತ್ತಿರುವುದನ್ನು ವರ್ತಮಾನ ಕಾಲದಲ್ಲಿ ನಾವು ನೋಡುತ್ತಿದ್ದೇವೆ. ಇಸ್ಲಾಮ್‌ನ ವಿರುದ್ಧ ಯುದ್ಧ ಘೋಷಿಸಿದ ಅಮೆರಿಕಾದಲ್ಲಿ 2001-02 ರಲ್ಲಿ ಸುಮಾರು 34000 ಜನರು ಇಸ್ಲಾಂ ಧರ್ಮ ಸ್ವೀಕರಿಸಿದ್ದರು. ಇಸ್ಲಾಂ ವಿರುದ್ಧದ ಯುದ್ಧದಲ್ಲಿ ಅಮೆರಿಕಾದ ಮಿತ್ರ ಪಡೆಯಾದ ಬ್ರಿಟನ್‌ನಲ್ಲಿ ಮುಸ್ಲಿಂ ಜನಸಂಖ್ಯೆ ಗಣನೀಯವಾಗಿ ಹೆಚ್ಚಿದೆ ಎಂದು ಅಂಕಿ ಅಂಶ ಸೂಚಿಸುತ್ತದೆ. ಇತ್ತೀಚೆಗೆ ಪ್ರಪಂಚದ ಪ್ರತಿಭಾವಂತರ ಪಟ್ಟಿಯಲ್ಲಿ ಹೆಸರುಗಳಿಸಿದ ಪತ್ರಕರ್ತೆ ಇವಾನ್‌ರೆಡ್ಲಿ, ಬ್ರಿಟನ್‌ನ ಮಾಜಿ ಪ್ರಧಾನಿ ಪತ್ನಿಯ ಸಹೋದರಿ ಲಾರೆನ್‌ಬೂತ್, ಪಾಪ್ ಗಾಯಕ ಮೈಕೆಲ್ ಜಾಕ್ಸನ್, ಕ್ರಿಕೆಟ್ ತಾರೆ ಯೂಸುಫ್ ಯೋಹಾನ, ಫುಟ್‌ಬಾಲ್‌ನ ಇತಿಹಾಸ ತಾರೆ ತಿಯರಿ ಹೆಂಡ್ರಿ ಮೊದಲಾದವರು ಇಸ್ಲಾಮ್ ಸ್ವೀಕರಿಸಿದ್ದಾರೆ. ಇವರಂತಹ ಜನರಮನಸ್ಸನ್ನು ಗೆಲ್ಲಲು ಸಾಧ್ಯವಾಗಿದ್ದರೆ ಅದು ಇಸ್ಲಾಮಿನ ಸಾಮರ್ಥ್ಯವಲ್ಲದೆ ಬೇರೆನ್ನೇನು?

ಜಗತ್ತು ಇಂದು ಹಲವು ವಿಚಾರಗಳಲ್ಲಿ ಬದಲಿ ಮಾರ್ಗವನ್ನು ಹುಡುಕುತ್ತಿದೆ. ಬಂಡವಾಳಶಾಹಿ ದೇಶ, ಕಮ್ಯೂನಿಸ್ಟ್ ದೇಶ ಮತ್ತು ಅಭಿವೃದ್ಧಿಶೀಲ ದೇಶಗಳು ಇಸ್ಲಾಮಿನ ಸಿವಿಲ್-ಕ್ರಿಮಿನಲ್ ಕಾನೂನುಗಳ ಬಗ್ಗೆ ಸದಾ ಚರ್ಚೆ ನಡೆಸುತ್ತಿವೆ. ಕೇರಳ ಸರಕಾರ ಇಸ್ಲಾಮಿಕ್ ಬ್ಯಾಂಕಿಂಗ್‌ಗೆ ಅನುಮತಿ ನೀಡಿರುವುದು ಇಲ್ಲಿ ಎತ್ತಿ ಹೇಳಬೇಕಾಗಿದೆ.

**ಇಸ್ಲಾಮ್ ಅಂದರೇನು**

ಜಗತ್ತಿನ ನೂರು ಕೋಟಿಗೂ ಮಿಕ್ಕ ಜನರು ವಿಶ್ವಾಸವನ್ನು ಹೊಂದಿ ಅದನ್ನು ತಮ್ಮ ಆಚಾರದಲ್ಲಿ ಅಳವಡಿಸಿಕೊಂಡಿರುವ ಒಂದು ಧರ್ಮದ ಹೆಸರೇ ಇಸ್ಲಾಮ್. ಅಸ್ಲಮ ಎಂಬ ಅರಬಿ ಭಾಷೆಯ ಕ್ರಿಯಾಪದದಿಂದ ಇಸ್ಲಾಮ್ ಎಂಬ ಪದ ಉಂಟಾಗಿದೆ. ಆತ್ಮಸಮರ್ಪಣೆ, ಶರಣಾಗತಿ ಎಂಬ ಸಾಮಾನ್ಯ ಅರ್ಥಗಳನ್ನು ಅದು ನೀಡುತ್ತದೆ. ಪ್ರವಾದಿ(ಸ)ರೊಡನೆ ಓರ್ವರು ಕೇಳಿದರು . 'ಇಸ್ಲಾಮ್ ಅಂದರೇನು ? ' ಪ್ರವಾದಿ(ಸ)ರು ಅದಕ್ಕೆ ಹೀಗೆ ಉತ್ತರ ನೀಡುತ್ತಾರೆ. 'ನೀನು ನಿನ್ನ ಹೃದಯವನ್ನು ಅಲ್ಲಾಹನಿಗೆ ಶರಣಾಗಿಸು. ಅದೇ ಇಸ್ಲಾಮ್ 'ಇದೇ ಅರ್ಥದಲ್ಲಿ ಕುರ್‌ಆನ್ ಸಹ ಆ ಪದವನ್ನು ಉಪಯೋಗಿಸಿದೆ. ಕೆಲವು ಉದಾಹರಣೆಗಳನ್ನು ನೋಡಿರಿ . *ಅಲ್ಲಾಹನಿಗೆ ಆತ್ಮಾರ್ಪಣೆಗೈಯುವ ಮತ್ತು ಸತ್ಸಂಪ್ರದಾಯದಲ್ಲಿ ನಡೆಯುವಾತನು ಯಾರೇ ಇರಲಿ, ಅವನಿಗೆ ಅವನ ಪ್ರಭುವಿನ ಬಳಿ ಅವನ ಪ್ರತಿಫಲವಿದೆ. ಅಂತಹವರಿಗೆ ಯಾವುದೇ ಭಯ ಮತ್ತು ವ್ಯಥೆಯು ಸಂಭವವೇ*

*ಇರಲಾರದು(2:112) ಅವರ ಪ್ರಭು ಅವರೊಡನೆ,ಮುಸ್ಲಿಮನಾಗು ಎಂದಾಗ ಅವರು ತಕ್ಷಣ 'ನಾನು ವಿಶ್ವದೊಡೆಯನ ಮುಸ್ಲಿಮನಾದೆನು ' ಎಂದರು.(2:131)*

ಮಾನವನ ಇಹಪರ ವಿಜಯಕ್ಕೆ ದಾರಿದೀಪವಾಗಿ ಸೃಷ್ಟಿಕರ್ತನಾದ ಅಲ್ಲಾಹನು ಪ್ರವಾದಿಗಳ ಮೂಲಕ ನೀಡಿದ ಜೀವನ ಕ್ರಮವೇ ಇಸ್ಲಾಮ್. ಪ್ರವಾದಿ ಮುಹಮ್ಮದ್(ಸ)ರ ಮೂಲಕ ಅದು ಪರಿಪೂರ್ಣಗೊಂಡು ಅವತೀರ್ಣ ಕೊನೆಗೊಂಡಿತು. ಅಲ್ಲಾಹನ ಈ ಜೀವನ ಕ್ರಮಗಳನ್ನು ಒಪ್ಪಿಕೊಂಡು ಆತ್ಮಸಮರ್ಪಣೆಯನ್ನು ಮಾಡುವವರನ್ನು ಮುಸ್ಲಿಮರೆಂದು ಕರೆಯುತ್ತಾರೆ.

**ಇಸ್ಲಾಮ್ ಯಾಕಾಗಿ?**

ಈ ಪ್ರಪಂಚದಲ್ಲಿ ಇದುವರೆಗೆ ಕಂಡ ಸೃಷ್ಟಿಗಳಲ್ಲಿ ಅತ್ಯುತ್ತಮವಾದ ಸೃಷ್ಟಿ ಮಾನವನಾಗಿದ್ದಾನೆ. ಬುದ್ಧಿ ಶಕ್ತಿ ಮತ್ತು ಯುಕ್ತಿ ಮೊದಲಾದವುಗಳಿಂದ ಅನುಗ್ರಹೀತನಾಗಿದ್ದರೂ ಮಾನವನು ಪ್ರಪಂಚ ಮತ್ತು ತನ್ನ ಬಗ್ಗೆ ಪೂರ್ಣಜ್ಞಾನಿಯಲ್ಲ. ಆದುದರಿಂದ ಅವನು ತಿಳಿಯದೆ ಹಾದಿ ತಪ್ಪಿ ಹೋಗುತ್ತಾನೆ ಮತ್ತು ಕೆಡುಕುಗಳಿಗೆ ಬಲಿಯಾಗುತ್ತಾನೆ.

ಈ ಕಾರಣದಿಂದ ಮಾನವನ ಜೀವನ ಸಾರ್ಥಕಗೊಳಿಸಲು ಕೆಲವು ನಡವಳಿಕೆ ಅಥವಾ ನಿಯಮದ ಅನಿವಾರ್ಯತೆ ಇದೆ. ಜಗತ್ತು ಇದನ್ನು ಅಂಗೀಕರಿಸಿದೆ. ಎಲ್ಲಾ ದೇಶಗಳು ಹಾಗು ಸಂಯುಕ್ತ ಸಂಘಟನೆಗಳು ತಮ್ಮ ಜನರಿಗಾಗಿ ನಿಯಮ ನಿರ್ಮಾಣ ಮಾಡುತ್ತಿರುವುದು ಇದಕ್ಕಾಗಿಯೇ. ದೇಶದ ಸಿವಿಲ್-ಕ್ರಿಮಿನಲ್ ಕಾನೂನುಗಳನ್ನು ಇಲ್ಲಿನ ಪ್ರತಿಯೊಬ್ಬ ಪೌರನೂ ಪಾಲಿಸಬೇಕೆಂದು ಎಲ್ಲರೂ ಹೇಳುತ್ತಾರೆ. ಅದನ್ನು ಉಲ್ಲಂಘಿಸುವವನನ್ನು ಶಿಕ್ಷೆಗೆ ಗುರಿಪಡಿಸಲಾಗುತ್ತದೆ. ಅದೇ ವೇಳೆ ಮಾನವನಿಗಾಗಿ ತಾನೆ ನಿರ್ಮಿಸಿದ ನಿಯಮಗಳು ಉದ್ದೇಶಿತ ಮಟ್ಟದಲ್ಲಿ ಪರಿಣಾಮ ಬೀರುತ್ತಿಲ್ಲ ಎಂಬುದು ಅನುಭವಗಳಿಂದ ತಿಳಿದುಕೊಳ್ಳಬಹುದಾಗಿದೆ.

ಇದರಿಂದಾಗಿ ಮಾನವರು ನಿರ್ಮಿಸಿದ ಕಾನೂನುಗಳು ತಿದ್ದುಪಡಿ ಅಥವಾ ಅಮೂಲಾಗ್ರ ಬದಲಾವಣೆಗೆ ಒಳಪಡುತ್ತಲೇ ಇದೆ. ಜಗತ್ತಿನ ಬಗ್ಗೆ ಮತ್ತು ಮಾನವರ ಬಗ್ಗೆ ಸರಿಯಾದ ತಿಳುವಳಿಕೆ ಹೊಂದಿಲ್ಲದ ಮಾನವ ನಿರ್ಮಿಸುವ ನಿಯಮಗಳು ಅಪೂರ್ಣ ಮತ್ತು ವಿರೋಧಾಭಾಸಗಳಿಂದ ಕೂಡಿರುತ್ತದೆ. ಮಾನವನಿಗೆ ಇಲ್ಲಿ ಸ್ಪಷ್ಟವಾದ ಮಾರ್ಗದರ್ಶನದ ಅಗತ್ಯವಿದೆ. ಪ್ರಪಂಚ ಮತ್ತು ಮಾನವನ ಬಗ್ಗೆ ಸೂಕ್ಷ್ಮವಾಗಿ ತಿಳಿದುಕೊಂಡವನ ಮಾರ್ಗದರ್ಶನ ಅವನಿಗೆ ಬೇಕು. ಅದಕ್ಕೆ ಯೋಗ್ಯನಾದವನು ಅಲ್ಲಾಹನ ಹೊರತು ಈ ಜಗತ್ತಿನಲ್ಲಿ ಬೇರೆ ಯಾರಾದರು ಇದ್ದಾರೆಯೇ? ಸೃಷ್ಟಿಗಳಾದ ಮಾನವರಿಗಾಗಿ ಸರ್ವಜ್ಞನಾದ ಸೃಷ್ಟಿಕರ್ತನು ನೀಡಿದ ಮಾರ್ಗದರ್ಶನವೇ ಇಸ್ಲಾಮ್. ಜೀವನದ ಎಲ್ಲಾ ವಲಯಗಳಲ್ಲೂ ಮಾರ್ಗದರ್ಶನವನ್ನು ಬಯಸುವ ಮಾನವನಿಗೆ ಅತ್ಯುತ್ತಮವಾದ ಮಾರ್ಗದರ್ಶನ ನೀಡುವುದೇ ಅದರ ಉದ್ದೇಶ. *ನಾವಂದೆವು ನೀವೆಲ್ಲರೂ ಇಲ್ಲಿಂದ ಹೊರಗಿಳಿಯಿರಿ. ಮುಂದೆ ನನ್ನ ಕಡೆಯಿಂದ ಮಾರ್ಗದರ್ಶನವು ನಿಮ್ಮ ಬಳಿ ಬಂದಾಗ, ಯಾರು ಆ ಮಾರ್ಗದರ್ಶನದಂತೆ ನಡೆಯುವರೋ ಅವರಿಗೆ ಯಾವುದೇ ಭಯ ಮತ್ತು ಚಿಂತೆ ಇರಲಾರದು. (2:38)* ವಾಸ್ತವದಲ್ಲಿ ಈ ಕುರ್‌ಆನ್ ಅತ್ಯಂತ ನೇರ ಮಾರ್ಗವನ್ನು ತೋರಿಸಿ ಕೊಡುತ್ತದೆ. ಇದನ್ನು ಸ್ವೀಕರಿಸಿಕೊಂಡು ಸತ್ಕರ್ಮವೆಸಗಿ ದವರಿಗೆ ದೊಡ್ಡ ಸತ್ಫಲವಿದೆಯೆಂಬ ಸುವಾರ್ತೆಯನ್ನು ನೀಡುತ್ತದೆ. (17: 9) *ಅದರ ಮೂಲಕ ಅಲ್ಲಾಹನು ತನ್ನ ಸಂಪ್ರೀತಿಯನ್ನು ಅಪೇಕ್ಷಿಸುವವರಿಗೆ ರಕ್ಷಾಮಾರ್ಗವನ್ನು ತೋರಿಸಿ ತನ್ನ ಇಚ್ಛೆಯಿಂದ ಅವರನ್ನು ಅಂಧಕಾರಗಳಿಂದ ಹೊರತೆಗೆದು ಪ್ರಕಾಶದ ಕಡೆಗೆ ಒಯ್ಯುತ್ತಾನೆ. ಮತ್ತು ಸನ್ಮಾರ್ಗದತ್ತ ಅವರಿಗೆ ಮಾರ್ಗದರ್ಶನ ಮಾಡುತ್ತಾನೆ (5:16)*

**ಮೂಲಭೂತ ತತ್ವಗಳು**

ಇಸ್ಲಾಮಿನ ಮೂಲಭೂತ ತತ್ವಗಳನ್ನು ಪ್ರವಾದಿ(ಸ)ರು ಸರಳವಾಗಿ ವಿವರಿಸಿರುತ್ತಾರೆ : ಅಮ್ರ್‌ಬಿನ್ ಅಬಸ (ರ) ವರದಿ: ಓರ್ವ ವ್ಯಕ್ತಿ ಪ್ರವಾದಿ(ಸ)ರ ಬಳಿ ಬಂದು ಕೇಳುತ್ತಾರೆ: ''ಇಸ್ಲಾಮ್ ಅಂದರೆ ಏನು ?'' ''ನಿನ್ನ ಹೃದಯದಲ್ಲಿ ನೀನು ಅಲ್ಲಾಹನನ್ನು ಸ್ಮರಿಸುವುದೇ ಇಸ್ಲಾಮ್. ಅದರೊಂದಿಗೆ ಮುಸ್ಲಿಮರನ್ನು ನಿನ್ನ ನಾಲಿಗೆ ಮತ್ತು ಕೈಗಳಿಂದ ಸುರಕ್ಷಿತವಾಗಿರಿಸಬೇಕು.''ಆ ವ್ಯಕ್ತಿ ಕೇಳಿದರು : ''ಇಸ್ಲಾಮಿನ ಅತ್ಯುನ್ನತ ರೂಪ ಯಾವುದು ?'' ಪ್ರವಾದಿ(ಸ) ಹೇಳಿದರು: 'ಈಮಾನ್' ಆ ವ್ಯಕ್ತಿ ಪುನಃ ಕೇಳಿದರು: ''ಈಮಾನ್ ಅಂದರೇನು ?'' ಪ್ರವಾದಿ(ಸ) ಹೇಳುತ್ತಾರೆ: '' ನೀನು ಅಲ್ಲಾಹನಲ್ಲಿ, ದೇವಚರರಲ್ಲಿ, ವೇದಗ್ರಂಥಗಳಲ್ಲಿ, ಮರಣಾನಂತರ ಜೀವನದಲ್ಲಿ ವಿಶ್ವಾಸವಿಡುವುದೇ ಈಮಾನ್ '' ಅವರು ಪುನಃ ಕೇಳುತ್ತಾರೆ: 'ಈಮಾನಿನ ಅತ್ಯುನ್ನತ ರೂಪ ಯಾವುದು ? ' ಪ್ರವಾದಿ(ಸ) ಹೇಳುತ್ತಾರೆ: ''ಹಿಜ್ರಾ''ಅವರು ಕೇಳುತ್ತಾರೆ: ''ಹಿಜ್ರಾ ಅಂದರೇನು ?'' ಪ್ರವಾದಿ(ಸ) ಹೇಳುತ್ತಾರೆ: ''ನೀನು ಪಾಪಗಳಿಂದ ದೂರ ನಿಲ್ಲುವುದೇ ಹಿಜ್ರಾ'' ಅವರು ಕೇಳುತ್ತಾರೆ: 'ಅತ್ಯುನ್ನತ ಹಿಜ್ರಾ ಯಾವುದು ? ' ಪ್ರವಾದಿ(ಸ) ಹೇಳುತ್ತಾರೆ: 'ಜಿಹಾದ್' ಅವರು ಕೇಳುತ್ತಾರೆ: ''ಜಿಹಾದ್ ಅಂದರೇನು

?''ಪ್ರವಾದಿ(ಸ) ಹೇಳುತ್ತಾರೆ: ನಿಷೇಧಿಗಳು ನಿನ್ನೊಡನೆ ಹೊಡೆದಾಡಲು ಸನ್ನದ್ಧರಾಗಿ ಬರುವುದನ್ನು ಕಾಣುವಾಗ ಅವರೊಡನೆ ನೀನು ಯುದ್ಧ ಮಾಡುವುದೇ ಜಿಹಾದ್. ಅವರು ಪುನಃ ಕೇಳುತ್ತಾರೆ: 'ಅತ್ಯುನ್ನತ ಜಿಹಾದ್ ಯಾವುದು ?' ಪ್ರವಾದಿ(ಸ)ರು ಹೇಳುತ್ತಾರೆ: 'ಯಾರ ಕುದುರೆ ಗಾಯಗೊಂಡು ಬೀಳುವುದೋ, ಯಾರ ರಕ್ತ ಹರಿಯಿತೋ ಆತನ ಜಿಹಾದ್ ಅತ್ಯುನ್ನತವಾದ ಜಿಹಾದ್' (ಮುಸನ್ನಫ್ ಅಬ್ದುರಝ್ಝಾಕ್)

1. ಅಲ್ಲಾಹು

ಇಸ್ಲಾಮಿನ ಮೂಲಭೂತ ತತ್ವಗಳಲ್ಲಿ ಒಂದನೆಯದು ಅಲ್ಲಾಹನಲ್ಲಿರುವ ವಿಶ್ವಾಸವಾಗಿದೆ. ಇದು 'ಲಾಇಲಾಹ ಇಲ್ಲಲ್ಲಾಹ್' ಎಂಬ ಆದರ್ಶ ವಾಕ್ಯದ ಮೂಲಕ ಘೋಷಿಸಲಾಗುತ್ತದೆ. ಎಲ್ಲದಕ್ಕೂ ಸಾಧ್ಯವಿರುವ ಪರಮಾಧಿಕಾರಿಯಾಗಿ ಇರುವವನು ಅಲ್ಲಾಹನು ಮಾತ್ರ ಎಂಬುದು ಈ ವಾಕ್ಯದ ಅರ್ಥವಾಗಿದೆ. ಇದನ್ನು ಪವಿತ್ರ ಕುರ್‌ಆನ್ ಸರಳವಾಗಿ ತಿಳಿಸಿಕೊಡುತ್ತದೆ.

*ಅವನು , ಅಲ್ಲಾಹನು ಏಕೈಕನು. ಅಲ್ಲಾಹನು ಸಕಲರಿಂದಲೂ ನಿರಪೇಕ್ಷನು ಮತ್ತು ಸರ್ವರೂ ಅವನ ಅವಲಂಬಿತರು. ಅವನಿಗೆ ಯಾವುದೇ ಸಂತಾನವಿಲ್ಲ. ಅವನು ಯಾರ ಸಂತಾನವೂ ಅಲ್ಲ. ಮತ್ತು ಅವನಿಗೆ ಸರಿಸಮಾನರು ಯಾರೂ ಇಲ್ಲ. (112: 1-4)*

ಮಾನವನ ಚಿಂತನೆಗಳಿಗೆ ಸರಿ ಎಂದು ತೋರುವ ಒಬ್ಬ ದೇವನನ್ನು ತೋರಿಸಿಕೊಡುವಲ್ಲಿ ವಿಫಲರಾದುದರಿಂದ ಇಸ್ಲಾಮಿನ ಹೊರತಾದ ಎಲ್ಲಾ ಧರ್ಮಗಳು ಪರಾಭವಗೊಳ್ಳುತ್ತಿವೆ. ಹಿಂದು ಧರ್ಮ 33 ಕೋಟಿ ದೇವರುಗಳನ್ನು ನಂಬುತ್ತದೆ. ಅದ್ವೈತ ಇಂದು ದೊಡ್ಡ ಸಿದ್ಧಾಂತವಾಗಿ ಪ್ರಚಾರಪಡೆಯುತ್ತಿದೆ. 'ಸೃಷ್ಟಿಕರ್ತ ಮತ್ತು ಸೃಷ್ಟಿ ಎಂಬುದು ಎರಡಲ್ಲ. ಅವೆರಡೂ ಒಂದೇ. ದೈವ ನನ್ನಲ್ಲೂ ಇದ್ದಾನೆ. ನಿನ್ನಲ್ಲೂ ಇದ್ದಾನೆ. ಮಣ್ಣಿನಲ್ಲೂ , ಮರದಲ್ಲೂ ಇದ್ದಾನೆ. ಸೃಷ್ಟಿಗಳೇ ದೇವ. ದೇವನೇ ಸೃಷ್ಟಿ' ಇದು ಅದ್ವೈತದವರ ವಾದ.

ಕ್ರೈಸ್ತರು ದೇವನನ್ನು ತ್ರೀಕತ್ವದಲ್ಲಿ ಕಾಣುತ್ತಾರೆ. ಒಬ್ಬನೇ ತಂದೆ, ಮಗ ಹಾಗು ಪವಿತ್ರ ಆತ್ಮಗಳಾಗುತ್ತವೆ. ಆ ಮೂರಕ್ಕೂ ಪ್ರತ್ಯೇಕ ವ್ಯಕ್ತಿತ್ವವಿರುತ್ತದೆ. ಅದರೊಂದಿಗೆ ಅದೆಲ್ಲವೂ ಒಂದೇ ಎಂದೂ ವಿಶ್ವಾಸವಿಡುತ್ತಾರೆ. ಅದನ್ನು ಸ್ವಲ್ಪ ಸರಿಯಾಗಿ ವಿವರಿಸಿರಿ ಎಂದು ಕೇಳುವವರೊಡನೆ ''ಯುಕ್ತಿ ವಿಚಾರಗಳಿಗೆ ಗ್ರಹಿಸಲು ಸಾಧ್ಯವಾಗದ ದೈವ ರಹಸ್ಯಗಳವು(divine secret) '' ಎಂದು ಹೇಳಿ ವಿಷಯವನ್ನು ಮತ್ತಷ್ಟು ಜಟಿಲಗೊಳಿಸುತ್ತಾರೆ.ಆದರೆ ಇಸ್ಲಾಮ್ ಮಾನವರೊಂದಿಗೆ ನಿಕಟ ಸಂಬಂಧವುಳ್ಳ ಅಲ್ಲಾಹನನ್ನು ಪರಿಚಯಿಸುತ್ತದೆ. *ಓ ಜನರೇ, ನಿಮ್ಮನ್ನೂ ನಿಮ್ಮ ಪೂರ್ವಿಕರನ್ನೂ ಸೃಷ್ಟಿಸಿದ ನಿಮ್ಮ ಪ್ರಭುವಿನ ದಾಸ್ಯ-ಆರಾಧನೆ ಮಾಡಿರಿ. (ಹೀಗೆ ಮಾಡಿದರೆ) ನೀವು ರಕ್ಷಣೆ ಹೊಂದಬಹುದು. (2:21)*

ವಿಚಾರಪೂರ್ಣವಾದ ದೈವ ಪ್ರಜ್ಞೆಯನ್ನು ಪವಿತ್ರ ಕುರ್‌ಆನ್ ನಮ್ಮ ಮುಂದಿಡುತ್ತದೆ. ಎಲ್ಲಾ ಮಾನವರನ್ನು ಕರೆದು ನೀವು ಸೃಷ್ಟಿಸಿದ ದೇವನನ್ನು ಆರಾಧಿಸಬೇಡಿರಿ. ನಿಮ್ಮನ್ನು ಸೃಷ್ಟಿಸಿ ಕ್ರಮಬದ್ಧವಾಗಿ ಬೆಳೆಸಿಕೊಂಡು ಬರುವ ದೇವನನ್ನು ನೀವು ಆರಾಧಿಸಿರಿ ಎಂದು ಘೋಷಿಸುತ್ತದೆ. ಯಾವುದೇ ರೀತಿಯ ಗೊಂದಲಗಳಿಗೆ ಆಸ್ಪದ ನೀಡದೆ ಆ ದೇವನು ಯಾರು ಎಂಬುದನ್ನು ಮಾನವನಿಗೆ ಸರಳವಾದ ಸಂಕೇತಗಳ ಮೂಲಕ ಕುರ್‌ಆನ್ ತಿಳಿಸಿಕೊಡುತ್ತದೆ. *ಅವನೇ ಭೂಮಿಯನ್ನು ನಿಮಗೆ ಹಾಸನ್ನಾಗಿ ಹಾಸಿದನು; ಆಕಾಶದ ಮೇಲ್ಛಾವಣಿ ಮಾಡಿದನು; ಮೇಲ್ಭಾಗದಿಂದ ಮಳೆ ಸುರಿಸಿದನು. ಅದರ ಮೂಲಕ ತರತರದ ಬೆಳೆಗಳನ್ನು ಉತ್ಪಾದಿಸಿ ನಿಮಗೆ ಆಹಾರ ಒದಗಿಸಿದನು. ಇದನ್ನು ನೀವು ಅರಿತಿರುತ್ತಾ ಇತರರನ್ನು ಅಲ್ಲಾಹನಿಗೆ ಪ್ರತಿಸ್ಪರ್ಧಿಗಳನ್ನಾಗಿ ಮಾಡದಿರಿ. (2: 22)*

*ಮಾನವನೊಡನೆ ಕರುಣಾಳು ಹಾಗು ಎಲ್ಲವನ್ನು ಕ್ಷಮಿಸುವವನೂ ಆದ ದೇವನನ್ನು ಪವಿತ್ರ ಕುರ್‌ಆನ್ ಹೀಗೆ ಪರಿಚಯಿಸುತ್ತದೆ. ಕುರ್‌ಆನ್ ಹೇಳುವುದನ್ನು ನೋಡಿರಿ. (ಸಂದೇಶವಾಹಕರೇ, ನನ್ನ ಪರವಾಗಿ) ಹೇಳಿರಿ ; ತಮ್ಮ ಮೇಲೆಯೇ ಅತಿರೇಕವೆಸಗಿಕೊಂಡಿರುವ ಅಲ್ಲಾಹನ ಕರುಣೆಯ ಬಗ್ಗೆ ನಿರಾಶರಾಗಬೇಡಿರಿ. ನಿಶ್ಚಯವಾಗಿಯೂ ಅಲ್ಲಾಹು ಸಕಲ ಪಾಪಗಳನ್ನು ಕ್ಷಮಿಸಿಬಿಡುತ್ತಾನೆ. ಅವನಂತು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ (39:53)*

ಪ್ರವಾದಿಗಳು

ಅಲ್ಲಾಹನು ಬಯಸಿರುವುದನ್ನು ಮಾನವರಿಗೆ ತಲುಪಿಸಲು ಅವನೇ ನಿರ್ಣಯಿಸಿದ ಒಂದು ವ್ಯವಸ್ಥೆ ಪ್ರವಾದಿಗಳಾಗಿರುತ್ತಾರೆ. ಅವರು ತಮ್ಮ ವ್ಯಕ್ತಿತ್ವವನ್ನು ಪರಿಶುದ್ಧವಾಗಿರುವಂತೆ ಅತ್ಯಂತ ಖಾಳಜಿಯನ್ನು ವಹಿಸಿರುವ ಮಾದರಿ ಪುರುಷರಾಗಿರುತ್ತಾರೆ. ಮಾನವರು ಹೇಗೆ ಜೀವಿಸಬೇಕು ಎಂದು ಅಲ್ಲಾಹನು ಆದೇಶಿಸಿರುವುದೆಲ್ಲವೂ ಪ್ರವಾದಿಗಳ ಮೂಲಕ ಮಾನವರಿಗೆ ತಿಳಿಯುತ್ತದೆ. ಅನುಕರಣೆ ಎಂಬುದು ಮಾನವನ ಸಹಜ ಸ್ವಭಾವವಾಗಿದೆ. ಮಾನವನು ಹೇಗೆ ಜೀವಿಸಬೇಕೆಂದು ತಿಳಿಯಲು ಮಾದರಿ ಮಾನವನ ಅಗತ್ಯವಿದೆ. ಭೂಮಿಯಲ್ಲಿ ಅಲ್ಲಾಹನ ಹಿತಕ್ಕನುಸಾರ ಜೀವಿಸಬೇಕೆಂದು ಬಯಸುವ ಮಾನವರಿಗೆ ಪ್ರವಾದಿಗಳು ಮಾದರಿಗಳಾಗಿದ್ದಾರೆ. ಪವಿತ್ರ ಕುರ್‌ಆನ್ ಹೀಗೆ

*ತಿಳಿಸುತ್ತದೆ. ನಿಶ್ಚಯವಾಗಿಯೂ ಅಲ್ಲಾಹನ ಸಂದೇಶವಾಹಕರಲ್ಲಿ ನಿಮಗಾಗಿ ಒಂದು ಅತ್ಯುತ್ತಮ ಮಾದರಿ ಇತ್ತು.(ಇದು) ಅಲ್ಲಾಹ್ ಹಾಗೂ ಅಂತಿಮ ದಿನವನ್ನು ನಿರೀಕ್ಷಿಸುವವನಿಗೆ ಮತ್ತು ಅಲ್ಲಾಹ್‌ನನ್ನು ಬಹಳವಾಗಿ ಸ್ಮರಿಸುವವನಿಗೆ (33: 21)*

ಅದರೊಡನೆ ವಿವಿಧ ಕಾಲಗಳಲ್ಲಿ ಪ್ರವಾದಿಗಳಿಗೆ ಅಲ್ಲಾಹನು ಬೇರೆ ಬೇರೆ ದೌತ್ಯಗಳನ್ನು ವಹಿಸಿಕೊಟ್ಟನು. ಕೊನೆಯ ಪ್ರವಾದಿ ಮುಹಮ್ಮದ್(ಸ)ರಿಗೆ ಕೊಟ್ಟಿರುವ ದೌತ್ಯ ಏನೆಂದು ಕುರ್‌ಆನ್ ತಿಳಿಸುತ್ತದೆ. *ತಮ್ಮಲ್ಲಿರುವ ತೌರಾತ್ ಮತ್ತು ಇಂಜೀಲ್ ಗಳಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಈ ಸಂದೇಶವಾಹಕ ನಿರಕ್ಷರಿ ಪ್ರವಾದಿಯ ಅನುಸರಣೆಯನ್ನು ಸ್ವೀಕರಿಸಿದವರು. (ಈ ಕೃಪೆಗೆ ಪಾತ್ರರಾಗುವರು) ಇವರು (ಪ್ರವಾದಿ) ಅವರಿಗೆ ಸತ್ಕರ್ಮದ ಆದೇಶ ನೀಡುತ್ತಾರೆ ಮತ್ತು ದುಷ್ಕೃತ್ಯದಿಂದ ತಡೆಯುತ್ತಾರೆ. ಅವರಿಗೆ ಶುದ್ಧ ವಸ್ತುಗಳನ್ನು ಧರ್ಮಸಮ್ಮತ ಮತ್ತು ಅಶುದ್ಧ ವಸ್ತುಗಳನ್ನು ನಿಷಿದ್ಧ ಗೊಳಿಸುತ್ತಾರೆ. ಅವರ ಮೇಲೆ ಹೇರಲ್ಪಟ್ಟಿರುವ ಹೊರೆಗಳನ್ನು ಇಳಿಸುತ್ತಾರೆ. ಅವರು ಬಿಗಿಯಲ್ಪಟ್ಟಿದ್ದ ಬಂಧನಗಳನ್ನು ಬಿಡಿಸುತ್ತಾರೆ. ಆದುದರಿಂದ ಇವರ ಮೇಲೆ ವಿಶ್ವಾಸವಿರಿಸುವವರು ಇವರನ್ನು ಸಮರ್ಥಿಸುವವರು, ಇವರಿಗೆ ಸಹಕಾರ ನೀಡುವವರು ಮತ್ತು ಇವರೊಂದಿಗೆ ಅವತರಿಸಲ್ಪಟ್ಟಿರುವ ಪ್ರಕಾಶವನ್ನು ಅನುಸರಿಸುವವರು ಮಾತ್ರ ಯಶಸ್ವಿಗಳಾಗುವವರು. (7: 157)*

ಇಸ್ಲಾಮಿನಲ್ಲಿ ಅವತಾರ ಎಂಬುದಿಲ್ಲ. ಮಾನವರನ್ನು ಸನ್ಮಾರ್ಗದಲ್ಲಿ ಕೊಂಡೊಯ್ಯಲು ಮಾನವರಿಂದಲೆ ಜನರನ್ನು ಆರಿಸಲಾಗುತ್ತದೆ. ಅವರಿಗೆ ದೇವಚರರ ಮೂಲಕ ಸಂದೇಶಗಳನ್ನು ತಲುಪಿಸಲಾಗುತ್ತದೆ. ಅವರು ಅಲ್ಲಾಹನು ಬಯಸಿರುವುದನ್ನು ಮಾನವರಿಗೆ ವಿವರಿಸಿ ಕೊಡುತ್ತಾರೆ. ಭೂಮಿಯಲ್ಲಿನ ಎಲ್ಲಾ ಸಮುದಾಯಗಳಿಗೂ ಅಲ್ಲಾಹನು ಪ್ರವಾದಿಗಳನ್ನು ಕಳಿಸಿಕೊಟ್ಟಿರುತ್ತಾನೆ ಎಂದು ಕುರ್‌ಆನ್ ತಿಳಿಸುತ್ತದೆ. *ನಾವು ನಿಮ್ಮನ್ನು ಸುವಾರ್ತೆ ಮತ್ತು ಎಚ್ಚರಿಕೆ ನೀಡುವವರಾಗಿ ಸತ್ಯಸಹಿತ ಕಳುಹಿಸಿರುತ್ತೇವೆ. ಎಚ್ಚರಿಕೆ ಕೊಡುವವರಾರೂ ಬಂದಿರದಂತಹ ಸಮುದಾಯವೊಂದು ಗತಿಸಿಲ್ಲ. (35: 24)*

ಈ ಪ್ರವಾದಿಗಳು ಲಕ್ಷಕ್ಕಿಂತಲೂ ಹೆಚ್ಚಿದ್ದಾರೆ.ಇವರಲ್ಲಿ ಪ್ರಮುಖರಾದ 25 ಪ್ರವಾದಿಗಳ ಹೆಸರುಗಳು ಕುರ್‌ಆನ್‌ನಲ್ಲಿದೆ. ಪ್ರವಾದಿ ದೌತ್ಯವು ಮುಹಮ್ಮದ್(ಸ)ರ ಮೂಲಕ ಕೊನೆಗೊಳ್ಳುತ್ತದೆ.

ದೇವನ ನಿಯಮಗಳು ಮಾನವರಿಗೆ ಲಭಿಸಲು ಪ್ರವಾದಿಗಳು ಮಾಧ್ಯಮಗಳಾಗಿದ್ದಾರೆ. ಮೂಸಾ(ಅ), ಇಬ್ರಾಹೀಮ್(ಅ), ಮುಹಮ್ಮದ್(ಸ) ಮೊದಲಾದ ಪ್ರವಾದಿಗಳು ಇವರಲ್ಲಿ ಪ್ರಸಿದ್ಧರಾಗಿರುತ್ತಾರೆ.

**ಪರಲೋಕ ವಿಶ್ವಾಸ**

ಇಹಲೋಕ ಜೀವನದೊಂದಿಗೆ ಮಾನವ ಜೀವನ ಕೊನೆಗೊಳ್ಳುವುದಿಲ್ಲ. ಭೂಮಿಯಲ್ಲಿನ ಕೆಲ ಕಾಲದ ಜೀವನದ ಬಳಿಕ ಮರಣ ಸಂಭವಿಸುತ್ತದೆ. ಆ ಬಳಿಕ ಅಂತ್ಯವಿಲ್ಲದ ಜೀವನವನ್ನು ಮಾನವನು ಅನುಭವಿಸಲಿದ್ದಾನೆ ಎಂದು ಇಸ್ಲಾಮ್ ಕಲಿಸುತ್ತದೆ. ಮಾನವನ ಇಹಲೋಕ ಜೀವನ ಒಂದು ಪರೀಕ್ಷಣೆಯಾಗಿದೆ. ಇಲ್ಲಿನ ಜೀವನದಲ್ಲಿ ನಾವು ಮಾಡುವ ಒಳಿತು ಕೆಡುಕುಗಳು ನಮ್ಮ ಭವಿಷ್ಯವನ್ನು ನಿರ್ಣಯಿಸುತ್ತದೆ. ಒಳ್ಳೆಯ ವಿಶ್ವಾಸಿಗಳಾಗಿ ದೇವಭಯದೊಂದಿಗೆ ಜೀವನವನ್ನು ರೂಪಿಸುವವನು ಸ್ವರ್ಗಕ್ಕೂ ನಿಷೇಧಿಗಳಾಗಿ ಜೀವಿಸಿದವನು ನರಕಕ್ಕೂ ಪ್ರವೇಶಿಸುತ್ತಾನೆ. ಪವಿತ್ರ ಕುರ್‌ಆನ್ ತಿಳಿಸುತ್ತದೆ. *ನಿಮ್ಮನ್ನು ಪರೀಕ್ಷಿಸಿ ನಿಮ್ಮ ಪೈಕಿ ಯಾರು ಸತ್ಕರ್ಮವೆಸಗುವವನೆಂದು ನೋಡಲಿಕ್ಕಾಗಿ ಅವನು ಜೀವನವನ್ನೂ ಮರಣವನ್ನೂ ಆವಿಷ್ಕರಿಸಿದನು. ಅವನು ಪ್ರಬಲನೂ ಕ್ಷಮಾಶೀಲನೂ ಆಗಿರುತ್ತಾನೆ. (67: 2)*

**ಸದಾಚಾರಿಗಳಿಗೆ ಅನುಗ್ರಹೀತ ಸ್ವರ್ಗ**

*ಸಜ್ಜನರು (ಸ್ವರ್ಗದಲ್ಲಿ) ಕರ್ಪೂರ ಜನಮಿಶ್ರಿತ ಪಾನಪಾತ್ರೆಯಿಂದ ಕುಡಿಯುವರು. ಇದೊಂದು ಹರಿಯುತ್ತಿರುವ ಚಿಲುಮೆಯಾಗಿದ್ದೂ ಅದರ ನೀರಿನೊಂದಿಗೆ ಅಲ್ಲಾಹನ ದಾಸರು ಮದಿರಾಪಾನ ಮಾಡುವರು ಮತ್ತು ತಾವಿಚ್ಚಿಸಿದೆಡೆ ನಿರಾಯಾಸವಾಗಿ ಅದರ ಶಾಖೆಗಳನ್ನು ಹೊರಡಿಸುವರು (76:5,6) ಖಂಡಿತವಾಗಿಯೂ ಧರ್ಮನಿಷ್ಠರಿಗಾಗಿ ಯಶಸ್ಸಿ ಒಂದು ಸ್ಥಾನವಿದೆ. ಅವರಿಗಾಗಿ ಉದ್ಯಾನಗಳು ಮತ್ತು ದ್ರಾಕ್ಷೆಗಳಿವೆ. ಸಮವಯಸ್ಕ ನವ ತರುಣಿಯರಿದ್ದಾರೆ. ಮತ್ತು ತುಂಬಿ ತುಳುಕುವ ಪಾನಪಾತ್ರೆಗಳಿವೆ. ಅಲ್ಲಿ ಅವರು ಯಾವುದೇ ಅಸಂಬದ್ಧ ಮತ್ತು ಸುಳ್ಳು ಮಾತನ್ನು ಕೇಳಲಾರರು. (78:31-35)*

**ನಿಷೇಧಿಗಳಾಗಿ ಜೀವನ ನಡೆಸುವವರಿಗೆ ನರಕ.**

*ವಾಸ್ತವದಲ್ಲಿ ನರಕ ಒಂದು ಬೋನಾಗಿದೆ. ಅದು ವಿದ್ರೋಹಿಗಳ ವಾಸ ಸ್ಥಾನವಾಗಿದೆ. ಅದರಲ್ಲಿ ಅವರು ದೀರ್ಘಕಾಲ ಬಿದ್ದುಕೊಂಡಿರುವರು. ಅದರೊಳಗೆ ಅವರು ಯಾವುದೇ ತಂಪನ್ನಾಗಲಿ, ಕುಡಿಯಲರ್ಹವಾದ ಯಾವುದೇ ವಸ್ತುವಿನ ರುಚಿಯನ್ನಾಗಲಿ ಸವಿಯಲಾರರು. ಏನಾದರೂ*

*ಸಿಗುವುದಿದ್ದರೆ ಅದು ಕುದಿಯುವ ನೀರು ಮತ್ತು ಹುಣ್ಣುಗಳ ಕೀವು ಮಾತ್ರ.(78:21-25)*

**ಇಸ್ಲಾಮಿನ ವಿಶೇಷತೆಗಳು**

**1.** ಮಾನವನ ಏಕತೆ. ಇಸ್ಲಾಮ್ ಎಲ್ಲಾ ಮಾನವರನ್ನು ಒಂದೆಂದು ಪರಿಗಣಿಸುತ್ತದೆ. ಕುರ್‌ಆನ್ ತಿಳಿಸುತ್ತದೆ. ಜನರೇ, ನಾವು ***ನಿಮ್ಮನ್ನು ಒಬ್ಬ ಪುರುಷ ಮತ್ತು ಸ್ತ್ರೀಯಿಂದ ಉಂಟುಮಾಡಿದೆವು. ತರುವಾಯ ನೀವು ಪರಸ್ಪರ ಪರಿಚಯ ಪಟ್ಟುಕೊಳ್ಳಲಿಕ್ಕಾಗಿ ನಿಮ್ಮ ಜನಾಂಗಗಳನ್ನೂ ಗೋತ್ರಗಳನ್ನೂ ಮಾಡಿದೆವು. ನಿಮ್ಮ ಪೈಕಿ ಅತ್ಯಂತ ಧರ್ಮನಿಷ್ಠನೇ ವಾಸ್ತವದಲ್ಲಿ ಅಲ್ಲಾಹನ ಬಳಿ ಅತಿ ಹೆಚ್ಚು ಗೌರವಕ್ಕೆ ಪಾತ್ರನು. ನಿಶ್ಚಯವಾಗಿಯೂ ಅಲ್ಲಾಹನು ಸರ್ವಜ್ಞನೂ ವಿವರಪೂರ್ಣನೂ ಆಗಿರುತ್ತಾನೆ.(49:13)***

ಪ್ರವಾದಿ(ಸ)ರು ಹೇಳಿರುತ್ತಾರೆ: ಜನರೇ !ನಿಮ್ಮ ರಕ್ಷಕ ಏಕನಾಗಿದ್ದಾನೆ. ನಿಮ್ಮ ತಂದೆಯೂ ಒಬ್ಬರೇ ಆಗಿರುತ್ತಾರೆ.ತಿಳಿಯಿರಿ! ಅರಬಿಗೆ ಅರಬೇತರನಿಗಿಂತ, ಅರಬೇತರನಿಗೆ ಅರಬಿಗಿಂತ, ಕೆಂಪು ಜನರಿಗೆ ಕಪ್ಪು ಜನರಿಗಿಂತ, ಕಪ್ಪು ಜನರಿಗೆ ಕೆಂಪು ಜನರಿಗಿಂತ ಯಾವುದೇ ಹೆಚ್ಚಿನ ಮಹತ್ವವಿಲ್ಲ. ಧರ್ಮನಿಷ್ಠೆಯ ಹೊರತು (ಅಹ್ಮದ್)

ಅದೇ ವೇಳೆ ಹಿಂದೂ ಧರ್ಮ ಮಾನವನ ಜನ್ಮದ ಆಧಾರದಲ್ಲಿ ಕೀಳು ಜಾತಿ ಎಂದು ಪರಿಗಣಿಸುತ್ತಾರೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಅಜಾತೀಯ ಎಂದೆಲ್ಲಾ ಜಾತಿಗಳಾಗಿ ವಿಂಗಡಿಸುತ್ತಾರೆ. ಮಾನವರೆಲ್ಲರನ್ನು ಒಂದೇ ಜಾತಿಯಾಗಿ ಕಾಣುವ ಇಸ್ಲಾಮ್ ವರ್ಣ, ವರ್ಗ ತಾರತಮ್ಯಗಳನ್ನು ಬಲವಾಗಿ ವಿರೋಧಿಸುತ್ತದೆ.

**2. ವಿಮೋಚನೆ-** ಮಾನವ ದೇವನ ದಾಸನಾಗಿದ್ದಾನೆ. ಆದುದರಿಂದ ಆತ ಇನ್ನಾವುದೇ ರೀತಿಯ ದಾಸ್ಯತನದಿಂದ ಸ್ವತಂತ್ರನಾಗಿದ್ದಾನೆ.

**3. ನ್ಯಾಯಕ್ಕಾಗಿ ಹೋರಾಟ:** ನ್ಯಾಯಕ್ಕಾಗಿ ಹೋರಾಡುವ ಹೋರಾಟಗಳಲ್ಲಿ ತೊಡಗಿಸಿಕೊಳ್ಳುವಂತೆ ಎಲ್ಲಾ ಮಾನವರೊಡನೆ ಇಸ್ಲಾಮ್ ಆಹ್ವಾನ ನೀಡುತ್ತದೆ.

*ಓ ಸತ್ಯವಿಶ್ವಾಸಿಗಳೇ, ನೀವು ನ್ಯಾಯದ ಧ್ವಜವಾಹಕರೂ ಅಲ್ಲಾಹನಿಗಾಗಿ ಸಾಕ್ಷ್ಯವಹಿಸುವವರೂ ಆಗಿರಿ. ನಿಮ್ಮ ನ್ಯಾಯ ಮತ್ತು ಸಾಕ್ಷ್ಯವು ಸ್ವತಃ ನಿಮ್ಮ ಅಥವಾ ನಿಮ್ಮ ಮಾತಾಪಿತರ ಮತ್ತು ನಿಮ್ಮ ಸಂಬಂಧಿಕರ ವಿರುದ್ಧವಾಗಿದ್ದರೂ ಸರಿಯೇ. ಕಕ್ಷಿಯು ಧನಿಕನಿರಲಿ ಅಥವಾ ಬಡವನಿರಲಿ ನಿಮಗಿಂತ ಹೆಚ್ಚಾಗಿ ಅಲ್ಲಾಹನು ಅವರ ಹಿತಚಿಂತಕನಾಗಿರುತ್ತಾನೆ. ಆದುದರಿಂದ ನಿಮ್ಮ ಚಿತ್ತಾಸಕ್ತಿಯ ಅನುಸರಣೆಯಲ್ಲಿ ನ್ಯಾಯ ಪರಿಪಾಲನೆಯಿಂದ ಸರಿಯಬೇಡಿರಿ. ನೀವು ಗೂಢಾರ್ಥದ ಮಾತುಗಳನ್ನಾಡಿದರೆ ಅಥವಾ ಸತ್ಯದಿಂದ ನುಣುಚಿಕೊಂಡರೆ, ನಿಶ್ಚಯವಾಗಿಯೂ ನೀವು ಮಾಡುತ್ತಿರುವ ಕರ್ಮಗಳ ಅರಿವು ಅಲ್ಲಾಹನಿಗಿದೆ ಎಂಬುದು ಚೆನ್ನಾಗಿ ತಿಳಿದಿರಲಿ (4:135)*

ಅಧರ್ಮದ ಶಕ್ತಿಯ ಮುಂದೆ ತಲೆ ಬಾಗಬಾರದು ಹಾಗು ಯಾರೊಡನೆಯೂ ಕೆಡುಕಿನೊಂದಿಗೆ ಮತ್ತು ತಪ್ಪು ನಿಲುವಿನೊಂದಿಗೆ ವರ್ತಿಸಬಾರದೆಂದೂ ಇಸ್ಲಾಮ್ ನಿರ್ದೇಶಿಸುತ್ತದೆ.

**4. ಅಂಧವಿಶ್ವಾಸದಿಂದ ವಿಮೋಚನೆ :** ಮಾನವನು ವಾಸಿಸುವ ಪರಿಸರ ಅವನ ಮೇಲೆ ಪ್ರಭಾವ ಬೀರುತ್ತದೆ ಎಂಬುದು ಒಂದು ಸಾಮಾನ್ಯ ಸಂಗತಿಯಾಗಿದೆ. ಮಕ್ಕಳಾಗಿರುವಾಗಿನಿಂದ ನಾವು ಕೇಳುತ್ತಿರುವ ಕಟ್ಟುಕಥೆಗಳು, ನುಡಿಗಳು ನಮ್ಮಲ್ಲಿ ಅಂಧವಿಶ್ವಾಸವನ್ನು ಬೆಳೆಸುತ್ತದೆ. ಕ್ಷಣ ಮಾತ್ರದಲ್ಲಿ ವರ ನೀಡಿದ, ಶಾಪ ಕೊಟ್ಟು ಕಲ್ಲು, ನಾಗಗಳಾಗಿ ಮಾರ್ಪಡಿಸಿದ ಕಥೆಗಳು ನಮ್ಮಲ್ಲಿ ಅಂಧವಿಶ್ವಾಸವನ್ನು ಬೆಳೆಸುತ್ತದೆ. ಇಂದೂ ಕೂಡ ಸಾಮಾನ್ಯ ಮಾನವರು ದೇವಮಾನವರಾಗಿ ಜನರಿಂದ ಗೌರವಿಸಲ್ಪಡುತ್ತಿದ್ದಾರೆ. ಇಸ್ಲಾಮ್ ಇಂತಹ ಎಲ್ಲಾ ಅಂಧವಿಶ್ವಾಸಗಳಿಂದ ಮಾನವನನ್ನು ದೂರವಿರಿಸುತ್ತದೆ.ಸೃಷ್ಟಿಕರ್ತನ ಹೊರತುಪಡಿಸಿ ಬೇರಾರನ್ನೂ ನೀನು ಭಯಪಡಬೇಕಾಗಿಲ್ಲ, ಅಲ್ಲಾಹನು ಬಯಸಿದಂತೆ ಜೀವನದಲ್ಲಿ ಏರುಪೇರು ನಡೆಯುವುದು ಎಂದು ಕುರ್‌ಆನ್ ಹೇಳುತ್ತದೆ.

*ಅವರೊಡನೆ ಹೇಳಿರಿ - ಅಲ್ಲಾಹನೇ ನಮಗಾಗಿ ಲಿಖಿತಗೊಳಿಸಿದುದರ ಹೊರತು ಬೇರಾವುದೂ (ಒಳಿತು ಯಾ ಕೆಡುಕು) ನಮ್ಮನ್ನು ಬಾಧಿಸುವುದಿಲ್ಲ. ಅಲ್ಲಾಹನೇ ನಮ್ಮ ಮಾಲಿಕನಾಗಿರುತ್ತಾನೆ. ಸತ್ಯವಿಶ್ವಾಸಿಗಳು ಅವನ ಮೇಲೆಯೇ ಭರವಸೆಯನ್ನಿಡಬೇಕು (9:51)*

ಪ್ರವಾದಿ(ಸ)ರ ಮಗನಾದ ಇಬ್ರಾಹೀಮ್(ರ)ರು ಮರಣಗೊಂಡ ದಿನ ಗ್ರಹಣ ಉಂಟಾಯಿತು. ಇದು ಪ್ರವಾದಿ(ಸ)ರ ಮಗನ ಮರಣದಿಂದ ಪ್ರಪಂಚ ಶೋಕ ವ್ಯಕ್ತಪಡಿಸುವುದೆಂದು ಜನರು ಹೇಳತೊಡಗಿದರು. ತಕ್ಷಣ ಪ್ರವಾದಿ(ಸ)ರು ಅವರನ್ನು ತಿದ್ದಿಕೊಂಡು 'ಗ್ರಹಣ ಅಲ್ಲಾಹನ ದೃಷ್ಟಾಂತಗಳಲ್ಲಿನ ಒಂದು ದೃಷ್ಟಾಂತವಾಗಿದೆ. ತನ್ನ ಮಗನ ಮರಣ ಮತ್ತು ಅದಕ್ಕೆ ಯಾವುದೇ ಸಂಬಂಧವಿಲ್ಲ' ಎಂದು ಹೇಳಿ ಅವರನ್ನು ಪ್ರಜ್ಞಾವಂತರಾಗಿಸುತ್ತಾರೆ(ಬುಖಾರಿ)

★★★

28ನೇ ಪುಟದಿಂದ...



## ಇನ್ನು ಒಬಾಮಾ ಮಾತ್ರ...

ಇಲಾಖೆಗಳು ಹೇಳುವ ಪ್ರಕಾರ ಲಾದೆನ್‌ನ ಸಂದೇಶಗಳು ಬಹುಶಃ ನಕಲಿಯಾಗಿವೆ. ಸಿಐಎಯ ಮಾಜಿ ಕೇಸ್ ಆಫೀಸರ್ ರೋಬರ್ಟ್ ಬೇರ್ ನ್ಯಾಶನಲ್ ಪಬ್ಲಿಕ್ ರೇಡಿಯೊ (ಎನ್‌ಪಿಆರ್)ಗೆ ಹೇಳುವಂತೆ 'ಖಂಡಿತವಾಗಿಯೂ ಆತ ಸತ್ತಿದ್ದಾನೆ'.

ಈಗ ಇನ್ನೊಂದು ಪ್ರಶ್ನೆ ಏಳುವುದೇನೆಂದರೆ ಉಸಾಮಾ ಸತ್ತಿರುವುದಾಗಿದ್ದರೆ, ಅದನ್ನು ಪ್ರಕಟಿಸಿಲ್ಲವೇಕೆ? ಅದಕ್ಕಿರುವ ಉತ್ತರವೆಂದರೆ ಜೀವಂತವಾಗಿರುವ ಹಾಗೂ ಅವಿತುಕೊಂಡಿರುವ ಉಸಾಮಾ ಸತ್ತ ಉಸಾಮಾಗಿಂತ ಅಮೆರಿಕ ಸಾಮ್ರಾಜ್ಯಶಾಹಿ ಯೋಜನೆಗಳಿಗೆ ಪ್ರಮುಖವಾಗಿತ್ತು. ಸ್ಪಷ್ಟ ಸಾಕ್ಷ್ಯಗಳು ಹೇಳುವಂತೆ ಲಾದೆನ್ ವರ್ಷಗಳ ಹಿಂದೆಯೇ ಡಿಸೆಂಬರ್ 2001ರಲ್ಲಿ ಸಾವನ್ನಪ್ಪಿದ್ದಾನೆ. 'ಭಯೋತ್ಪಾದನೆಯ ವಿರುದ್ಧ ಸಮರ'ವನ್ನು ಮುಂದುವರಿಸಲು ಈ ವರದಿಯನ್ನು ಅಮೆರಿಕ ಅಡಗಿಸಿಡಬೇಕಾಗಿತ್ತು. ಅಫ್ಘಾನಿಸ್ತಾನ, ಇರಾಕ್, ಪಾಕಿಸ್ತಾನ, ಲಿಬಿಯಾ ಮತ್ತು ಸೋಮಾಲಿಯಾ, ಯಮನ್, ಬಹ್ರೈನ್, ಫೆಲೆಸ್ತೀನ್, ಮಧ್ಯ ಆಫ್ರಿಕಾ, ಕೊಲಂಬಿಯಾ ಮತ್ತು ಇತರೆಡೆಗಳಲ್ಲಿ 'ಎನಿಮಿ ನಂಬರ್ ವನ್'ನನ್ನು ನೆಪವಾಗಿ ಬಳಸಲಾಗುತ್ತಿದೆ.

ಸೋವಿಯತ್ ವಿರುದ್ಧ ಉಸಾಮಾನನ್ನು ಸಿಐಎಯ ಆಸ್ತಿಯನ್ನಾಗಿ ಬಳಸಿದ ನಂತರ ಆತನ ಭೂತವನ್ನು ಬಳಸಿ ಹಲವು ಮುಸ್ಲಿಮ್ ರಾಷ್ಟ್ರಗಳಲ್ಲಿ ಯುದ್ಧವನ್ನು ಸಾರಿದ ಬಳಿಕ ಅಂತಿಮವಾಗಿ ಒಬಾಮಾ ಆಡಳಿತವು ಉಸಾಮಾನ ಭೂತವನ್ನು ಎಂದೆಂದಿಗೂ ದಫನ ಮಾಡಲು ನಿರ್ಧರಿಸಿದೆ. ನಂತರ ದೊಡ್ಡ ಸುಳ್ಳೊಂದು ಒಬಾಮಾನಿಂದ ಬಂದಿತು ಮತ್ತು ಅದಕ್ಕೆ ವಿನ್‌ಸ್ಟನ್ ಚರ್ಚಿಲ್‌ನ ಪ್ರತಿಕ್ರಿಯೆ, ''ಸತ್ಯವು ತನ್ನ ಪ್ಯಾಂಟ್ ಬದಲಾಯಿಸುವ ಮೊದಲೇ ಸುಳ್ಳು ಜಗತ್ತಿನ ಅರ್ಧದಷ್ಟು ಸುತ್ತಿರುತ್ತದೆ''. ಇಡೀ ಕಾರ್ಯಾಚರಣೆಯೇ ಸಂಪೂರ್ಣವಾಗಿ ವ್ಯತಿರಿಕ್ತಗಳು ಹಾಗೂ ಅನುಮಾನಗಳಿಂದ ತುಂಬಿದ್ದವು. 'ನಂಬರ್ ವನ್ ಶತ್ರು'ವನ್ನು ನಾಶಪಡಿಸುವುದಕ್ಕೆ ಬದಲಾಗಿ, ಇದೊಂದು ಕೆಟ್ಟ ಕಾದಂಬರಿಯಂತೆ ಕಾಣುತ್ತದೆ, ವಿಶೇಷವಾಗಿ ನೇರವಾಗಿ ಕಂಡವರಿಲ್ಲ, ಶವವಿಲ್ಲ, ಸ್ಪಷ್ಟ ಸಾಕ್ಷ್ಯವಿಲ್ಲ ಮತ್ತು ಅಧಿಕಾರಿಗಳ ಹೇಳಿಕೆಗಳನ್ನು ಬದಲಾಯಿಸಲಾಗುತ್ತಿದೆ.

ವಾಸ್ತವ ಸಂಗತಿಯೆಂದರೆ ಒಬಾಮಾಗೆ ಒಂದು ದೊಡ್ಡ ಸುದ್ದಿಯ ಅವಶ್ಯಕತೆಯಿತ್ತು:

1. ಒಬಾಮಾನ ಕಳೆಗುಂದುತ್ತಿರುವ ಗೌರವವನ್ನು ಹೆಚ್ಚಿಸಬೇಕಾಗಿತ್ತು. ಇದು ನಿಜವಾಗಿಯೂ ಪರಿಣಾಮಕಾರಿಯಾಗಿದೆ. ನ್ಯೂಯಾರ್ಕ್ಸ್ ಟೈಮ್ಸ್‌ನ ಜನಮತ ಸಂಗ್ರಹದ ಪ್ರಕಾರ ಎಪ್ರಿಲ್‌ನಲ್ಲಿ 46% ಶೇಕಡವಿದ್ದ ಒಬಾಮಾನ ಜನಪ್ರಿಯತೆ ಮೇಯಲ್ಲಿ 57%ಕ್ಕೆ ಏರಿದೆ. ಆದರೆ ಇದು ಹೆಚ್ಚು ಸಮಯವೇನೂ ಉಳಿಯಲಾರದು.

2. ಅಮೆರಿಕದಲ್ಲಿ ಹೆಚ್ಚುತ್ತಿರುವ ರಾಷ್ಟ್ರೀಯ ಅಗತ್ಯಗಳು ವಿಶೇಷವಾಗಿ ತೀವ್ರವಾಗುತ್ತಿರುವ ಬೀದಿ ಪ್ರತಿಭಟನೆಗಳಿಂದ ಜನರ ಮನಸ್ಸನ್ನು ತಿರುಗಿಸುವುದಕ್ಕಾಗಿ.

3. ಇನ್ನೂ ಏನೇನೋ ಸಂಭವಿಸುವುದೆಂಬ ಭಯವನ್ನು ಅಮೆರಿಕನ್ನರಲ್ಲಿ ಹುಟ್ಟಿಸುವುದು ಮತ್ತು ಅಮೆರಿಕದ ಜಾಗತಿಕ ಪ್ರಾಬಲ್ಯವನ್ನು ತಗ್ಗಿಸಲು ಇನ್ನೂ ದಾಳಿಗಳು ಸಂಭವಿಸಬಹುದೆಂಬ ಭಾವನೆಯನ್ನುಂಟುಮಾಡುವುದು.

ಈಗ ಉಸಾಮಾನ ಭೂತವನ್ನು ದಿನನಿತ್ಯದ ಬಳಕೆಯಿಂದ ಹಿಂದೆಗೆಯಲಾಗಿದೆ. ಉಸಾಮಾನ ಸಾವನ್ನು ಪ್ರಕಟಿಸುವುದು ತನ್ನ ಪ್ರಾಬಲ್ಯವನ್ನು ಕಾಪಾಡುತ್ತದೆ ಎಂಬುದು ಅಮೆರಿಕ ಮತ್ತು ಅದರ ಶಾಸಕರುಗಳ ಅಭಿಪ್ರಾಯವಾಗಿರಬಹುದು. ಆದರೆ ಉಸಾಮಾ ಸಾವಿನ ವಾರ್ತೆಯು ಮುಸ್ಲಿಮ್ ರಾಷ್ಟ್ರಗಳಲ್ಲಿ ವಿಶೇಷವಾಗಿ ಅರಬ್ ದೇಶಗಳಲ್ಲಿ ಅಶಾಂತಿಯು ಹಬ್ಬಿರುವ ಸಂದರ್ಭದಲ್ಲಿ ಮುಸ್ಲಿಮ್ ಯುವಕರಲ್ಲಿ ಅಮೆರಿಕ ವಿರೋಧಿ ಭಾವನೆ ಯಾವ ಹಂತದಲ್ಲಿ ಬೆಳೆಯಬಹುದು ಎಂಬುದನ್ನು ಎಲ್ಲರೂ ಚಿಂತಿಸುವಂತಾಗಿದೆ. ತಮ್ಮ ಸಹೋದರರು ಹಾಗೂ ಸಹೋದರಿಯರ ಮೇಲೆ ದೌರ್ಜನ್ಯಗಳು ನಡೆಯುತ್ತಿರುವುದನ್ನು ಕಂಡು ಅನುಭವಿಸುತ್ತಿರುವ ಸಾಮಾನ್ಯ ಯುವಕರನ್ನು ಒಂದಲ್ಲಾ ಒಂದು ರೀತಿಯಲ್ಲಿ ಉಸಾಮಾ ಪ್ರತಿನಿಧಿಸುತ್ತಿದ್ದ. ಉಸಾಮಾ ಆಯ್ಕೆ ಮಾಡಿದ ಹಾದಿಯನ್ನು ಹೆಚ್ಚು ಮಂದಿ ಇಷ್ಟಪಟ್ಟಿರಲಾರರು.

ಆದರೆ ಅಫ್ಘಾನ್, ಇರಾಕ್ ಮತ್ತು ಫೆಲೆಸ್ತೀನ್‌ನ ಮುಸ್ಲಿಮರ ಮೇಲೆ ಅಮೆರಿಕ ಮತ್ತು ಅದರ ಮೈತ್ರಿ ಕೂಟಗಳು ನಡೆಸಿದ ಅನ್ಯಾಯದ ವಿರುದ್ಧ ಹೋರಾಡುವುದಕ್ಕೆ ಉಸಾಮಾ ಮತ್ತು ಆತನಂತೆ ಆಲೋಚಿಸುವವರಿಗೆ ಇದೊಂದು ಮಾರ್ಗವಾಗಿದೆ. ಅರಬ್ ಜಗತ್ತಿನಲ್ಲಿ ಮುಸ್ಲಿಮ್ ಯುವಕರಲ್ಲಿ ಬೆಳೆಯುತ್ತಿರುವ ಅಮೆರಿಕ ವಿರೋಧಿ ಭಾವನೆಯು ಅಮೆರಿಕದ ಸಾಮ್ರಾಜ್ಯಶಾಹಿತ್ವವನ್ನು ಅಸಹ್ಯಪಡುವ ಇನ್ನಷ್ಟು ಸಂಘಟಿತ ಪ್ರತಿಕ್ರಿಯೆಗಳುಂಟಾಗುವುದೆಂಬುದಾಗಿ ಭಾವಿಸಬಹುದು. ಆದರೆ ಹೊಸ ಪೀಳಿಗೆಯು ಅದಕ್ಕಾಗಿ ಯಾವ ಮಾರ್ಗವನ್ನು ಅನುಸರಿಸಬಹುದು ಎಂಬುದನ್ನು ಹೇಳುವುದು ಮಾತ್ರ ಅಸಾಧ್ಯ.

# ಸಾಯಿಬಾಬಾರ ಧರ್ಮಾರ್ಥಗಳು ಪ್ರಜಾತಂತ್ರದ ಅಣಕವಲ್ಲವೇ?

● ಶಿವಸುಂದರ್



ದೈವಮಾನವ, ನಡೆದಾಡುವ ದೇವರು, ದೈವಾಂಶ ಸಂಭೂತ ಇತ್ಯಾದಿ ಅಲಂಕಾರಗಳಿಂದ ಪ್ರಭುತ್ವ ಮತ್ತು ಸಮಾಜ ಕೊಂಡಾಡುತ್ತಿದ್ದ ಸಾಯಿಬಾಬಾನಂಥ ಸಾಯಿಬಾಬಾ ಸಹ ಮೃತರಾಗಿದ್ದಾರೆ. ಸಾಯುವ ಮುನ್ನ ಸಾಮಾನ್ಯ ನರಮಾನವರಂತೆ 28ಕ್ಕೂ ಹೆಚ್ಚು ದಿನಗಳ ಕಾಲ ಹಲವಾರು ಕಾಯಿಲೆಗಳಿಂದ ನರಳಿದ್ದಾರೆ. ತಮ್ಮಲ್ಲೇ ಸರ್ವರೋಗ ನಿವಾರಣಿ ಬೂದಿಯಿದ್ದರೂ ಅವೇನೂ ದೇವಮಾನವನ ಸಾವನ್ನು ತಡೆಯಲಿಲ್ಲ. ನೋವನ್ನೂ ಕಡಿಮೆ ಮಾಡಲಿಲ್ಲ. ಬದಲಿಗೆ ಹಗಲು ರಾತ್ರಿ ಶ್ರಮಿಸಿ ಆ ನಿರ್ಜೀವ ದೇಹವನ್ನು ಏಪ್ರಿಲ್ 24ರ ತನಕ ಉಳಿಸಲು ಹರಸಾಹಸ ಪಟ್ಟಿದ್ದು ಅಮೆರಿಕಾ ಹಾಗೂ ಭಾರತದ ಅತ್ಯುತ್ತಮ ವೈದ್ಯರುಗಳು!

ಹಾಗೆ ನೋಡಿದರೆ ಇದೇ ಸಾಯಿಬಾಬಾ ವಿದೇಶಿ ಸಂಘಸಂಸ್ಥೆಗಳ ಅಪಾರ ಧನಸಹಾಯದೊಂದಿಗೆ ಕಟ್ಟಿದ್ದ ಆಸ್ಪತ್ರೆಗಳಲ್ಲಿ ಕೊಡುತ್ತಿದ್ದುದು ಸಾಯಿಬಾಬಾ ಮಂತ್ರಿಸಿದ ಬೂದಿಯನ್ನೇನಲ್ಲ. ವೈಜ್ಞಾನಿಕ ವಿಧಾನದಿಂದ ಅನ್ವೇಷಿತವಾದ ಔಷಧಿಗಳನ್ನೇ. ಈ ಆಸ್ಪತ್ರೆಯ ಸಹಾಯದೊಂದಿಗೆ ಸಾಕಷ್ಟು ಜನರು ಉಪಯೋಗ ಪಡೆದುಕೊಂಡಿದ್ದು ನಿಜ. ಆದರೆ ವಿಪರ್ಯಾಸವೇನೆಂದರೆ ಸಾಯಿಬಾಬಾರ ಸಾವು, ಆಧುನಿಕ ವೈದ್ಯಕೀಯ ಸೇವೆ ಇವೆಲ್ಲವೂ ಸಾರಾಂಶದಲ್ಲಿ ಸಾಯಿಬಾಬಾ ಜೀವನದುದ್ದಕ್ಕೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಪ್ರಚಾರ ಮಾಡಿದ ಮೌಢ್ಯಗಳೇನೂ ಅಲುಗಾಡಿಸುತ್ತಿಲ್ಲ. ಬದಲಿಗೆ ಕಷ್ಟಕಾಲದಲ್ಲಿ ಬಡಜನತೆಗೆ ಒದಗಿಬಂದ ಸಹಾಯ ಅವರಲ್ಲಿ ಋಣೀ ಭಾವನೆಯನ್ನು ಇನ್ನಷ್ಟು ಹೆಚ್ಚಿಸುತ್ತಿದೆ. ಅದು ಅವರಲ್ಲಿ

ವಾಸ್ತವವಾಗಿ ಒಂದು ಪ್ರಜಾತಂತ್ರ ಜನರ ಈ ನಿಸ್ಸಹಾಯಕತೆಯನ್ನು ದೂರ ಮಾಡಿ ಜನತೆಗೆ ತಮ್ಮ ಸಂಘಟಿತ ಶಕ್ತಿಯ ಮೇಲೆ ತಮಗೇ ನಂಬಿಕೆ ಬರುವಂತೆ ಮಾಡಬೇಕಿತ್ತು. ಇದುವರೆಗೆ ಹೇಳಿದ್ದನ್ನೆಲ್ಲಾ ಒಪ್ಪಿಕೊಂಡು ಬಂದ ಸಮಾಜ ಮತ್ತು ಜನರಲ್ಲಿ ಪ್ರಶ್ನಿಸುವ ಮತ್ತು ಸ್ವೀಕೃತ ಗ್ರಹಿಕೆಗಳನ್ನು ಅನುಮಾನಿಸುವ ವಿಚಾರವಾದಿ ಮನೋಧರ್ಮವನ್ನು ಹುಟ್ಟು ಹಾಕಬೇಕಿತ್ತು. ಒಂದು ಪ್ರಜಾತಂತ್ರ ಜನರಿಗೆ ತಮ್ಮ ಬದುಕಿನ ಆಗುಹೋಗುಗಳ ಮೇಲೆ ತಮಗೇ ನಿಯಂತ್ರಣ ಇರುವಂತ ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯನ್ನು ನೀಡಿದ್ದರೆ ಹಾಗೂ ವೈಜ್ಞಾನಿಕ ಮನೋಭಾವವನ್ನು ಹುಟ್ಟುಹಾಕುವಂಥಹ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಿದ್ದರೆ ಜನರಲ್ಲಿ ಪರಾವಲಂಬಿ ಮನೋಭಾವವೇ ಹುಟ್ಟುತ್ತಿರಲಿಲ್ಲ. ಆತ್ಮವಿಶ್ವಾಸ, ಸ್ವಾಭಿಮಾನ ಮತ್ತು ಸ್ವಾಲಂಬನೆ ಇರುವ ಸಮಾಜ ನಿರ್ಮಾಣವಾಗಿದ್ದರೆ ಈ ದೇಶದಲ್ಲಿ ಬಾಬಾಗಳು ಹುಟ್ಟಿಕೊಳ್ಳುತ್ತಲೇ ಇರಲಿಲ್ಲ.

ಸಾಯಿಬಾಬಾರ ದೈವತ್ವದ ಬಗ್ಗೆ ಮತ್ತಷ್ಟು ವಿಶ್ವಾಸವನ್ನು ಹೆಚ್ಚಿಸುತ್ತಿದೆ. ಇದು ಸಾಯಿಬಾಬಾರನ್ನು ಮರಣ ನಂತರವೂ ಸಹ ಪವಾಡ ಪುರುಷನನ್ನಾಗಿ ಸ್ಥಾಪಿಸುತ್ತಿದೆ ಮತ್ತು ಒಂದು ಪ್ರಜಾತಂತ್ರದಲ್ಲಿಯೂ ಜನರು ತಮ್ಮ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳಲು ಪವಾಡಗಳನ್ನೋ ಅಥವಾ ಪವಾಡ ಪುರುಷರನ್ನೋ ಆಶ್ರಯಿಸುವಂತೆ ಮಾಡುತ್ತದೆ. ಹೀಗಾಗಿ ಸಾಯಿಬಾಬಾರ ವೈಭವೀಕರಣ ಸಾರಾಂಶದಲ್ಲಿ ಪ್ರಜಾತಂತ್ರದ ವೈಫಲ್ಯದ ವೈಭವೀಕರಣವೇ ಆಗಿದೆ.

ಸಾಯಿಬಾಬಾರ ಬದುಕು ಮತ್ತು ಅವರ ಬದುಕಿನ ಏರುಗತಿ ನಮ್ಮ ದೇಶದ ಪ್ರಜಾಸತ್ತೆ ಮತ್ತು ಜನತೆಯ ಬದುಕಿನ ಅವನತಿಯ ಜೊತೆಜೊತೆಗೆ ನೇರವಾಗಿ ಸಂಬಂಧಿಸಿದೆ. ಪ್ರಾರಂಭದಲ್ಲಿ ಸಾಯಿಬಾಬಾ ಮೂರನೇ ದರ್ಜೆ ತಂತ್ರಗಳನ್ನು ಬಳಸಿ, ಬೂದಿ, ಉಂಗುರಗಳನ್ನು ''ಶೂನ್ಯದಿಂದ ಸೃಷ್ಟಿಸಿ'' ಕೊಡುವ ಕಳಪೆ ಕಣ್ಕಟ್ಟುಗಳನ್ನು ಮಾಡುತ್ತಾ ಪವಾಡ ಪುರುಷರ ಸ್ಥಾನ ಗಿಟ್ಟಿಸಿಕೊಂಡರು. ಈ ದೇಶದ ಸಾಮಾಜಿಕ ಪರಿಸ್ಥಿತಿ ಮತ್ತು ದಮನಿತ ಜನರ ದೈನೇಸಿ ಪರಿಸ್ಥಿತಿಗಳು ಬಾಬಾಗಳ ಬುರುಡೆಯನ್ನು ಪ್ರಶ್ನಿಸುವ ಮನೋಸ್ಥಿತಿಗಿಂತ ಅದನ್ನು ಒಪ್ಪಿಕೊಂಡು ಅದರ ಮೂಲಕ ತಮ್ಮ ತೀರದ ಬವಣೆಗಳಿಗೆ ಭ್ರಾಮಕ ಪರಿಹಾರವನ್ನು ಕಂಡುಕೊಳ್ಳುವ ಶರಣಾಗತಿಯ ಮನೋಭಾವವನ್ನೇ ಮುಂದುವರಿಸಿತ್ತು. ಬೇರೆ ಯಾವುದೇ ದೇಶಗಳಿಗಿಂತ ಈ ದೇಶದಲ್ಲಿ ಧರ್ಮ ಮತ್ತು ಜಾತಿ ವ್ಯವಸ್ಥೆಗಳಂಥಾ ವ್ಯವಸ್ಥಿತ ಆಕ್ರಮಣಗಳು ದಮನಿತ ಜನತೆಯಲ್ಲಿ ತಮ್ಮ ಶೋಚನೀಯ ಪರಿಸ್ಥಿತಿಗೆ ಕಾರಣಗಳನ್ನು ವ್ಯವಸ್ಥೆಯಲ್ಲಿ ಹುಡುಕುವುದಕ್ಕಿಂತಾ ತಮ್ಮ ಪೂರ್ವಜನ್ಮದ ಪಾಪಕರ್ಮಗಳಲ್ಲೇ ಹುಡುಕಿಕೊಳ್ಳುವಂತ ಆತ್ಮಘಾತುಕ ಮನೋಸ್ಥಿತಿಯನ್ನು ಪೋಷಿಸಿಕೊಂಡು ಬಂದಿವೆ. ಹೀಗಾಗಿಯೇ ಈ ದೇಶದ ದಮನಿತ ಮತ್ತು ಬಡಜನರಲ್ಲಿ ತಮ್ಮ ಬಗ್ಗೆ ತಮಗೆ ಆತ್ಮವಿಶ್ವಾಸ ಇರುವುದಕ್ಕಿಂತ ಪವಾಡ ಪುರುಷರ ಬಗ್ಗೆ, ದೇವಿ ಮಾನವರ ಬಗ್ಗೆ ನಂಬಿಕೆ, ಮೂಢನಂಬಿಕೆ ಹೆಚ್ಚು. ಈ ಮೂಢನಂಬಿಕೆಯ ಮೂಲ ಅವರ ಅಸಹಾಯಕತೆಯನ್ನು ಹೆಚ್ಚಿಸುವ ತಮ್ಮ ನಿಯಂತ್ರಣದಲ್ಲಿಲ್ಲದ ಶೋಷಕ ವ್ಯವಸ್ಥೆಯಲ್ಲಿದೆ.

ವಾಸ್ತವವಾಗಿ ಒಂದು ಪ್ರಜಾತಂತ್ರ ಜನರ ಈ ನಿಸ್ಸಹಾಯಕತೆಯನ್ನು ದೂರ ಮಾಡಿ ಜನತೆಗೆ ತಮ್ಮ ಸಂಘಟಿತ ಶಕ್ತಿಯ ಮೇಲೆ ತಮಗೇ ನಂಬಿಕೆ ಬರುವಂತೆ ಮಾಡಬೇಕಿತ್ತು. ಇದುವರೆಗೆ ಹೇಳಿದ್ದನ್ನೆಲ್ಲಾ ಒಪ್ಪಿಕೊಂಡು ಬಂದ ಸಮಾಜ ಮತ್ತು ಜನರಲ್ಲಿ ಪ್ರಶ್ನಿಸುವ ಮತ್ತು ಸ್ವೀಕೃತ ಗ್ರಹಿಕೆಗಳನ್ನು ಅನುಮಾನಿಸುವ ವಿಚಾರವಾದಿ ಮನೋಧರ್ಮವನ್ನು ಹುಟ್ಟು ಹಾಕಬೇಕಿತ್ತು. ಒಂದು ಪ್ರಜಾತಂತ್ರ ಜನರಿಗೆ ತಮ್ಮ ಬದುಕಿನ ಆಗುಹೋಗುಗಳ ಮೇಲೆ ತಮಗೇ ನಿಯಂತ್ರಣ ಇರುವಂತ ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯನ್ನು ನೀಡಿದ್ದರೆ ಹಾಗೂ ವೈಜ್ಞಾನಿಕ ಮನೋಭಾವವನ್ನು ಹುಟ್ಟುಹಾಕುವಂಥಹ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಿದ್ದರೆ ಜನರಲ್ಲಿ ಪರಾವಲಂಬಿ ಮನೋಭಾವವೇ ಹುಟ್ಟುತ್ತಿರಲಿಲ್ಲ. ಆತ್ಮವಿಶ್ವಾಸ, ಸ್ವಾಭಿಮಾನ ಮತ್ತು ಸ್ವಾಲಂಬನೆ ಇರುವ ಸಮಾಜ ನಿರ್ಮಾಣವಾಗಿದ್ದರೆ ಈ ದೇಶದಲ್ಲಿ ಬಾಬಾಗಳು ಹುಟ್ಟಿಕೊಳ್ಳುತ್ತಲೇ ಇರಲಿಲ್ಲ.

ಆದರೆ ನಮ್ಮ ಪ್ರಜಾತಂತ್ರಕ್ಕೆ ಜನರನ್ನು ಸ್ವಾವಲಂಬಿಗಳನ್ನಾಗಿ ಮಾಡುವ ಅಜೆಂಡಾವೇ ಇರಲಿಲ್ಲ. ಬಡತನದ ಮತ್ತು ಪರಾವಲಂಬನೆಯನ್ನು ಮುಂದುವರಿಸುವುದು ಈ ದೇಶದ ಆಳುವವರ್ಗದ ಪಟ್ಟಭದ್ರ ಹಿತಾಸಕ್ತಿಯೂ ಆಗಿದ್ದರಿಂದ ಈ ದೇಶದ ಜನತೆಯ ನಿಸ್ಸಾಹಾಯಕ ಪರಾವಲಂಬನೆ ಹಾಗೆಯೇ ಮುಂದುವರಿದು ಬಾಬಾಗಳ ಹುಟ್ಟಿಗೆ ಭೂಮಿಕೆಯನ್ನು ಸೃಷ್ಟಿಸಿತ್ತು. ಈ ಸಾಮಾಜಿಕ ಸಂದರ್ಭದ ಮನೋಭೂಮಿಕೆಯೇ ಪವಾಡಗಳನ್ನು ನಂಬುವ, ಹಂಬಲಿಸುವ ಮಾನಸಿಕತೆಯನ್ನು

ಹುಟ್ಟುಹಾಕಿತು. ಇದರ ಪ್ರಯೋಜನವನ್ನು ಮಾಡಿಕೊಂಡು ಸಾಯಿಬಾಬಾಗಳಂಥವರು ಜನರನ್ನು ಹಿಂಬಾಲಕರನ್ನಾಗಿಸಿಕೊಂಡರು. ಈ ಪ್ರಕ್ರಿಯೆಯಲ್ಲಿ ಸಾಯಿಬಾಬಾ ವ್ಯಕ್ತಿಯಾಗದೇ ಜನರ ವಿಶ್ವಾಸವನ್ನು ಗಳಿಸಿಕೊಂಡ ಶಕ್ತಿಕೇಂದ್ರವಾಗುತ್ತಿದಂತೆಯೇ ಆಳುವ ವರ್ಗ ಮತ್ತು ಪ್ರಭುತ್ವಗಳು ಸಹ ಯೋಜಿತವಾಗಿ ಸಾಯಿಬಾಬಾರನ್ನು ವಿಶ್ವಮಾನ್ಯ ಆಧ್ಯಾತ್ಮಿಕ ಗುರುವನ್ನಾಗಿ ಪ್ರವರ್ಧಮಾನಕ್ಕೆ ತಂದರು. ಸಾಯಿಬಾಬಾರ ವರ್ಗಾತೀತ ಸಂಘರ್ಷರಹಿತ ಮಾನವತೆ, ದಾನ-ಧರ್ಮಗಳ ಮುಸುಕಿನಲ್ಲಿ ವ್ಯವಸ್ಥಿತ ಶೋಷಣೆ, ಲೂಟಿಗಳಿಗೆ ಪಾರಮಾರ್ಥಿಕ ಮಾನ್ಯತೆಗಳನ್ನು ಗಳಿಸಿಕೊಂಡರು ಹಾಗೂ ಲಕ್ಷಾಂತರ ಕೋಟಿ ರೂಪಾಯಿ ಬೆಲೆಬಾಳುವ ಹಲವು ಲೌಕಿಕ ದಂಧೆಗಳಿಗೆ ಸಾಯಿಬಾಬಾ ಸಂಸ್ಥೆ ಅಲೌಕಿಕ ಮುಸುಕನ್ನು ಒದಗಿಸಿಕೊಡುವ ಸಂಸ್ಥೆಯಾಗಿಯೂ ಬಳಕೆಯಾಯಿತು.



***ಇಂದಿಗೂ ನಗರಗಳಲ್ಲಿ ಸಾಯಿಬಾಬಾನ ಭಕ್ತರು ಈ ನವ ಶ್ರೀಮಂತರೇ ಆಗಿರುತ್ತಾರೆ ಮತ್ತು ಅವರ ಜೀವನ ದೃಷ್ಟಿ ಬಹುಮಹಡಿ ಪ್ರಜಾತಂತ್ರ ವಿರೋಧಿ ಮಾರುಕಟ್ಟೆ ಪರ ವಕ್ತಾರಿಕೆಯೇ ಆಗಿರುತ್ತದೆ. ಆಧ್ಯಾತ್ಮಿಕವಾಗಿ ಮಾನವಾತೀತ ಶಕ್ತಿಗಳ ಎದುರು ಶರಣಾನಾಗುವುದೇ ಈ ವರ್ಗದ ಆಧ್ಯಾತ್ಮಿಕ ಮೌಲ್ಯವೂ ಆಗಿರುತ್ತದೆ. ಈ ವರ್ಗ ಈ ಕಾಲಘಟ್ಟದಲ್ಲಿ ಸಮಾಜದಲ್ಲಿ ನೇತಾರಿಕೆಯ ಮತ್ತು ವಕ್ತಾರಿಕೆಯ ಸ್ಥಾನವನ್ನೂ ಪಡೆದಿದ್ದರಿಂದಲೇ ಪವಾಡಗಳ ಬಯಲಿಂದ ಮಂಕಾಗಿದ್ದ ಸಾಯಿಬಾಬಾ ಮತ್ತೇ ದೇವಮಾನವರ ಸ್ಥಾನಕ್ಕೆ ಪರ್ಯಾಯ ಸರಕಾರದ ಸ್ಥಾನಕ್ಕೆ ಏರಿದ್ದು.***

ಆದರೆ 80ರ ದಶಕದಲ್ಲಿ ಸ್ವಶ್ರಮ ಮತ್ತು ಸಾರ್ವಜನಿಕ ಹಿತಾಸಕ್ತಿಯ ಮೌಲ್ಯಗಳು ಜೀವಂತವಾಗಿದ್ದ ಸಂದರ್ಭದಲ್ಲಿ ಹುಟ್ಟಿಕೊಂಡಿದ್ದ ಮಧ್ಯಮವರ್ಗ ಈ ಮೌಢ್ಯಗಳ ಬೇರುಗಳನ್ನು ಪ್ರಶ್ನಿಸದಿದ್ದರೂ ಒಟ್ಟಾರೆಯಾಗಿ ಸಾಯಿಬಾಬಾರ ಹಿಂದಿದ್ದ ಪ್ರಭಾವಲಯವನ್ನು ಪ್ರಶ್ನಿಸುತ್ತಲೇ ಬಯಲುಗೊಳಿಸುತ್ತಾ ಬಂದರು. ಉಂಗುರ ಕೊಡುವ ಸಾಯಿಬಾಬಾ ಕುಂಬಳಕಾಯಿ ಕೊಡಲು ಏಕೆ ಸಾಧ್ಯವಿಲ್ಲ. ಶೂನ್ಯದಲ್ಲೇ ಎಲ್ಲಾ ಸೃಷ್ಟಿಸಲು ಸಾಧ್ಯವಿದ್ದರೆ ಸಮುದ್ರದಲ್ಲಿ ಬೆರಳದ್ದಿ ಪೆಟ್ರೋಲ್ ಮಾಡಿಬಿಟ್ಟರೆ ದೇಶದ ಹಲವು ಕಷ್ಟಗಳು ತೀರುತ್ತದಲ್ಲ ಎಂಬ ಕೋವೂರ್, ಎಚ್.ನರಸಿಂಹಯ್ಯ ಇನ್ನಿತರರ ವಾದ ಸಮಾಜದಲ್ಲಿ ಸಾಯಿಬಾಬಾರ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿತು. ಅದೇ ಸಮಯದಲ್ಲಿ ಸಾಯಿಬಾಬಾ ಆಶ್ರಮದಲ್ಲಿ ನಡೆದ ಆಸ್ತಿ ವಿವಾದದ ಹಿನ್ನೆಲೆಯಲ್ಲಿ ನಡೆದ ನಾಲ್ಕು ಕೊಲೆಗಳಗೂ ಸಹ ಸಾಯಿಬಾಬಾರ ಪ್ರಭಾವಲಯವು ವಿಸ್ತರಿಸುವುದಕ್ಕೆ ಅಡ್ಡಿಯಾಯಿತು.

ಆದರೆ 1991ರ ಜಾಗತೀಕರಣದ ನೀತಿಗಳು ಈ ದೇಶದ ಪ್ರಜಾತಂತ್ರ, ಸ್ವಾಭಿಮಾನ ಮತ್ತು ಸ್ವಾವಲಂಬನೆಯ ಆಶಯದ ಮೂಲಕ್ಕೆ ಕೊಡಲಿಪೆಟ್ಟು ಹಾಕಿದವು. ಅದು ಈವರೆಗೆ ಜನರಿಗೆ ಜವಾಬುದಾರರಾಗಿರಬೇಕಾದ ಸರಕಾರವನ್ನು ಸ್ಥಳಾಂತರಿಸಿ ಅದರಲ್ಲಿ ಜನರ ನೇರ ನಿಯಂತ್ರಣಕ್ಕೆ ಒಳಪಡದ ಬಲವಿದ್ದವರು ಮಾತ್ರ ಬದುಕಬಹುದಾದ ಮಾರುಕಟ್ಟೆ ಎಂಬ ಕಸಾಯಿಖಾನೆಗೆ ಜನರನ್ನು ದೂಡಿತು. ಇದರಿಂದ ಜನರ ಅತಂತ್ರತೆ ಇನ್ನಷ್ಟು ಹೆಚ್ಚಾಗಿ ಪರಾವಲಂಬಿ ಮನೋಭಾವ ಇನ್ನಷ್ಟು ಬೇರುಬಿಡುವಂತಾಯಿತು. ತಾನು ಕಷ್ಟಪಟ್ಟು ಒಂದೊಂದೇ ಹನಿಯನ್ನು ಶೇಖರಿಸಿ ರೂಪುಗೊಂಡ ಮಧ್ಯಮವರ್ಗಕ್ಕಿಂತ

ಜಾಗತೀಕರಣದಿಂದ ಮತ್ತು ಮಾರುಕಟ್ಟೆ ನೀತಿಯಿಂದ ದಿಢೀರ್ ಸಂಪನ್ನರಾದ ಒಂದು ನವ ಶ್ರೀಮಂತ ವರ್ಗ ಈ ಕಾಲಘಟ್ಟದಲ್ಲಿ ಉದಯವಾಯಿತು. ಈ ನವ ಮೇಲ್‌ಮಧ್ಯಮ ವರ್ಗದ ಸಂಪನ್ನತೆಗೆ ಅದರ ಶ್ರಮಕ್ಕಿಂತ, ಪ್ರತಿಭೆಗಿಂತ ಮಾರುಕಟ್ಟೆಯ ಒಲವೇ ಕಾರಣವಾದ್ದರಿಂದ ಈ ನವ ಮಧ್ಯಮವರ್ಗದಲ್ಲಿ ವೈಚಾರಿಕತೆ, ವೈಜ್ಞಾನಿಕತೆಗಿಂತ ಹೆಚ್ಚಾಗಿ ಅದೃಷ್ಟದಲ್ಲಿ ಮಾರುಕಟ್ಟೆಯ ಆಶೀರ್ವಾದದಲ್ಲಿ ಅದನ್ನು ದೊರಕಿಸಿಕೊಡಬಹುದಾದ ಅತಿಮಾನವರಲ್ಲಿ ನಂಬಿಕೆ ಇಡುವುದು ಒಂದು ಮೌಲ್ಯವೂ ಜೀವನ ಶೈಲಿಯೂ ಆಯಿತು. ಇಂದಿಗೂ ನಗರಗಳಲ್ಲಿ ಸಾಯಿಬಾಬಾನ ಭಕ್ತರು ಈ ನವ ಶ್ರೀಮಂತರೇ ಆಗಿರುತ್ತಾರೆ ಮತ್ತು ಅವರ ಜೀವನ ದೃಷ್ಟಿ ಬಹುಮಹಡಿ ಪ್ರಜಾತಂತ್ರ ವಿರೋಧಿ ಮಾರುಕಟ್ಟೆ ಪರ ವಕ್ತಾರಿಕೆಯೇ ಆಗಿರುತ್ತದೆ. ಆಧ್ಯಾತ್ಮಿಕವಾಗಿ ಮಾನವಾತೀತ ಶಕ್ತಿಗಳ ಎದುರು ಶರಣಾನಾಗುವುದೇ ಈ ವರ್ಗದ ಆಧ್ಯಾತ್ಮಿಕ ಮೌಲ್ಯವೂ ಆಗಿರುತ್ತದೆ. ಈ ವರ್ಗ ಈ ಕಾಲಘಟ್ಟದಲ್ಲಿ ಸಮಾಜದಲ್ಲಿ ನೇತಾರಿಕೆಯ ಮತ್ತು ವಕ್ತಾರಿಕೆಯ ಸ್ಥಾನವನ್ನೂ ಪಡೆದಿದ್ದರಿಂದಲೇ ಪವಾಡಗಳ ಬಯಲಿಂದ ಮಂಕಾಗಿದ್ದ ಸಾಯಿಬಾಬಾ ಮತ್ತೇ ದೇವಮಾನವರ ಸ್ಥಾನಕ್ಕೆ ಪರ್ಯಾಯ ಸರಕಾರದ ಸ್ಥಾನಕ್ಕೆ ಏರಿದ್ದು.

ಆದರೆ 80ರ ದಶಕದಲ್ಲಿ ಸ್ವತ್ರಮ ಮತ್ತು ಸಾರ್ವಜನಿಕ ಹಿತಾಸಕ್ತಿಯ ಮೌಲ್ಯಗಳು ಜೀವಂತವಾಗಿದ್ದ ಸಂದರ್ಭದಲ್ಲಿ ಹುಟ್ಟಿಕೊಂಡಿದ್ದ ಮಧ್ಯಮವರ್ಗ ಈ ಮೌಢ್ಯಗಳ ಬೇರುಗಳನ್ನು ಪ್ರಶ್ನಿಸದಿದ್ದರೂ ಒಟ್ಟಾರೆಯಾಗಿ ಸಾಯಿಬಾಬಾರ ಹಿಂದಿದ್ದ ಪ್ರಭಾವಲಯವನ್ನು ಪ್ರಶ್ನಿಸುತ್ತಲೇ ಬಯಲುಗೊಳಿಸುತ್ತಾ ಬಂದರು. ಉಂಗುರ ಕೊಡುವ ಸಾಯಿಬಾಬಾ ಕುಂಬಳಕಾಯಿ ಕೊಡಲು ಏಕೆ ಸಾಧ್ಯವಿಲ್ಲ. ಶೂನ್ಯದಲ್ಲೇ ಎಲ್ಲಾ ಸೃಷ್ಟಿಸಲು ಸಾಧ್ಯವಿದ್ದರೆ ಸಮುದ್ರದಲ್ಲಿ ಬೆರಳದ್ದಿ ಪೆಟ್ರೋಲ್ ಮಾಡಿಬಿಟ್ಟರೆ ದೇಶದ ಹಲವು ಕಷ್ಟಗಳು ತೀರುತ್ತದಲ್ಲ ಎಂಬ ಕೋವೂರ್, ಎಚ್.ನರಸಿಂಹಯ್ಯ ಇನ್ನಿತರರ ವಾದ ಸಮಾಜದಲ್ಲಿ ಸಾಯಿಬಾಬಾರ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿತು. ಅದೇ ಸಮಯದಲ್ಲಿ ಸಾಯಿಬಾಬಾ ಆಶ್ರಮದಲ್ಲಿ ನಡೆದ ಆಸ್ತಿ ವಿವಾದದ ಹಿನ್ನೆಲೆಯಲ್ಲಿ ನಡೆದ ನಾಲ್ಕು ಕೊಲೆಗಳಗೂ ಸಹ ಸಾಯಿಬಾಬಾರ ಪ್ರಭಾವಲಯವು ವಿಸ್ತರಿಸುವುದಕ್ಕೆ ಅಡ್ಡಿಯಾಯಿತು.

ಆದರೆ ಅದೇ ಸಮಯದಲ್ಲಿ ಸರಕಾರ ಶಿಕ್ಷಣ, ಆರೋಗ್ಯ ಇನ್ನಿತರ ಜನತೆಯ ಅತ್ಯಗತ್ಯ ಕ್ಷೇತ್ರಗಳಿಂದ ಹಿಂದೆ ಸರಿಯುತ್ತಿತ್ತು. ಸಾಯಿಬಾಬಾ ತಮ್ಮ ಟ್ರಸ್ಟ್ ಮೂಲಕ ಕುಡಿಯುವ ನೀರು ಮತ್ತು ಹೈಟೆಕ್ ಆಸ್ಪತ್ರೆಯ ಸೌಲಭ್ಯವನ್ನು ಬಡಜನರಿಗೂ ವಿಸ್ತರಿಸಿ ಸರಕಾರದಿಂದ ವಂಚಿತಗೊಂಡು ಕಂಗಾಲಾಗಿದ್ದ ಜನರ ಕಣ್ಣಲ್ಲಿ ನಡೆದಾಡುವ ದೇವರೇ ಆಗಿಬಿಟ್ಟರು. ಆದರೆ ಈ ಆಸ್ಪತ್ರೆ ಮತ್ತು ಶಿಕ್ಷಣವನ್ನು ದೊರಕಿಸಲು ಬೇಕಾಗಿದ್ದ ಸಂಪನ್ಮೂಲ ಸಾಯಿಬಾಬಾ ಸಂಸ್ಥೆ ಪಡೆದುಕೊಂಡಿದ್ದು ಹೇಗೆ? ಅಷ್ಟು ಹಣ ಒಂದು ಸರಕಾರದ ಬಳಿ ಇರುವುದಿಲ್ಲವೇ? ಎಂಬ ಪ್ರಶ್ನೆಗಳನ್ನು ಯಾರೂ ಕೇಳದೇ ಸಾಯಿಬಾಬಾರ ಸಮಾಜ ಸೇವೆಯನ್ನು ವಾಚಾಮಗೋಚರವಾಗಿ ಹೊಗಳಲು ಪ್ರಾರಂಭಿಸಿದ್ದಾರೆ.

ಅದರಲ್ಲೂ ಸಾಯಿಬಾಬಾ ನಿಧನದ ನಂತರ ಅವರ ಪವಾಡ ಇತ್ಯಾದಿಗಳ 1991 ಪೂರ್ವಾಶ್ರಮದ ಅವತಾರವನ್ನು ಖಂಡಿಸಿದ ಕೆಲವು ಮಾಧ್ಯಮಗಳು ಸಹ ನಂತರದಲ್ಲಿ ಅವರು ಮಾಡಿದ ಕುಡಿಯುವ ನೀರಿನ ಯೋಜನೆ ಮತ್ತು ಒದಗಿಸಿದ ಆಸ್ಪತ್ರೆ, ಸೌಲಭ್ಯಗಳೇ ನಿಜವಾದ ಪವಾಡ. ಅವರ ಜಾತ್ಯತೀತ ಮಾನವೀಯತೆ ಇವೆಲ್ಲವೂ ಹೆಚ್ಚೂ ಕಡಿಮೆ ಅವರು ದೇವಮಾನವನಿಗೆ ಸಮ ಎಂಬುದನ್ನು ರುಜುವಾತು ಮಾಡುತ್ತದೆ ಎಂದು ಬರೆಯುತ್ತಿವೆ. ಇನ್ನುಳಿದ ಮಾಧ್ಯಮಗಳಂತೂ ಸಾಯಿಬಾಬಾ ಸಾಮಾನ್ಯ ಮನುಷ್ಯರಂತೆ ಸತ್ತರೂ ಈ ಕಾಲದಲ್ಲೂ ಆತ ದೈವಾಂಶ ಸಂಭೂತ. ಮತ್ತೆ ಆತ ಪುನರ್ಜನ್ಮ ಎತ್ತುತ್ತಾನೆ ಎನ್ನುವಂತೆಯೇ ಬಿತ್ತರಿಸುತ್ತಿದೆ. ಅದೇ ರೀತಿ ಪ್ರಭುತ್ವವೂ ಸಾಯಿಬಾಬಾರನ್ನು ದೇವಮಾನವ ಮತ್ತು ಜನತೆಯಿಂದ ಆಯ್ಕೆಯಾದ ಸರಕಾರಕ್ಕೆ ಪರ್ಯಾಯವಾದ ಮತ್ತು ಅದಕ್ಕಿಂತಲೂ ಮಿಗಿಲಾದ ಆಧ್ಯಾತ್ಮಿಕ ಮತ್ತು ಸಾಮಾಜಿಕ ಶಕ್ತಿ ಕೇಂದ್ರವೆಂದು ಅಧಿಕೃತವಾದ ಮಾನ್ಯತೆ ನೀಡುತ್ತಿದೆ. ***39ನೆ ಪುಟಕ್ಕೆ***

## ಆಲಸಿ ಕೀಟ, ಶ್ರಮಜೀವಿ ಇರುವೆ

ಅದು ಬೇಸಿಗೆ ಕಾಲವಾಗಿತ್ತು. ಹೊಲಗಳಲ್ಲಿ ಪೈರುಗಳು ಹಚ್ಚ ಹಸುರಾಗಿ ಬೆಳೆದಿದ್ದವು. ಈ ಸಂದರ್ಭ ಆಹಾರಕ್ಕೆ ಯಾವುದೇ ಕೊರತೆಯೂ ಇರಲಿಲ್ಲ. ಆ ಹೊಲದಲ್ಲಿ ಕೀಟವೊಂದು ವಾಸವಾಗಿತ್ತು. ಯಾವುದೇ ಅಂಜಿಕೆಯಿಲ್ಲದೆ ಅದು ಹೊಲದಲ್ಲಿ ಬೆಳೆದಿದ್ದ ಪೈರುಗಳನ್ನು ತಿಂದು ತೇಗುತ್ತಿತ್ತು. ಹೊಟ್ಟೆ ತುಂಬಿದ ನಂತರ ಕುಣಿದಾಡುತ್ತಾ ಯಾವುದೇ ಚಿಂತೆ ಇಲ್ಲದೇ ಸಮಯ ಕಳೆಯುತ್ತಿತ್ತು.



ಆದರೆ ಅಲ್ಲಿದ್ದ ಇರುವೆಗಳು ಮಾತ್ರ ಆಹಾರವನ್ನು ತಮ್ಮ ವಾಸಸ್ಥಾನಕ್ಕೆ ಸಾಗಿಸುತ್ತಿದ್ದವು. ತಿನ್ನಲು ಇಷ್ಟೊಂದು ಆಹಾರವಿದ್ದರು ಕೂಡ ಇಷ್ಟೊಂದು ಶ್ರಮ ಪಡುತ್ತಿದ್ದೀರಲ್ಲಾ ಎಂದು ಕೀಟವು ಇರುವೆಗಳನ್ನು ಹೀಯಾಳಿಸುತ್ತಿತ್ತು.

ಆಹಾರ ಸಾಗಿಸುತ್ತಿದ್ದ ಇರುವೆಗಳ ಕೂಟದಲ್ಲಿದ್ದ ಇರುವೆಯೊಂದು ಕೀಟದ ಸ್ನೇಹಿತನಾಗಿತ್ತು. ಆ ಇರುವೆಯ ಬಳಿ ಹೋಗಿ ಕೀಟವು ''ಇಷ್ಟೊಂದು ಆಹಾರವಿದ್ದರೂ ಯಾಕೆ ನೀವು ಶ್ರಮಪಡುತ್ತಿದ್ದೀರಿ. ನನ್ನಂತೆ ತಿಂದು ಆರಾಮವಾಗಿರಬಹುದಲ್ಲವೇ? ಎಂದು ಎಂದು ಕೇಳಿತು. ಅದಕ್ಕೆ ಇರುವೆಯು ''ನಾವು ಶ್ರಮಜೀವಿಗಳು. ಈ ಬೇಸಿಗೆ ಕಾಲದ ನಂತರ ಬರುವುದು ಮಳೆಗಾಲ. ಮಳೆಗಾಲದಲ್ಲಿ ನಮಗೆ ಆಹಾರ ಸಿಗುವುದು ಕಷ್ಟ. ಅದಕ್ಕಾಗಿ ನಾವು ಈ ಬೇಸಿಗೆ ಕಾಲದಲ್ಲಿಯೇ ಆಹಾರವನ್ನು ಸಂಗ್ರಹಿಸಿಡುತ್ತಿದ್ದೇವೆ'' ಎಂದು ಮರು ಉತ್ತರ ನೀಡಿತು.

ಆದರೆ ಕೀಟವು ಈ ಬಗ್ಗೆ ತಲೆಕೆಡಿಸಿಕೊಳ್ಳದೇ ತಾನು ಆರಾಮವಾಗಿ ಕಾಲ ಕಳೆಯುತ್ತಿತ್ತು. ಕೆಲವೇ ದಿನಗಳ ಮಳೆಗಾಲ ಬಂದು ಬಿಟ್ಟಿತು. ಹೊಲದಲ್ಲಿ ಯಾವುದೇ ಆಹಾರವು ಕಾಣಸಿಗಲಿಲ್ಲ. ಕೀಟವು ಹಸಿವೆಯಿಂದ ಒದ್ದಾಡುತ್ತಿತ್ತು. ಎಲ್ಲಿ ಹುಡುಕಿದರೂ ಆಹಾರ ದೊರೆಯಲಿಲ್ಲ. ಕೊನೆಗೆ ಆ ಕೀಟವು ತನ್ನ ಸ್ನೇಹಿತನಾದ ಇರುವೆಯ ಮನೆಗೆ ಹೋಗಿ, ''ಸ್ನೇಹಿತನೇ, ಹೊಟ್ಟೆ ಹಸಿಯುತ್ತಿದೆ. ತಿನ್ನಲು ಏನಾದರು ಇದ್ದರೆ ಕೊಡು'' ಎಂದು ಬೇಡಿಕೊಂಡಿತು. ಅದಕ್ಕೆ ಇರುವೆ ''ಆಲಸ್ಯದಿಂದ ದಿನದೂಡುವ ನಿನ್ನಂತಹವರಿಗೆ ಈ ಗತಿ ಬಂದಿರುವುದರಿಂದ ತನಗೆ ಯಾವುದೇ ಮರುಕು ಉಂಟಾಗುವುದಿಲ್ಲ'' ಎಂದು ಹೇಳುತ್ತಾ ಮನೆಯ ಬಾಗಿಲನ್ನು ಜೋರಾಗಿ ಹಾಕಿ ತನ್ನ ಕೆಲಸದಲ್ಲಿ ಮಗ್ನವಾಯಿತು.

## ಕ್ವಿಝ್ ಟೈಮ್-7: ಇತಿಹಾಸ, ಸಾಹಿತ್ಯ, ಕಲೆ, ವಿಜ್ಞಾನ, ಕ್ರೀಡಾಲೋಕ

1.ಭಾರತದ ಪ್ರಥಮ ಉಪಪ್ರಧಾನಿ ಯಾರು?
2.ಕ್ರಿ.ಶ.1236ರಲ್ಲಿ ದೆಹಲಿಯ ಪ್ರಥಮ ಮಹಿಳಾ ಆಡಳಿತಗಾರಳು ಯಾರು?
3.'ಡಾಟರ್ ಆಫ್ ದಿ ಈಸ್ಟ್' ಪ್ರಸಿದ್ಧ ಕೃತಿಯನ್ನು ಬರೆದವರು ಯಾರು?
4.'ದಾಸ್ ಕ್ಯಾಪಿಟಲ್' ಬರೆದವರಾರು?
5.ಸಂಗೀತ ಉಪಕರಣಗಳ ರಾಣಿ ಎಂದು ಯಾವ ವಾದ್ಯಕ್ಕೆ ಹೇಳುವರು?
6.ಕಿವುಡರ, ಮೂಗರ ಸಮಸ್ಯೆಗಳನ್ನು ಪ್ರತಿಬಿಂಬಿಸುವ ಕನ್ನಡ ಚಲನಚಿತ್ರ ಯಾವುದು?
7.ಮಾನವರಲ್ಲಿ ಸಾಮಾನ್ಯ ರಕ್ತದೊತ್ತಡ ಪರಿಮಾಣ ಎಷ್ಟು?
8.ಯಾವ ಆಹಾರವನ್ನು ಉತ್ತಮ ಆರೋಗ್ಯಕರ ಹಲ್ಲುಗಳಿಗಾಗಿ ನಿಷೇಧಿಸಬೇಕು?
9.ಚೆಸ್ ಆಟದಲ್ಲಿ ಹೆಚ್ಚು ಚಲಿಸುವ ಭಾಗ ಯಾವುದು?
10.ಅಂತಾರಾಷ್ಟ್ರೀಯ ಚೆಸ್ ಮಾಸ್ಟರ್ ಟೈಟಲ್ ಗೆದ್ದ ಕಿರಿಯ ಏಷಿಯನ್ ಯಾರು?

ಉತ್ತರಗಳು: ಪುಟ ಸಂಖ್ಯೆ- 58ರಲ್ಲಿ

### 'ಖಳ್' ನಾಯಕ್

ಬಿಜೆಪಿ
ಶಾಸಕರೆಲ್ಲರೂ
ಒಟ್ಟಾಗಿ ಹೇಳುವರು
ಯಡ್ಡಿ ನಮ್
ನಾಯಕರು
ಆದರೆ
ಖಳ್‌ನಾಯಕರು

## ಮಳೆ ಹೇಗೆ ಆಗುತ್ತದೆ?



ಮೋಡಗಳಲ್ಲಿ ನೀರಿನ ಹನಿಗಳ ಸಂಗ್ರಹವಾಗಿರುತ್ತದೆ. ಅರ್ಧ ಮಿ.ಮೀ.ನಿಂದ ಐದು ಮಿ.ಮೀ. ವ್ಯಾಸದ ಗಾತ್ರ ಹೊಂದಿರುವ ಇಂಥ ಹನಿಗಳು ಆಗಸದಲ್ಲಿ ಮೋಡದ ರೂಪದಲ್ಲಿ ತೇಲಾಡುತ್ತವೆ. ಇವುಗಳ ಗಾತ್ರ ಹೆಚ್ಚಿ, ಭಾರವಾಗಿ ತೇಲಲಾಗದೆ ಭೂಮಿಗೆ ಬೀಳುವುದೇ ಮಳೆ. ಅರ್ಧ ಮಿ.ಮೀ.ಗಿಂತ ಚಿಕ್ಕ ಗಾತ್ರದ ಹನಿಗಳ ಮಳೆಗೆ ತುಂತುರು ಮಳೆ ಎನ್ನುತ್ತಾರೆ.

ಹನಿಗಳು ಭೂಮಿಯನ್ನು ತಲುಪುವ ಮೊದಲು ವಾತಾವರಣದಲ್ಲಿ ಒಂದನ್ನೊಂದು ಕೂಡಿಕೊಂಡು ದೊಡ್ಡ ಗಾತ್ರ ಹೊಂದಲು ಸಾಧ್ಯ. ಮತ್ತೆ ಕೆಲವೊಮ್ಮೆ ಹಿಮದ ಕಣಗಳು ದ್ರವೀಕರಿಸಿ ನೀರಿನ ದೊಡ್ಡ ಹನಿಗಳಾಗಿ ಮಾರ್ಪಡಬಹುದು. ಆದರೆ ಭೂಮಿಗೆ ಬೀಳುವ ಮುನ್ನ ನೀರಿನ ಹನಿಯು ಭಾಷ್ಪೀಭವನ ಹೊಂದುವ ಕ್ರಿಯೆಯು ಆ ಹನಿಯ ಅಂತಿಮ ಗಾತ್ರವನ್ನು ನಿರ್ಧರಿಸುವುದು. ಕೆಲವು ಸಲ ಭೂಮಿಗೆ ತಲುಪುವ ಮೊದಲೇ ಹನಿಗಳು ವಾತಾವರಣದಲ್ಲಿ ಸಂಪೂರ್ಣವಾಗಿ ಭಾಷ್ಪೀಭವನ ಹೊಂದುವುದು ವಾತಾವರಣದ ಸಾಪೇಕ್ಷ ಆರ್ದ್ರತೆ ಕಡಿಮೆ ಇದ್ದಾಗ ಸಾಧ್ಯ.

**(ಸಂಗ್ರಹ) ಹುದಾ ಫಾತಿಮಾ ಎಚ್.**

## ಹೆತ್ತವರ ಆರೈಕೆ



ಒಂದು ಊರಿನಲ್ಲಿ ಶ್ರೀಮಂತ ವ್ಯಾಪಾರಿಯ ಪತ್ನಿಯೊಬ್ಬಳು ತೀರಿಹೋದಳು. ಕೆಲವು ಸಮಯದ ಬಳಿಕ ಆ ಶ್ರೀಮಂತ ವ್ಯಾಪಾರಿಗೂ ರೋಗ ಬಾಧಿಸಿತು. ಇದರಿಂದಾಗಿ ಆತ ತನ್ನ ಅರ್ಧ ಆಸ್ತಿಯನ್ನು ತನ್ನ ಮಗನ ಹೆಸರಿಗೆ ವರ್ಗಾಯಿಸಿದ.

ಲಕ್ಷಗಟ್ಟಲೆ ಆಸ್ತಿಯನ್ನು ಪಡೆದುಕೊಂಡ ಆ ಯುವಕ, ಆತನ ಪತ್ನಿ ಹಾಗೂ ಮಕ್ಕಳು ಆ ಶ್ರೀಮಂತನ ಆರೈಕೆಯಲ್ಲಿ ತೊಡಗಿದ್ದರು. ಆ ಬಳಿಕ ಕೆಲವೇ ತಿಂಗಳಲ್ಲಿ ಅವರಲ್ಲಿದ್ದ ಆರೈಕೆ ಮಾಡುವ ಹುಮ್ಮಸ್ಸು ಕಳೆದುಹೋಯಿತು. ಅದರ ಜೊತೆಗೆ ಆ ಮುದುಕನಿಗೆ ನೀಡುತ್ತಿದ್ದ ಚಿಕಿತ್ಸೆಯನ್ನು ಕೂಡ ನಿಲ್ಲಿಸಲಾಯಿತು. ಸಮಯಕ್ಕೆ ಸರಿಯಾಗಿ ಊಟವನ್ನು ಕೂಡ ಕೊಡುತ್ತಿರಲಿಲ್ಲ. ಕೊನೆಗೆ ಆ ಯುವಕ, ''ನೀನು ಎಲ್ಲಾದರೂ ವೃದ್ಧಾಶ್ರಮವನ್ನು ಆಶ್ರಯಿಸುವುದು ಒಳ್ಳೆಯದು. ನೀನು ಕೆಮ್ಮುತ್ತಲೇ ಇರುವುದರಿಂದ ಮಕ್ಕಳಿಗೂ ಕೂಡ ರೋಗ ಬಾಧಿಸಬಹುದು'' ಎಂದು ಆ ಮುದುಕನಿಗೆ ಮನಸ್ಸಿಗೆ ಚುಚ್ಚುವಂತೆ ಹೇಳಿದ. ಇದರಿಂದಾಗಿ ಆ ಮುದುಕ ತುಂಬಾ ನೊಂದುಕೊಂಡ.

ಇದಾದ ಬಳಿಕ ಆ ಮುದುಕ ತನ್ನ ಮೊಮ್ಮಗನನ್ನು ಕರೆದು ''ಮಗೂ ತನಗೆ ಶೀತ ಬಾಧಿಸಿದೆ. ಆದುದರಿಂದ ತನಗೊಂದು ಕರವಸ್ತ್ರವನ್ನು ತೆಗೆದುಕೊಂಡು ಬಾ'' ಎಂದು ಹೇಳಿದ. ಮೊಮ್ಮಗ ಓಡಿ ಹೋಗಿ ಮನೆಯ ಕವಾಟಿನೊಳಗಿದ್ದ ಕರವಸ್ತ್ರವನ್ನು ತಂದು ಅದನ್ನು ಎರಡು ತುಂಡು ಮಾಡಲು ಮುಂದಾದ. ಅದಕ್ಕೆ ಆ ಮುದುಕ ಯಾಕೆ ನೀನು ಇದನ್ನು ಎರಡು ತುಂಡು ಮಾಡುತ್ತಿದ್ದೀಯ ಎಂದು ಕೇಳಿದ. ಅದಕ್ಕೆ ಆ ಯುವಕನು ಕೂಡ ಧ್ವನಿಗೂಡಿಸಿ ಅದನ್ನು ಎರಡು ತುಂಡು ಮಾಡದೆ ಅಜ್ಜನಿಗೆ ಕೊಡು ಎಂದು ಹೇಳಿದ.

ಆದಕ್ಕೆ ಆ ಪುಟ್ಟ ಬಾಲಕ, ''ಅಪ್ಪ ಭವಿಷ್ಯದಲ್ಲಿ ನೀನು ಕೂಡ ಅಜ್ಜನ ಹಾಗೆಯೇ ಮುದುಕನಾಗುವೆ. ನಿನಗೂ ಶೀತ ಬಾಧಿಸಬಹುದು. ಆಗ ನೀನು ಕರವಸ್ತ್ರವನ್ನು ಕೇಳಬಹುದು. ಆಗ ನಾನು ನಿನಗೆ ಏನನ್ನು ಕೊಡಲಿ? ಮುಂದೆ ಈ ಕರವಸ್ತ್ರದ ಅರ್ಧ ಭಾಗ ನಿನ್ನ ಉಪಯೋಗಕ್ಕೆ ಬರಬಹುದು. ಅದಕ್ಕಾಗಿ ಇದನ್ನು ಎರಡು ತುಂಡು ಮಾಡಿ ಒಂದನ್ನು ಅಜ್ಜನಿಗೆ ಮತ್ತೊಂದು ತುಂಡನ್ನು ನಿನಗೆ ತೆಗೆದಿಡುತ್ತೇನೆ ಎಂದು ಮುಗ್ಧವಾಗಿಯೇ ಹೇಳಿದ.

ಬಾಲಕನ ಮುಗ್ಧ ಮಾತುಗಳು ಯುವಕನ ಕಣ್ಣು ತೆರೆಸಿತು. ಯುವಕನಿಗೆ ತನ್ನ ತಪ್ಪಿನ ಅರಿವಾಗಿ ತಂದೆಯೊಂದಿಗೆ ಕ್ಷಮೆ ಯಾಚಿಸಿದ. ಅಂದಿನಿಂದ ಯುವಕ ತನ್ನ ತಂದೆಯನ್ನು ಚೆನ್ನಾಗಿ ಆರೈಕೆ ಮಾಡಲು ತೊಡಗಿದ.

# ವಕ್ರವಾಗುತ್ತಿರುವ ವಸ್ತ್ರ ಸಂಹಿತೆ

● ಫಾತಿಮಾ ನಸ್ರೀನಾ
fathimanas09@gmail.com



ಅತಿ ಕಡಿಮೆ ಬಟ್ಟೆ ಧರಿಸಿದ ಚಲನಚಿತ್ರಗಳೇ ಇಂದು ಹೆಚ್ಚು ಜನಪ್ರಿಯಗೊಳ್ಳುತ್ತಿರುವುದು. ಇದನ್ನು ಸಿನಿಮಾ ಉದ್ಯಮ ಬೆಳೆಯುತ್ತಿದೆ ಎಂದು ಪರಿಗಣಿಸಬೇಕೇ ಅಥವಾ ಜನರಲ್ಲಿ ನೈತಿಕ ಮೌಲ್ಯ ಕುಸಿಯುತ್ತಿದೆ ಎಂದು ತಿಳಿದುಕೊಳ್ಳಬೇಕೇ?

ನಾಯಕ ನಟ ಕಡಿಮೆ ಬಟ್ಟೆ ತೊಡುವುದರಿಂದ ಆ ಸಿನಿಮಾ ಹೆಚ್ಚು ಜನಾಕರ್ಷಣೆಗೆ ಒಳಗಾಗುವುದಿಲ್ಲ. ನಟಿಯರು ಕಡಿಮೆ ಬಟ್ಟೆ ತೊಟ್ಟಷ್ಟು ವೀಕ್ಷಕರ ಸಂಖ್ಯೆ ಜಾಸ್ತಿಯಾಗುತ್ತಾ ಹೋಗುತ್ತದೆ.

ಸಿನಿಮಾ ನಿರ್ದೇಶಕರು ಸಾಧ್ಯವಾದಷ್ಟು ಅಥವಾ ಮಿತಿಮೀರಿ ನಟಿಯರ ಬಟ್ಟೆಯ ಅಳತೆಯನ್ನು ಕಡಿಮೆ ಮಾಡಿದರೂ ಸೆನ್ಸಾರ್ ಮಂಡಳಿ ಎಲ್ಲ ದೃಶ್ಯಗಳನ್ನು ಪ್ರಸಾರ ಮಾಡಲು ಅನುಮತಿಸುವುದಿಲ್ಲ. ಕಾಲ ಬದಲಾಗುತ್ತಿದ್ದಂತೆಯೇ (ಕಾಲ ಎನ್ನುವುದಕ್ಕಿಂತ ಮನೋಸ್ಥಿತಿ ಬದಲಾದಂತೆ ಎನ್ನುವುದು ಸೂಕ್ತ) ಸೆನ್ಸಾರ್ ಮಂಡಳಿಯು ತನ್ನ ಮಿತಿಯನ್ನೂ ಸಡಿಲಗೊಳಿಸುತ್ತಿರುವುದನ್ನು ಕೂಡ ಗಮನಿಸಬಹುದು. ಕೆಲವು ವರ್ಷಗಳ ಹಿಂದೆ ಸೆನ್ಸಾರ್ ಮಂಡಳಿ ಕತ್ತರಿಹಾಕುತ್ತಿದ್ದ ದೃಶ್ಯಗಳು ಇಂದು ಕುಟುಂಬ ಸಮೇತ ವೀಕ್ಷಿಸಬಹುದಾದ ಚಲನಚಿತ್ರಗಳಲ್ಲಿ ಪ್ರಸಾರವಾಗುತ್ತಿವೆ. ಸೆನ್ಸಾರ್ ಮಂಡಳಿ ಇಂದು ಕಾರ್ಯನಿರ್ವಹಿಸುತ್ತಿರುವುದು ಪಾತ್ರಗಳಿಗೆ ಎಷ್ಟು ಪ್ರಮಾಣದಲ್ಲಿ ಬಟ್ಟೆ ತೊಡಿಸಲಾಗಿದೆ ಎಂದಲ್ಲ, ಬದಲಾಗಿ ಬಟ್ಟೆ ತೊಡಿಸಲಾಗಿದೆಯೇ ಅಥವಾ ಇಲ್ಲವೇ ಎಂದು ಮಾತ್ರ. ಅದು ತುಂಡುಡುಗೆ ಬಟ್ಟೆಯಾದರೂ ಸರಿ, ಸೆನ್ಸಾರ್ ಮಂಡಳಿಗೇನೂ ತೊಂದರೆಯಿಲ್ಲ !

ಈ ವಿಚಾರವನ್ನೆಲ್ಲ ಯಾಕೆ ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ ಎಂದರೆ ಇಂದು ಜಾಗತಿಕವಾಗಿ ಬಟ್ಟೆಯ ವಿಚಾರವಾಗಿ ಸಾಕಷ್ಟು ಚರ್ಚೆ ನಡೆಯುತ್ತಿದೆ. ಬಟ್ಟೆ ಎಂಬುದು ಕೇವಲ ಮಾನಮುಚ್ಚುವ ವಸ್ತುವಾಗಿ ಮಾತ್ರ ಉಳಿದಿಲ್ಲ. ಕೆಲವರಿಗೆ 'ನಿರ್ದಿಷ್ಟ' ಬಗೆಯ

ಬಟ್ಟೆ ಅಭಿವೃದ್ಧಿಯ ಸಂಕೇತ, ಇನ್ನು ಕೆಲವರಿಗೆ ಸ್ವಾತಂತ್ರ್ಯದ ಸಂಕೇತ, ಮತ್ತೆ ಕೆಲವರಿಗೆ ಸಂಸ್ಕೃತಿಯ ದ್ಯೋತಕ, ಹಲವರಿಗೆ ಆಧುನಿಕತೆಯ ಪರಮಾವಧಿ ಎಂದು ಅನಿಸಿದ್ದೂ ಇದೆ. ಕೆಲವು ಕಡೆಗಳಲ್ಲಿ ನಿರ್ದಿಷ್ಟ 'ಬಣ್ಣ'ದ ಬಟ್ಟೆಯನ್ನು ಸಮವಸ್ತ್ರವಾಗಿ ಬಳಸಲಾಗುತ್ತಿದ್ದರೆ, ಇನ್ನು ಕೆಲವು ಕಡೆಗಳಲ್ಲಿ ಬಣ್ಣದೊಂದಿಗೆ ಇಂತಿಷ್ಟೇ ಅಳತೆಯ ಬಟ್ಟೆಯು ಸಮವಸ್ತ್ರವಾಗಿ ಜಾರಿಯಲ್ಲಿದೆ.

ಈ ಎಲ್ಲದರ ಮಧ್ಯೆ ಇಸ್ಲಾಮ್ ಧರ್ಮವು ಮಹಿಳೆಯರಿಗೆ ವಿಶೇಷವಾಗಿ ವಸ್ತ್ರಸಂಹಿತೆಯನ್ನು ಆದೇಶಿಸಿದೆ. ಈ ಪ್ರಕಾರವಾಗಿ ಮುಸ್ಲಿಮ್ ಮಹಿಳೆಯರು ಧರಿಸುವ ವಸ್ತ್ರಸಂಹಿತೆಗೆ ಹಿಜಾಬ್, ಪರ್ದಾ ಎಂಬ ಹೆಸರು ಕೂಡ ಇದೆ. ಪ್ರಾದೇಶಿಕವಾಗಿ ಬುರ್ಖಾ ಎಂಬ ಹೆಸರಿನಲ್ಲಿ ಹಿಜಾಬ್ ಆಚರಣೆಯಲ್ಲಿದೆ.

ಮಹಿಳೆಯ ಕಡಿಮೆ ಬಟ್ಟೆ ತೊಟ್ಟಷ್ಟು ಅವಳು ಅಭಿವೃದ್ಧಿ ಹೊಂದಿದ್ದಾಳೆ ಎಂದರ್ಥ ಬರುವಂತೆ ಪ್ರಚಾರಪಡಿಸುತ್ತಿರುವ ರಾಷ್ಟ್ರಗಳಲ್ಲಿ ಹಿಜಾಬ್ ನಿಷೇಧಿಸಲಾಗಿದೆ. ಹಿಜಾಬ್ ಎಂಬುದು ಮಹಿಳೆಗೆ ಬಂಧನ, ಕಿರುಕುಳ ಎಂದು ಗುಲ್ಲೆಬ್ಬಿಸುತ್ತಿರುವ ಇಂತಹ ರಾಷ್ಟ್ರಗಳಲ್ಲಿ ಹಿಜಾಬ್ ಧರಿಸಿದ ಮಹಿಳೆಯರನ್ನು ಶಾಲಾ ಕಾಲೇಜುಗಳಿಂದ ಹೊರದಬ್ಬಲಾಗುತ್ತದೆ, ಕೆಲಸದಿಂದ ವಜಾಗೊಳಿಸಲಾಗುತ್ತದೆ, ನ್ಯಾಯಾಲಯದೊಳಗೆ ಇರಿದು ಕೊಲೆಗೈಯ್ಯಲಾಗುತ್ತದೆ, ಬೀದಿಯಲ್ಲೇ ಪೊಲೀಸರು ಎಳೆದೊಯ್ಯುತ್ತಾರೆ. ಅವೆಲ್ಲ ಮಹಿಳೆಯರ ಮೇಲೆ ತಾವು ನಡೆಸುತ್ತಿರುವ ಕಿರುಕುಳ, ಬಂಧನ, ದೌರ್ಜನ್ಯ ಎಂದು ಇಂತಹ ರಾಷ್ಟ್ರಗಳಿಗೆ ಅನಿಸಿದ್ದೇ ಇಲ್ಲ. ಹಿಜಾಬ್ ಮೂಲಕ ಮಹಿಳೆಯರನ್ನು ಧರ್ಮವು ಶೋಷಿಸುತ್ತಿದೆ ಎಂದು ಹುಯಿಲೆಬ್ಬಿಸುತ್ತಿರುವ ಮಹಿಳಾ ಪೀಡಕ ರಾಷ್ಟ್ರಗಳೇ ಇಂದು ಹಿಜಾಬ್ ನಿಷೇಧ ಜಾರಿಗೊಳಿಸುವ ಮೂಲಕ ಮಹಿಳೆಯರ ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತಿವೆ.

ಹಿಜಾಬ್ ಕುರಿತು ಹಲವಾರು ಬಗೆಯ ಅಪಪ್ರಚಾರಗಳು ಜಾರಿಯಲ್ಲಿವೆ. ಬೆತ್ತಲೆ ಸಂಸ್ಕೃತಿ ಜಾರಿಯಾಗುವವರೆಗೂ ಪಾಶ್ಚಾತ್ಯ ದೇಶಗಳು ಇಂತಹ ಅಪಪ್ರಚಾರಗಳನ್ನು ನಡೆಸುತ್ತಲೇ ಇರುತ್ತವೆ. ಈ ಅಪಪ್ರಚಾರ ಎಷ್ಟು ಪರಿಣಾಮಕಾರಿಯಾಗಿದೆ ಎಂದರೆ ಕೆಲವು ಮಂದಿ ವಿಚಾರವಾದಿಗಳಿಗೂ ಕೂಡ ಹಿಜಾಬ್ ಬಂಧನ ಸಂಕೇತ ಎಂಬ ಅನುಮಾನ ಮೂಡಿದ್ದಿದೆ. ವಾಸ್ತವದಲ್ಲಿ ಮುಸ್ಲಿಮ್ ಮಹಿಳೆಯರು ಯಾರೂ ಒತ್ತಡಕ್ಕೆ ಮಣಿದು ಹಿಜಾಬ್ ಧರಿಸುತ್ತಿಲ್ಲ. ಇತರ ಧರ್ಮಗಳಲ್ಲಿರುವಂತೆ ಅದೊಂದು ಧಾರ್ಮಿಕ ಸ್ವಾತಂತ್ರ್ಯ ಎಂದು ಪರಿಗಣಿಸಿದರೆ ಹಿಜಾಬ್ ಯಾರಿಗೂ ತೊಂದರೆಯಾಗಿ ಕಾಣಿಸದು. ವಿಚಿತ್ರವೆಂದರೆ ಹಿಜಾಬ್ ಎಂಬುದು ಭಯಂಕರ ಎಂದು ಭಾಸವಾಗುತ್ತಿರುವುದು ಅದನ್ನು ಧರಿಸದವರಿಗೇ ಹೊರತು ಧರಿಸುತ್ತಿರುವ ಮಹಿಳೆಯರಿಗೆ ಅಲ್ಲ.

ಹಿಜಾಬ್ ಬಗ್ಗೆ ಇರುವ ವಿಚಿತ್ರಕಾರಿ ಅಪಪ್ರಚಾರವೇನೆಂದರೆ ಅದು ಮಹಿಳೆಯರು ಮುಖ್ಯವಾಹಿನಿಗೆ ಬರಲು ಅಥವಾ ಅಭಿವೃದ್ಧಿ ಸಾಧಿಸಲು ತೊಡಕಾಗುತ್ತದೆ ಎಂಬುದು. ಧರಿಸುವ ಬಟ್ಟೆಯು ಅಭಿವೃದ್ಧಿಗೆ ಪ್ರೇರಕ ಅಥವಾ ಮಾರಕವೆನಿಸಲು ಸಾಧ್ಯವೇ? ಅಷ್ಟಕ್ಕೂ ಹಿಜಾಬ್ ಧರಿಸುವವರ ನಡುವೆ ಬೆಳೆದು ಬಂದ ಅದೆಷ್ಟೋ ಪ್ರತಿಭಾವಂತರು ನಮ್ಮ ಮುಂದಿದ್ದಾರೆ. ವೈದ್ಯಕೀಯ, ಇಂಜಿನಿಯರಿಂಗ್ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ.

ವಸ್ತುಸ್ಥಿತಿ ಹೀಗಿರುವಾಗ ಒಂದು ನಿರ್ದಿಷ್ಟ ಧರ್ಮವನ್ನು ನಿಂದನೆಗೈಯ್ಯುವುದಕ್ಕಾಗಿ ಅಥವಾ ಅಪಪ್ರಚಾರಗೊಳಪಡಿಸುವುದಕ್ಕಾಗಿ ಅದರ ಧಾರ್ಮಿಕ ಸಂಕೇತಗಳನ್ನೇ ವಿರೂಪಗೊಳಿಸುತ್ತಿರುವುದು ಖಂಡನೀಯ.

ಜಾಗತಿಕವಾಗಿ ಹಿಜಾಬ್ ಮತ್ತೆ ಮತ್ತೆ ಸುದ್ದಿಯಾಗುತ್ತಿದೆ. ಇತ್ತೀಚೆಗಷ್ಟೇ ಫ್ರಾನ್ಸ್‌ನಲ್ಲಿ ಹಿಜಾಬ್ ನಿಷೇಧಿಸಿ ಕಾನೂನು ಜಾರಿಯಾಯಿತು. ಸಹಜವಾಗಿ ಜಗತ್ತಿನ ಮುಸ್ಲಿಮರು ಇದಕ್ಕೆ



ವಿರೋಧ ವ್ಯಕ್ತಪಡಿಸಿದ್ದರು. ಲೇಖನಗಳು ಪ್ರಕಟವಾದವು. ಬಹುತೇಕ ಪ್ರಗತಿಪರ ಚಿಂತಕರು ಧಾರ್ಮಿಕ ಸ್ವಾತಂತ್ರ್ಯವನ್ನು ನಿರ್ಬಂಧಿಸಿದ ನೆಲೆಯಲ್ಲಿ ಫ್ರಾನ್ಸ್‌ನ ಕ್ರಮವನ್ನು ಖಂಡಿಸಿದರು. ಈ ಎಲ್ಲ ಜಂಜಾಟದ ನಡುವೆ ನಾವು ಒಂದು ವಿಚಾರವನ್ನು ಮರೆತು ಹಿಜಾಬ್ ಪರವಾಗಿ ಮಾತನಾಡಲಾರಂಭಿಸಿದೆವು...!

ಹೌದು, ಸದ್ಯ ಇಲ್ಲಿನ ಬಹುತೇಕ ಬುರ್ಖಾಧಾರಿಗಳು ಹಿಜಾಬ್ ಧರಿಸುತ್ತಿದ್ದೇವೆ ಎಂದು ಭಾವಿಸಿಕೊಂಡಂತಿದೆ. ಇಲ್ಲ, ಖಂಡಿತವಾಗಿಯೂ ಹೆಚ್ಚಿನ ಬುರ್ಖಾಧಾರಿಗಳು ಹಿಜಾಬ್ ಧರಿಸಿದ ಭ್ರಮೆಯಲ್ಲಿದ್ದಾರೆ. ದೇಹ ಸೌಂದರ್ಯವನ್ನು ಹೆಚ್ಚಿಸುವ ಮತ್ತು ಉಬ್ಬುತಗ್ಗುಗಳನ್ನು ಪ್ರದರ್ಶಿಸುವ ಮನಮೋಹಕ ಬುರ್ಖಾಗಳು ಖಂಡಿತವಾಗಿಯೂ ಹಿಜಾಬ್ ಅಲ್ಲ. ಅದು, ಇತರ ಫ್ಯಾಶನ್ ವಸ್ತ್ರಗಳಾದ ಸಾರಿ, ಚೂಡಿದಾರ್, ಚೋಲಿ ಮುಂತಾದ ವಿನ್ಯಾಸದ ಪೈಕಿ ಬುರ್ಖಾವೂ ಒಂದು ಫ್ಯಾಷನ್ ವಸ್ತ್ರವಾಗಿದೆ. ಒಂದು ವೇಳೆ ತಮಗೆ ಚೆಂದವೆಂದು ಕಂಡ ರೆಡಿಮೇಡ್ ಬುರ್ಖಾವು ಧರಿಸಿದಾಗ ದೇಹಕ್ಕೆ ಅಂಟಿಕೊಳ್ಳುವಷ್ಟು ಟೈಟ್ ಇಲ್ಲದಿದ್ದರೆ ಆಗಲೇ ಅದರ ಅಳತೆಯನ್ನು ಫಿಟ್ ಮಾಡಿಸಿಕೊಳ್ಳದೆ ನಾವು ಖರೀದಿಸುತ್ತೇವೆಯೇ? ಹಾಗಿದ್ದರೆ ಈಗಿನ ಬುರ್ಖಾ ಧರಿಸುವುದರ ಉದ್ದೇಶವೇನು?

ಸದ್ಯ ಟ್ವೆಂಟಿ20 ಕ್ರಿಕೆಟ್ ಎಂಬುದು ವಯಸ್ಕರಿಗೆ ಮಾತ್ರ ಸೀಮಿತವಾದಂತಹ ಕ್ರೀಡೆಯಂತಿದೆ. ವಿಕೆಟ್, ಸಿಕ್ಸರ್, ಬೌಂಡರಿ ಮುಂತಾದ ಕ್ಷಣಗಳಲ್ಲಿ ಕಣ್ಣುಮುಚ್ಚಿ ಕುಳಿತುಕೊಳ್ಳಬೇಕಾದ ಸನ್ನಿವೇಶ ನಿರ್ಮಾಣ ಮಾಡಿರುವುದು ಯಾರು ? ಅದರ ಮೂಲವನ್ನು ಜಾಲಾಡುತ್ತಾ ಹೋದಾಗ ಜಾಗತಿಕವಾಗಿ ಮಹಿಳೆಯು ಯಾವ ರೀತಿ ಶೋಷಿಸಲ್ಪಡುತ್ತಿದ್ದಾಳೆ ಎಂಬುದು ಮನದಟ್ಟಾಗುತ್ತದೆ. ಆದರೆ ಈ ಎಲ್ಲ ಶೋಷಣೆಗೆ ಪಾಶ್ಚಾತ್ಯ ಸಂಸ್ಕೃ ತಿಯಲ್ಲಿ 'ಸಬಲೀಕರಣ, ಸಂಪೂರ್ಣ ಸ್ವಾತಂತ್ರ್ಯ, ಸಮಾನತೆ' ಎಂಬಿತ್ಯಾದಿ ಆಕರ್ಷಕ ಹೆಸರುಗಳಿವೆ ಎಂಬುದನ್ನು ಗಮನಿಸಲೇಬೇಕು. ಇಂತಹ ಸ್ವಾತಂತ್ರ್ಯ, ಸಬಲೀಕರಣ, ಸಮಾನತೆ ನಮಗೆ ಬೇಕೇ...?

ಯಾವಾಗ ಬುರ್ಖಾ ಕೂಡ ಇತರ ವಿನ್ಯಾಸದ ಬಟ್ಟೆಗಳಂತೆ ಸೀಸನ್ ತಕ್ಕಂತೆ ತನ್ನ ಫ್ಯಾಶನ್ ಬದಲಾಯಿಸತೊಡಗಿತೋ ಆವಾಗಲೇ ಬುರ್ಖಾ ಎಂಬ ಬಟ್ಟೆಯು ಹಿಜಾಬ್‌ನ ಪರಿಕಲ್ಪನೆಯಿಂದ ದೂರವಾಗಿಬಿಟ್ಟಿದೆ. ಒಂದೊಂದು ಸೀಸನ್‌ಗೆ ತಕ್ಕಂತೆ ಒಂದೊಂದು ವಿನ್ಯಾಸದ ಬುರ್ಖಾಗಳು ಇಂದು ಮಾರುಕಟ್ಟೆಗೆ ಲಗ್ಗೆಯಿಡುತ್ತಿವೆ. ಅದನ್ನು ಕೊಂಡುಕೊಳ್ಳುವ ಗಿರಾಕಿಗಳೂ ಹೆಚ್ಚಾಗುತ್ತಿದ್ದಾರೆ. ಒಬ್ಬೊಬ್ಬರ ಬಳಿ ಮೂರು ನಾಲ್ಕು ಬಗೆಯ ಬುರ್ಖಾ ಇದೆ ಎಂದರೆ ಅವರು ತುಂಬಾ ಸಂಪ್ರದಾಯವಾದಿಗಳೋ, ಹಿಜಾಬ್‌ನ ಕುರಿತು ತುಂಬಾ ಕಾಳಜಿ ಇರುವವರೋ ಎಂದು ಅರ್ಥೈಸಿಕೊಳ್ಳಬೇಕಾಗಿಲ್ಲ. ಹಾಗೆಂದ ಮಾತ್ರಕ್ಕೆ ವಿವಿಧ ವಿನ್ಯಾಸದ ಬುರ್ಖಾ ಧರಿಸುವುದು ಅಥವಾ ಖರೀದಿಸುವುದು ತಪ್ಪೆಂದಲ್ಲ. ಆದರೆ ಶೋಕಿಗಾಗಿ, ಇತರರನ್ನು ಆಕರ್ಷಿಸಲು ಧರಿಸುವ ವಿನ್ಯಾಸದ ಬುರ್ಖಾಗಳು ಹಿಜಾಬ್‌ನ ಪರಿಧಿಯಿಂದ ಹೊರತಾಗಿವೆ. ಆಧುನಿಕ ಜೀವನದಲ್ಲಿ ಸಂಸ್ಕೃತಿ, ರೀತಿ ನಿಯಮ ಎಂಬುದು ಮಾರುಕಟ್ಟೆಯನ್ನು ಅವಲಂಬಿಸಿಕೊಂಡಿದೆ.

ಹಿಜಾಬ್ ಎಂಬುದು ಮಹಿಳೆಯ ಘನತೆಯನ್ನು ಕಾಪಾಡುವ ಅಸ್ತ್ರವಾಗಿದೆ. ಅದನ್ನು ಅಭಿವೃದ್ಧಿಗೆ ಮಾರಕ ಎಂದು ಅಪಪ್ರಚಾರ ನಡೆಸುವವರ ಮನೋಸ್ಥಿತಿ ಏನು ಮತ್ತು ಉದ್ದೇಶ ಏನು ಎಂಬುದನ್ನು ಅರಿತುಕೊಳ್ಳಬೇಕು. ಇಸ್ಲಾಮ್ ಧರ್ಮವು ಯಾವತ್ತೂ ಮಹಿಳೆಯು ಮಾರುಕಟ್ಟೆಯ ಸರಕಾಗಿ ಬಳಕೆಯಾಗುವುದನ್ನು ಕಟುವಾಗಿ ವಿರೋಧಿಸುತ್ತದೆ ಮತ್ತು ತಡೆಯುತ್ತದೆ. ಆದರೆ ಇಂದು ಪಾಶ್ಚಾತ್ಯ ರಾಷ್ಟ್ರಗಳು ಎಲ್ಲ ಕ್ಷೇತ್ರಗಳಲ್ಲಿ ಮಹಿಳೆಯನ್ನು ಬಳಸುತ್ತಿರುವುದು ವ್ಯಾಪಾರದ ದೃಷ್ಟಿಯಿಂದ.

ಅದಕ್ಕೊಂದು ಜ್ವಲಂತ ಉದಾಹರಣೆ ಈಗ ನಡೆಯುತ್ತಿರುವ ಐಪಿಎಲ್ ಕ್ರಿಕೆಟ್ ಪಂದ್ಯ. ಸದ್ಯ ಟ್ವೆಂಟಿ20 ಕ್ರಿಕೆಟ್ ಎಂಬುದು ವಯಸ್ಕರಿಗೆ ಮಾತ್ರ ಸೀಮಿತವಾದಂತಹ ಕ್ರೀಡೆಯಂತಿದೆ. ವಿಕೆಟ್, ಸಿಕ್ಸರ್, ಬೌಂಡರಿ ಮುಂತಾದ ಕ್ಷಣಗಳಲ್ಲಿ ಕಣ್ಣುಮುಚ್ಚಿ ಕುಳಿತುಕೊಳ್ಳಬೇಕಾದ ಸನ್ನಿವೇಶ ನಿರ್ಮಾಣ ಮಾಡಿರುವುದು ಯಾರು ? ಅದರ ಮೂಲವನ್ನು ಜಾಲಾಡುತ್ತಾ ಹೋದಾಗ ಜಾಗತಿಕವಾಗಿ ಮಹಿಳೆಯು ಯಾವ ರೀತಿ ಶೋಷಿಸಲ್ಪಡುತ್ತಿದ್ದಾಳೆ ಎಂಬುದು ಮನದಟ್ಟಾಗುತ್ತದೆ. ಆದರೆ ಈ ಎಲ್ಲ ಶೋಷಣೆಗೆ ಪಾಶ್ಚಾತ್ಯ ಸಂಸ್ಕೃತಿಯಲ್ಲಿ 'ಸಬಲೀಕರಣ, ಸಂಪೂರ್ಣ ಸ್ವಾತಂತ್ರ್ಯ, ಸಮಾನತೆ' ಎಂಬಿತ್ಯಾದಿ ಆಕರ್ಷಕ ಹೆಸರುಗಳಿವೆ ಎಂಬುದನ್ನು ಗಮನಿಸಲೇಬೇಕು. ಇಂತಹ ಸ್ವಾತಂತ್ರ್ಯ, ಸಬಲೀಕರಣ, ಸಮಾನತೆ ನಮಗೆ ಬೇಕೇ...?

*19ನೆ ಪುಟದಿಂದ*

## *ಉಸಾಮಾ ಹೋದ, ಒಬಾಮ ?*

ಇರಾಕ್, ಅಫ್ಘಾನ್, ಪಾಕ್‌ನಲ್ಲೂ ಸಿಐಎ ಇದನ್ನೇ ಮಾಡುತ್ತಾ ಬಂದಿದೆ. ಪ್ರಜ್ಞಾವಂತರು ಮಾತ್ರ ಇದನ್ನು ಅರಿತುಕೊಳ್ಳಬಹುದಾಗಿದೆ.

ಅಮೆರಿಕದ ಈ ಭಯೋತ್ಪಾದನಾ ಕೃತ್ಯಗಳು ಜಗತ್ತಿನ ಮುಂದೆ ತೆರೆದುಕೊಳ್ಳುವುದಿಲ್ಲ. ಅದಕ್ಕೂ ಕಾರಣವಿದೆ. ಜಗತ್ತಿನಲ್ಲಿ ಅತ್ಯಂತ ದೊಡ್ಡ ಸುದ್ದಿ ಸಂಸ್ಥೆಗಳು ಇಂಗ್ಲಿಷ್ ಸುದ್ದಿ ಸಂಸ್ಥೆಗಳಾಗಿವೆ. ಹೆಚ್ಚಿನ ಬಹುತೇಕ ಎಲ್ಲಾ ಇಂಗ್ಲಿಷ್ ಸುದ್ದಿ ಸಂಸ್ಥೆಗಳೂ, ಮಾಧ್ಯಮಗಳೂ ಪಾಶ್ಚಿಮಾತ್ಯ ಬಂಡವಾಳ ಶಾಹಿಗಳ ನಿಯಂತ್ರಣದಲ್ಲಿರುವುದಾಗಿದೆ. ಭಾರತದ ಸುದ್ದಿ ಸಂಸ್ಥೆಗಳಿಗೂ ಪಾಶ್ಚಿಮಾತ್ಯ ಬಂಡವಾಳಶಾಹಿಗಳು ಹೂಡಿಕೆದಾರರಾಗಿದ್ದಾರೆ. ಆದುದರಿಂದ ಈ ಮಾಧ್ಯಮಗಳು ಯಾವ ವಿಷಯದಲ್ಲೂ ಅಮೆರಿಕವನ್ನು ಪ್ರಶ್ನಿಸುವಂತಹದ್ದಲ್ಲ. ಗಡ್ಡ ಹಾಗೂ ಪೈಜಾಮವನ್ನು ಭಯೋತ್ಪಾದನೆಯ ಸಂಕೇತವನ್ನಾಗಿ ಮಾಡಿರುವುದು ಇಂತಹ ಮಾಧ್ಯಮಗಳೇ ಆಗಿವೆ.

ನಮ್ಮ ಪ್ರಾದೇಶಿಕ ಮಾಧ್ಯಮಗಳಲ್ಲಿ ಬಿತ್ತರವಾಗುವುದು ಇಂಗ್ಲಿಷ್ ಮಾಧ್ಯಮಗಳು ಪ್ರಕಟಿಸಿರುವುದರ ಅನುವಾದಗಳಷ್ಟೇ. ಅವುಗಳಿಂದ ಹೆಚ್ಚಿನದ್ದೇನೂ ನಿರೀಕ್ಷಿಸಲು ಸಾಧ್ಯವಿಲ್ಲ. ಉಸಾಮಾ ಹತ್ಯೆಯಾಗಿರುವುದರಿಂದ ವಿಶ್ವದಲ್ಲಿ ಭಯೋತ್ಪಾದನೆಯು ಕೊನೆಗೊಂಡಿದೆಯೆಂಬಂತೆ ಮಾಧ್ಯಮಗಳು ಬಿತ್ತರಿಸುತ್ತಿವೆ. ಅದು ಎಂದಿಗೂ ಸಾಧ್ಯವಿಲ್ಲ. ಒಬಾಮಾ ಇನ್ನೂ ಉಳಿದಿದ್ದಾರೆ. ಅವರ ನಂತರ ಅಮೆರಿಕ ಇನ್ನೂ ಹಲವು ಅಧ್ಯಕ್ಷರುಗಳನ್ನು ಕಾಣಲಿದೆ. ಎಲ್ಲಿಯವರೆಗೆ ಅಮೆರಿಕವಿರುತ್ತದೋ, ಅದರ ವಿದೇಶಾಂಗ ನೀತಿಯು ಬದಲಾಗಲಾರದೋ, ಅಲ್ಲಿಯ ತನಕ ಭಯೋತ್ಪಾದನೆ ಮುಂದುವರಿಯುತ್ತದೆ.

---

33ನೆ ಪುಟದಿಂದ

## ಸಾಯಿಬಾಬಾರ ಧರ್ಮಾರ್ಥ...

ಇದರ ಹಿಂದೆ ಒಂದು ವ್ಯವಸ್ಥಿತ ಷಡ್ಯಂತ್ರವಿದೆ. ಇದು ಪ್ರಭುತ್ವ ಜನರ ಕಲ್ಯಾಣ ಕಾರ್ಯಕ್ರಮಗಳಿಂದ ಹಿಂದೆಗೆಯುವುದನ್ನು, ಜನರಲ್ಲಿ ತಮಗಿಂತ ಹೆಚ್ಚಾಗಿ ಮಾನವಾತೀತ ಶಕ್ತಿಗಳಲ್ಲಿ ನಂಬಿಕೆ ಇಡುವುದನ್ನು, ಸ್ವಶ್ರಮ ಮತ್ತು ಸ್ವಾವಲಂಬನೆಗಳಿಗಿಂತ ಅದೃಷ್ಟ ಮತ್ತು ಪವಾಡಗಳಲ್ಲಿ ನಂಬಿಕೆ ಇಡುವಂಥಹ ವ್ಯವಸ್ಥೆಯನ್ನು ಪೋಷಿಸುವ ಅತ್ಯಂತ ಪ್ರಜಾತಂತ್ರ ವಿರೋಧಿ ಮಾನಸಿಕತೆಯನ್ನು ಪೋಷಿಸುವ ಹುನ್ನಾರ. ಸಹಾಯ ಮಾಡಿದವರನ್ನು ನೆನೆಯುವ ಜನಸಾಮಾನ್ಯರ ಸಹಜ ಭಾವನೆಗಳನ್ನು ದುರುಪಯೋಗ ಪಡಿಸಿಕೊಂಡು ಜನರನ್ನು ಶಾಶ್ವತವಾಗಿ ದೈನೇಸಿಗಳನ್ನಾಗಿ ಮಾಡುವ ಹುನ್ನಾರ ಇದಾಗಿದೆ. ಜನರ ಪ್ರಶ್ನಿಸುವ ಮನೋಭಾವವನ್ನೇ ಚಿವುಟಿಹಾಕುವ ಯತ್ನ.



"why people beleive in weird things" ಎಂಬ (ಜನರೇಕೆ ಅಸಂಗತ ವಿಷಯಗಳಲ್ಲಿ ನಂಬಿಕೆ ಇಡುತ್ತಾರೆ?) ಪುಸ್ತಕಕ್ಕೆ ಮುನ್ನುಡಿ ಬರೆಯುತ್ತಾ ಅಮೆರಿಕದ ಪ್ರಖ್ಯಾತ ವಿಚಾರವಾದಿ ಸ್ಟೀಫನ್ ಜೇ ಗೌಲ್ಡ್ ಎಂಬವರು "skepticism is the agent of reason against organized irrationalism-and is therefore one of the keys to human and social decency " ಎಂದು ಹೇಳುತ್ತಾರೆ. ಅಂದರೆ "ಅನುಮಾನಿಸುವುದು ಸಂಘಟಿತ ಮೌಢ್ಯದ ವಿರುದ್ಧ ವಿಚಾರ ವಾದ ಉಪಕರಣವಾಗಿರುತ್ತದೆ. ಆದುದರಿಂದಲೇ ಅದು ಮಾನವೀಯ ಮತ್ತು ಸಾಮಾಜಿಕ ಆರೋಗ್ಯವನ್ನು ಸಾಧಿಸಲು ಒಂದು ಪ್ರಮುಖ ಸಾಧನವೂ ಆಗುತ್ತದೆ." ಎಂದು ಹೇಳುತ್ತಾರೆ. ಸಾಯಿಬಾಬಾರಂಥ ಸಂಘಟಿತ ಮೌಢ್ಯದ ವಿರುದ್ಧ ಎಲ್ಲಿಯೂ ಒಂದು ಅನುಮಾನದ ಎಳೆಯೂ ಕಾಣದಿರುವುದು ನಮ್ಮ ಪ್ರಜಾತಂತ್ರ ಎಷ್ಟು ಅನಾರೋಗ್ಯಪೀಡಿತವಾಗಿದೆ ಎಂಬುದರ ಸಂಕೇತವಾಗಿಲ್ಲವೇ?

# ನ್ಯಾಯದ ನಿರೀಕ್ಷೆಯಲ್ಲಿ ಬಾಬರಿ ಮಸ್ಜಿದ್

● ಪಿಎನ್‌ಬಿ

### "It was a strange and surprising order"- supreme court

ನಿಜಕ್ಕೂ ಆಶ್ಚರ್ಯಕರ!

ಈ ದೇಶದ ಪರಮೋಚ್ಚ ನ್ಯಾಯಾಲಯವು ಅಲಹಬಾದ್ ಕೋರ್ಟ್ ನೀಡಿದ್ದ ಬಾಬರಿ ತೀರ್ಪಿಗೆ ತಡೆಯಾಜ್ಞೆ ವಿಧಿಸಿದೆ. ಸುಪ್ರೀಮ್ ಕೋರ್ಟು ವ್ಯಕ್ತಪಡಿಸಿದ ಪ್ರತಿಕ್ರಿಯೆಯು ಸಾಂವಿಧಾನಿಕ ವ್ಯವಸ್ಥೆಗೆ ಮತ್ತೊಮ್ಮೆ ಜೀವ ತುಂಬಿದೆ. ''ಇದೊಂದು ಅಪರೂಪ ಮತ್ತು ಆಶ್ಚರ್ಯಕರ ತೀರ್ಪು'' ಎಂದು ಸುಪ್ರೀಮ್ ಕೋರ್ಟ್ ಪ್ರತಿಕ್ರಿಯಿಸಿದೆ.



2010 ಸೆಪ್ಟೆಂಬರ್ 30ರಂದು ಅಲಹಬಾದ್ ಹೈಕೋರ್ಟು ನೀಡಿದ್ದ ತೀರ್ಪು ದೇಶಾದ್ಯಂತ ಸಂಚಲನ ಮೂಡಿಸಿತ್ತು. ಭಾರೀ ಭದ್ರತೆಯ ನಡುವೆ ಬಾಬರಿ ತೀರ್ಪನ್ನು ದೇಶದ ಮುಂದಿಡಲಾಯಿತು. ತೀರ್ಪಿನ ಬಗ್ಗೆ ಸಂಘಪರಿವಾರ ಎಷ್ಟು ಹರ್ಷ ವ್ಯಕ್ತಪಡಿಸಿತ್ತೋ ಅಷ್ಟೇ ತೀವ್ರವಾಗಿ ಪ್ರಗತಿಪರ ಚಿಂತಕರು, ವಿಚಾರವಾದಿಗಳು ಈ ತೀರ್ಪನ್ನು ಆಕ್ಷೇಪಿಸಿದರು. ಕೇವಲ ನಂಬಿಕೆಯ ಆಧಾರದಲ್ಲಿ ಬಾಬರಿ ಮಸ್ಜಿದ್‌ನ ಜಾಗವು ರಾಮಮಂದಿರವಾಗಿತ್ತು ಎಂಬುದಾಗಿ ತೀರ್ಪು ನೀಡಿತ್ತು. ಮಾತ್ರವಲ್ಲ, ಈ ತೀರ್ಪು ಪ್ರಹಸನದಂತೆ ಕಂಡುಬಂದಿತ್ತು. ತ್ರಿಸದಸ್ಯ ಪೀಠದ ಮೂವರು ನ್ಯಾಯಮೂರ್ತಿಗಳ ಮಧ್ಯೆ ತೀರ್ಪಿನ ಬಗ್ಗೆ ಭಿನ್ನಾಭಿಪ್ರಾಯವಿತ್ತು.

ವಿಚಿತ್ರವೆಂದರೆ ತೀರ್ಪಿಗೆ ಮುನ್ನ ತಮ್ಮ ಜಾತ್ಯತೀತತೆಯನ್ನು ಪ್ರದರ್ಶನಕ್ಕಿಡುವ ಒಂದು ಸಂತೆಯೇ ನಮ್ಮ ನಡುವೆ ನಡೆಯಿತು. ''ತೀರ್ಪು ಏನೇ ಇರಲಿ, ಸ್ವಾಗತಿಸೋಣ, ಕಾನೂನು ಆದೇಶವನ್ನು ಸ್ವೀಕರಿಸೋಣ'' ಎಂಬರ್ಥದಲ್ಲಿ ಬ್ಯಾನರ್‌ಗಳು ಎಲ್ಲೆಂದರಲ್ಲಿ ನೇತಾಡಲಾರಂಭಿಸಿದವು. ಈ ಮಂದಿ ತೀರ್ಪಿನ ಬಗ್ಗೆ ವಿಮರ್ಶಿಸುವ, ಪರಾಮರ್ಶಿಸುವ ಗೋಜಿಗೇ ಹೋಗಲಿಲ್ಲ. ವಾಸ್ತವದಲ್ಲಿ ಇವರು ಬಾಬರಿ ಮಸ್ಜಿದ್ ಎಂಬುದನ್ನು ಕೇವಲ ಮುಸ್ಲಿಮರ ಪ್ರಾರ್ಥನಾ ಕೇಂದ್ರ ಎಂಬರ್ಥದಲ್ಲಿ ತಿಳಿದುಕೊಂಡಿದ್ದ ಕೋಮುವಾದಿಗಳು. ಆದರೆ ಅದು ದೇಶದ ಜಾತ್ಯತೀತ ಪರಂಪರೆಯ ಸಂಕೇತ ಎಂದು ಒಪ್ಪಿಕೊಳ್ಳುವ ಜಾತ್ಯತೀತ ಮನೋಭಾವ ಈ ಮಂದಿಗಿರಲಿಲ್ಲ. ಇವರೆಂದೂ ಬಾಬರಿ ಮಸ್ಜಿದ್‌ನ ಪುನರ್‌ನಿರ್ಮಾಣಕ್ಕಾಗಲೀ, ಬಾಬರಿ ಮಸ್ಜಿದ್ ಧ್ವಂಸಗೈದ ಆರೋಪಿಗಳಿಗೆ ಶಿಕ್ಷೆಯಾಗಬೇಕೆಂದಾಗಲೀ ಆಗ್ರಹಿಸಿದವರಲ್ಲ. ಅಷ್ಟೇ ಯಾಕೆ, ಕಾನೂನು ತೀರ್ಪನ್ನು ಸ್ವೀಕರಿಸೋಣ ಎಂದು ಕರೆನೀಡುವ ಈ ಮಂದಿ, ಬಾಬರಿ ಮಸ್ಜಿದ್ ಧ್ವಂಸದ ಆರೋಪಿಗಳ ಹೆಸರನ್ನು ಲಿಬರ್ಹಾನ್ ಆಯೋಗವು ಬಹಿರಂಗಪಡಿಸಿದಾಗ ಆರೋಪಿಗಳಿಗೆ ಶಿಕ್ಷೆಯಾಗುವ ಮೂಲಕ ಕಾನೂನು ಪಾಲನೆಯಾಗಬೇಕು ಎಂದು ಯಾಕೆ ಆಗ್ರಹಿಸಲಿಲ್ಲ?

ಇದೀಗ ಸುಪ್ರೀಮ್ ಕೋರ್ಟ್ ಮಹತ್ವದ ಆದೇಶವನ್ನು ಹೊರಡಿಸಿದೆ. 2011ರ ಮೇ 9ರಂದು ಆದೇಶ ಹೊರಡಿಸಿದ

**ಅಲಹಬಾದ್ ಹೈಕೋರ್ಟ್ ತನ್ನ ತೀರ್ಪಿನಲ್ಲಿ ರಾಜಿ ಸೂತ್ರ ಮಾತ್ರವಲ್ಲದೆ, ದೇಶದ ಜನತೆಗೆ ರಾಮಾಯಣವನ್ನು ಬೋಧಿಸಲು ಹೊರಟಿತು. ಧರ್ಮ ನಿರಪೇಕ್ಷ, ನಿಷ್ಪಕ್ಷಪಾತ ನ್ಯಾಯಾಂಗ ವ್ಯವಸ್ಥೆಯೇ ಭಾರತದ ಸಂವಿಧಾನದ ವಿಶೇಷತೆಗಳಲ್ಲೊಂದು. ಆದರೆ ಬಾಬರಿ ಮಸ್ಜಿದ್ ಮಾಲಕತ್ವಕ್ಕೆ ಸಂಬಂಧಿಸಿದ ತೀರ್ಪಿನ ಮೂಲಕ ನ್ಯಾಯಾಲಯವು ಮತ್ತೊಮ್ಮೆ ಮಸ್ಜಿದ್‌ನ್ನು ಧ್ವಂಸಗೊಳಿಸಿತ್ತು.**

ಸುಪ್ರೀಮ್ ಕೋರ್ಟ್ ನ್ಯಾಯವನ್ನು ಜೀವಂತವಾಗಿರಿಸಿದೆ. ಜಾತ್ಯತೀತದ ಪ್ರದರ್ಶಕರು ಈಗ ಪ್ರತಿಕ್ರಿಯಿಸಬೇಕಾಗಿದೆ.

''ವಿವಾದಿತ ಜಾಗದಲ್ಲಿ ಯಾರೂ ಪಾಲು ಕೇಳಿರಲಿಲ್ಲ. ಆದಾಗ್ಯೂ ಅಲಹಬಾದ್ ಹೈಕೋರ್ಟ್ ಹಿಂದು, ಮುಸ್ಲಿಮ್ ಮತ್ತು ನಿರ್ಮೋಹಿ ಅಖಾರಗಳಿಗೆ ಸಮನಾಗಿ ಭೂಮಿ ಹಂಚಿದೆ. ಇದು ಆಶ್ಚರ್ಯಕರ ಮತ್ತು ಅಪರೂಪದ ತೀರ್ಪು'' ಎಂದು ಸುಪ್ರೀಮ್ ಕೋರ್ಟ್ ಸ್ಪಷ್ಟವಾಗಿ ತಿಳಿಸಿದೆ. ಬಾಬರಿ ಮಸ್ಜಿದ್ ವಿವಾದಕ್ಕೆ ಸಂಬಂಧಿಸಿದಂತೆ ಈವರೆಗೆ ಜನರು ಆಗ್ರಹಿಸಿಕೊಂಡು ಬಂದಿರುವುದು ನ್ಯಾಯವನ್ನು. ಫ್ಯಾಷಿಸ್ಟ್ ಶಕ್ತಿಗಳು ತಮ್ಮ ರಾಜಕೀಯ ಉದ್ದೇಶಕ್ಕಾಗಿ ಬಳಸಿಕೊಂಡ ಅಯೋಧ್ಯೆ ರಾಮಮಂದಿರ ವಿಚಾರದ ಹಿಂದಿನ ಷಡ್ಯಂತ್ರವು ಅಲಹಬಾದ್ ಹೈಕೋರ್ಟ್‌ನ ತೀರ್ಪು ಬಯಲಿಗೆಳೆಯುತ್ತದೆ ಎಂದೇ ಜನರು ಭಾವಿಸಿದ್ದರು. ಸಂವಿಧಾನದಲ್ಲಿ ನಂಬಿಕೆ ಇರಿಸಿಕೊಂಡಿದ್ದ ಜನರು, ಹೈಕೋರ್ಟ್ ತೀರ್ಪನ್ನು ಶಾಂತಿಯುತವಾಗಿಯೇ ಸ್ವೀಕರಿಸಿದರು. ಈಗ ಸಂವಿಧಾನಬದ್ಧವಾಗಿಯೇ ನ್ಯಾಯಕ್ಕಾಗಿ ಸುಪ್ರೀಮ್ ಕೋರ್ಟ್‌ನ ಮೊರೆ ಹೋಗಿದ್ದಾರೆ. ಸದ್ಯ ಸುಪ್ರೀಮ್ ಕೋರ್ಟ್ ವಿಧಿಸಿರುವ ತಡೆಯಾಜ್ಞೆಯು ತಾತ್ಕಾಲಿಕ ಗೆಲುವು.

ಅಲಹಬಾದ್ ಹೈಕೋರ್ಟ್ ತನ್ನ ತೀರ್ಪಿನಲ್ಲಿ ರಾಜಿ ಸೂತ್ರ ಮಾತ್ರವಲ್ಲದೆ, ದೇಶದ ಜನತೆಗೆ ರಾಮಾಯಣವನ್ನು ಬೋಧಿಸಲು ಹೊರಟಿತು. ಧರ್ಮ ನಿರಪೇಕ್ಷ, ನಿಷ್ಪಕ್ಷಪಾತ ನ್ಯಾಯಾಂಗ ವ್ಯವಸ್ಥೆಯೇ ಭಾರತದ ಸಂವಿಧಾನದ ವಿಶೇಷತೆಗಳಲ್ಲೊಂದು. ಆದರೆ ಬಾಬರಿ ಮಸ್ಜಿದ್ ಮಾಲಕತ್ವಕ್ಕೆ ಸಂಬಂಧಿಸಿದ ತೀರ್ಪಿನ ಮೂಲಕ ನ್ಯಾಯಾಲಯವು ಮತ್ತೊಮ್ಮೆ ಮಸ್ಜಿದ್‌ನ್ನು ಧ್ವಂಸಗೊಳಿಸಿತ್ತು. ಬಾಬರಿ ಮಸ್ಜಿದ್ ಇದ್ದ ಜಾಗದಲ್ಲಿ ಹಿಂದೆ ರಾಮಮಂದಿರ ಇತ್ತೆಂದೂ, ಅದನ್ನು ಧ್ವಂಸಗೈದು ಆ ಜಾಗದಲ್ಲಿ ಮಸ್ಜಿದ್ ಕಟ್ಟಲಾಗಿತ್ತೆಂದೂ, ಆದರೆ ಇದು ಇಸ್ಲಾಮ್ ಶೈಲಿಯ ಮಸ್ಜಿದ್ ಅಲ್ಲವೆಂದೂ, ರಾಮಲಲ್ಲಾ ಜಾಗವು ಹಿಂದುಗಳಿಗೆ ಸೇರಿದ್ದೆಂದೂ ತೀರ್ಪು ನೀಡಿತು. ಒಟ್ಟಿನಲ್ಲಿ ತೀರ್ಪು ಇಡೀ ವಿವಾದವನ್ನು ಭೂಮಿಯನ್ನು ಸಮನಾಗಿ ಹಂಚುವ ಮೂಲಕ ಎಲ್ಲರನ್ನೂ ಸಮಾಧಾನಿಸಲು ಯತ್ನಿಸಿತೇ ವಿನಹ ವಿವಾದಕ್ಕೆ ತೆರೆ ಎಳೆಯುವಂತಹ ನ್ಯಾಯವನ್ನು ಎತ್ತಿಹಿಡಿಯುವಂತಹ ತೀರ್ಪು ನೀಡುವಲ್ಲಿ ಅಲಹಬಾದ್ ಹೈಕೋರ್ಟು ವಿಫಲವಾಗಿತ್ತು.

ವಿಚಿತ್ರವೆಂದರೆ, ಕೇವಲ ನಂಬಿಕೆಯ ಆಧಾರದಲ್ಲಿ ಅಲಹಾಬಾದ್ ಹೈಕೋರ್ಟ್ ತೀರ್ಪು ನೀಡಿತ್ತು. ಹಿಂದುಗಳು ಹಿಂದಿನಿಂದಲೂ ನಂಬಿಕೊಂಡು ಬಂದಿರುವ ರಾಮನ ಅಸ್ತಿತ್ವದ ಬಗ್ಗೆ ಸಾಕ್ಷ್ಯಾಧಾರಗಳ ಅಗತ್ಯ ಬೇಕಾಗಿಲ್ಲ, ನಂಬಿಕೆಯೇ ಇಲ್ಲಿ ಮುಖ್ಯವೆನಿಸುತ್ತದೆ ಎಂದು ನ್ಯಾಯಮೂರ್ತಿ ಧರ್ಮವೀರ ಶರ್ಮ ಅಭಿಪ್ರಾಯಪಟ್ಟಿದ್ದರು. ಮಾತ್ರವಲ್ಲ, ಅವರು ಇಡೀ ಪ್ರದೇಶವು ಹಿಂದುಗಳಿಗೇ ನೀಡಬೇಕು ಎಂದು ಒಲವು ವ್ಯಕ್ತಪಡಿಸಿದ್ದರು. ಹೀಗಾಗಿ ಇಡೀ ನ್ಯಾಯದಾನ ಪ್ರಕ್ರಿಯೆಯು ಹಲವು ಸಂಶಯಗಳಿಗೆ ಎಡೆಮಾಡಿಕೊಟ್ಟಿತ್ತು.

ವಿಪರ್ಯಾಸವೆಂದರೆ ಮುಸ್ಲಿಮ್ ಸಮುದಾಯವು ಅಲಹಬಾದ್ ಹೈಕೋರ್ಟು ತೀರ್ಪಿನ ಕುರಿತು ಸಕಾರಾತ್ಮಕವಾಗಿ ಚಿಂತಿಸದೇ ಆ ಬಗ್ಗೆ ಕಾರ್ಯೋನ್ಮುಖವಾಗಲಿಲ್ಲ. ಕೇವಲ ಹೇಳಿಕೆಗಳಿಗೆ ಮಾತ್ರ ಸೀಮಿತಗೊಳಿಸಿ ಸುಮ್ಮನಾಗಿ ಬಿಡುವ ಮುಖಂಡರೆನಿಸಿಕೊಂಡವರು ಅದು ದೇಶದ ಸಾರ್ವಭೌಮತೆಗೆ ಸಂಬಂಧಿಸಿದ ವಿಚಾರವೆಂದು ಭಾವಿಸಲಿಲ್ಲ. ಅಲಹಬಾದ್ ಹೈಕೋರ್ಟಿನ ತೀರ್ಪಿನಿಂದಾಗಿ ಮುಸ್ಲಿಮ್ ಸಮುದಾಯವು ಭವಿಷ್ಯದಲ್ಲಿ ಎದುರಿಸಲಿರುವ ಅಪಾಯದ ಕುರಿತು ಜಾಗೃತಿ ಮೂಡಿಸುವ ಕಾರ್ಯವನ್ನು ಹಮ್ಮಿಕೊಂಡ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಎಂಬ ಸಾಮಾಜಿಕ ಸಂಘಟನೆಯು ದೇಶಾದ್ಯಂತ ಒಂದು ತಿಂಗಳ ಅಭಿಯಾನ ನಡೆಸಿತು. ಗಾಂಧೀಜಿ ಹತ್ಯೆ, ಬಾಬರಿ ಮಸ್ಜಿದ್ ಧ್ವಂಸ ಎಂಬ ಎರಡು ಘಟನೆಯ ಹಿಂದಿನ ಅಜೆಂಡಾ ಏನು ಎಂಬುದರ ಕುರಿತು ಸಂಘಟನೆಯು ರಾಷ್ಟ್ರವ್ಯಾಪಿ ವಿಚಾರ ಸಂಕಿರಣ, ರ್‍ಯಾಲಿ, ಸಾರ್ವಜನಿಕ ಸಮಾವೇಶಗಳನ್ನು ಹಮ್ಮಿಕೊಂಡಿತ್ತು.

ಸಂಘಪರಿವಾರವು ದೇಶದ ಪ್ರತಿಯೊಂದು ರಾಜ್ಯಗಳಲ್ಲೂ ಒಂದೊಂದು ಅಯೋಧ್ಯೆಯನ್ನು ಸೃಷ್ಟಿಸಿದೆ. ಇದು ಅದರ ಫ್ಯಾಷಿಸ್ಟ ಅಜೆಂಡಾದ ಅವಿಭಾಜ್ಯ ಯೋಜನೆಯೂ ಹೌದು. ಬಾಬರಿ ಮಸ್ಜಿದ್ ಪುನರ್‌ನಿರ್ಮಾಣ ಎಂಬುದು ಫ್ಯಾಷಿಸ್ಟ್ ಅಜೆಂಡಾದ ಸೋಲು ಮತ್ತು ಜಾತ್ಯತೀತ ಮೌಲ್ಯದ ಗೆಲುವು ಎಂಬ ಪರಿಜ್ಞಾನವನ್ನು ಮುಸ್ಲಿಮ್ ಸಮುದಾಯವು ಬೆಳೆಸಿಕೊಳ್ಳಬೇಕಾಗಿದೆ.

# ಉಸಾಮಾ ಹತ್ಯೆಯಾಯಿತು ಇನ್ನು ಅಮೆರಿಕಾವನ್ನು ಗಲ್ಲಿಗೇರಿಸಿ

● ರಿಯಾವುಲ್ ಎಚ್.

ಉಸಾಮಾ ಬಿನ್ ಲಾಡೆನ್‌ನನ್ನು ಹತ್ಯೆ ಮಾಡಲಾಗಿದೆ ಎಂದು ಕೊನೆಗೂ ಅಮೆರಿಕಾ ಅಧಿಕೃತವಾಗಿ ಘೋಷಿಸಿದೆ. ಇದರಿಂದಾಗಿ ಅಫ್ಘಾನಿಸ್ತಾನ, ಪಾಕಿಸ್ತಾನದ ಅಮಾಯಕ ಜನತೆ ನಿಟ್ಟುಸಿರು ಬಿಡುವಂತಾಗಿದೆ. ಬಹುಶಃ ಉಸಾಮಾನ ಹತ್ಯೆಯಿಂದ ಅಮೆರಿಕಾದ ಜನತೆ ಪಟ್ಟ ಸಂಭ್ರಮಕ್ಕಿಂತ ಅಫ್ಘಾನಿಸ್ತಾನದ ಜನತೆ ಹೆಚ್ಚು ಸಂಭ್ರಮಿಸುತ್ತಿರಬಹುದು.

ಅಮೆರಿಕಾದ ಗಗನಚುಂಬಿ ಕಟ್ಟಡಗಳ ಮೇಲೆ ಉಸಾಮಾ ಬಿನ್ ಲಾಡೆನ್ ದಾಳಿ ನಡೆಸಿದ್ದಾನೆ ಎಂಬ ಆರೋಪ ಹೊರಿಸಿ ಅಮೆರಿಕಾ ಹಾಗೂ ಅದರ ಮಿತ್ರ ರಾಷ್ಟ್ರಗಳು ಲಾಡೆನ್‌ನ ಶೋಧ ಕಾರ್ಯಾಚರಣೆ ಎಂಬ ಪೊಳ್ಳು ನೆಪವನ್ನು ಸೃಷ್ಟಿಸಿಕೊಂಡು ಅಫ್ಘಾನಿಸ್ತಾನದ ಮೇಲೆ ಬಾಂಬ್‌ನ ಸುರಿಮಳೆಗೆಯ್ಯುತ್ತಲೇ ಇತ್ತು. ಈ ಬಾಂಬ್ ದಾಳಿಗೆ ಪ್ರತಿಯೊಂದು ಬಾರಿಯೂ ಅಲ್ಲಿನ ಅಮಾಯಕ ನಾಗರಿಕರು ಬಲಿಯಾಗುತ್ತಿದ್ದಾಗ ಅಮೆರಿಕಾ ನೀಡುತ್ತಿದ್ದ ಸ್ಪಷ್ಟನೆಯೊಂದೇ. ಅದು ಉಸಾಮಾ ಬಿನ್ ಲಾಡೆನ್‌ನ ಶೋಧ ನಡೆಸುತ್ತಿದೆ ಎಂದು! ಇದೀಗ ಉಸಾಮಾ ಅವಸಾನವಾಗಿರುವುದು ಖಚಿತವಾಗಿದೆ. ಏಕೆಂದರೆ ಅಮೆರಿಕಾದ ಅಧ್ಯಕ್ಷ ಬರಾಕ್ ಒಬಾಮ ಇದನ್ನು ಅಧಿಕೃತವಾಗಿ ಘೋಷಿಸಿದ್ದಾರೆ.



ಭಯೋತ್ಪಾದನೆ ಎಂಬ ಪದವನ್ನು ಅಮೆರಿಕಾವು ತನ್ನ ಅಸ್ತ್ರವನ್ನಾಗಿ ಬಳಸಿಕೊಂಡಿದೆ. ಇಸ್ಲಾಂನ ವಿರುದ್ಧ ಜಾಗತಿಕವಾಗಿ ಯುದ್ಧವನ್ನು ಸಾರಲು ಅಮೆರಿಕಾವು ಭಯೋತ್ಪಾದನೆಯ ಗುಮ್ಮವನ್ನು ಮೊದಲು ತೇಲಿ ಬಿಟ್ಟಿತು. ಈ ಜಗತ್ತಿನಲ್ಲಿ 2001 ಸೆಪ್ಟಂಬರ್ 11ರಂದು ಅಮೆರಿಕಾದ ಗಗನಚುಂಬಿ ಕಟ್ಟಡಗಳ ಮೇಲೆ ನಡೆದ ದಾಳಿಯ ಬಳಿಕವೇ ಇಸ್ಲಾಮೀ ಭಯೋತ್ಪಾದನೆ ಎಂಬ ಪದ ಹೆಚ್ಚು ಬಳಕೆ ಬಂದದ್ದು. ಅಮೆರಿಕಾದ ಮೇಲೆ ನಡೆದ ದಾಳಿಯು ಉಸಾಮಾನನ್ನು ಹೋರಾಟಗಾರ ಎಂದು ಕರೆಯುತ್ತಿದ್ದ ಅಮೆರಿಕಾವು ಆ ಬಳಿಕ ಆತನನ್ನು ಎರಡೂವರೆ ಕೋಟಿ ರೂ. ಬೆಲೆಬಾಳುವ ಮೋಸ್ಟ್ ವಾಂಟೆಡ್ ಭಯೋತ್ಪಾದಕನನ್ನಾಗಿ ಚಿತ್ರೀಕರಿಸಿತು.

ಅಮೆರಿಕಾವು ಈ ಭಯೋತ್ಪಾದಕನನ್ನು ಎಲ್ಲಿಯವರೆಗೆ ಮುಂದುವರಿಸಿತೆಂದರೆ ಒಬಾನನ್ನು ಕೊಲ್ಲಲು 10 ವರ್ಷಗಳೇ ಹಿಡಿದವು. ಅಷ್ಟರಲ್ಲಿಯೇ ಉಸಾಮಾ ಬಿನ್ ಲಾಡೆನ್‌ನ ಶೋಧದ ನೆಪದಲ್ಲಿ ನಡೆಸಿದ ದಾಳಿಯಿಂದಾಗಿ ಇಡೀ ಅಫ್ಘಾನಿಸ್ತಾನವೇ ಶ್ಮಶಾನ ಭೂಮಿಯಂತಾಗಿದೆ. ಉಸಾಮಾನ ಹೆಸರಲ್ಲಿ ಅಮೆರಿಕಾವು ಅಫ್ಘಾನಿಸ್ತಾನದಲ್ಲಿ ರಕ್ತದ ಕೋಡಿಯನ್ನೇ ಹರಿಸಿದೆ. ಜಗತ್ತಿನ ದೊಡ್ಡಣ್ಣ ಎಂದು ಕರೆಸಿಕೊಳ್ಳುತ್ತಿರುವ ಅಮೆರಿಕಾ ಜಗತ್ತಿನಲ್ಲಿ ನಡೆಯುತ್ತಿರುವ ರಕ್ತಸಿಕ್ತ ಅಧ್ಯಾಯಗಳಿಗೆ ನೇರ ಹೊಣೆಯಾಗಿದೆ.

ತನ್ನ ಬೇಳೆ ಬೇಯಿಸಿಕೊಳ್ಳಲು ಅಮೆರಿಕಾವು ಗೆಳೆತನ ಬೆಳೆಸಿಕೊಳ್ಳುವ ಮಂದಿಯನ್ನು ಹಾಗೂ ದೇಶವನ್ನೇ ಬಳಿಕ ಬಲಿ ತೆಗೆದುಕೊಂಡಿರುವ ಹಲವು ನಿದರ್ಶನಗಳು ನಮ್ಮ ಮುಂದಿವೆ. ಒಂದರ್ಥದಲ್ಲಿ ನೋಡುವುದಾದರೆ ಉಸಾಮ ಬಿನ್ ಲಾಡೆನ್‌ನನ್ನು ಸೃಷ್ಟಿ ಮಾಡಿರುವುದೇ ಅಮೆರಿಕಾ. ಸೋವಿಯತ್ ರಷ್ಯಾದ ವಿರುದ್ಧ ಯುದ್ಧ ನಡೆಸಲು ಅಮೆರಿಕಾವೇ ಒಸಾಮಾನಿಗೆ ಬೆಂಬಲ ನೀಡಿತ್ತು. ಮಾತ್ರವಲ್ಲ ಆರ್ಥಿಕ ನೆರವನ್ನು ಕೂಡ ನೀಡಿತ್ತು. ಯಾವಾಗ ಉಸಾಮಾ ಅಮೆರಿಕಾದ ಕುಂತಂತ್ರಗಳ ಬಗ್ಗೆ ಮಾತೆತ್ತಲು ಪ್ರಾರಂಭಿಸಿದನೇ ಅಂದಿನಿಂದ ಅಮೆರಿಕಾವು ಉಸಾಮಾನ ವಿರುದ್ಧ ಯುದ್ಧ ಸಾರಿತು.

ಅದೇ ರೀತಿ ಅಮೆರಿಕಾವು ಈ ಹಿಂದೆ ಇರಾನ್‌ನನ್ನು ಸರ್ವನಾಶಗೊಳಿಸಲು ಇರಾಕ್‌ನ ಅಧ್ಯಕ್ಷನಾಗಿದ್ದ ಸದ್ದಾಂ ಹುಸೇನ್‌ನೊಂದಿಗೆ ಗೆಳೆತನ ಬೆಳೆಸಿತ್ತು. 13 ವರ್ಷಗಳ ಕಾಲ ನಡೆದ ಇರಾನ್-ಇರಾಕ್ ಯುದ್ಧದ ಸಂದರ್ಭದಲ್ಲಿ ಸದ್ದಾಂ ಹುಸೈನ್‌ರನ್ನು ಅಮೆರಿಕಾವು ಸ್ವಾತಂತ್ರ್ಯ ಹೋರಾಟಗಾರ ಎಂದು ಹಾಡಿ ಹೊಗಳಿತ್ತು. ಆದರೆ ಸದ್ದಾಂ ಹುಸೈನ್ ಅಮೆರಿಕಾದ ಕುಟಿಲ ನೀತಿಗಳ ಬಗ್ಗೆ ಧ್ವನಿ ಎತ್ತಲು ಪ್ರಾರಂಭಿಸಿದನೇ ಅಂದಿನಿಂದ ಸದ್ದಾಂ ಹುಸೈನ್ ಇರಾಕ್‌ನಲ್ಲಿ ಸಮೂಹ ನಾಶಕ ಅಸ್ತ್ರವನ್ನು ಶೇಖರಿಸಿಟ್ಟಿದ್ದಾನೆ ಎಂದು ಪ್ರಚಾರಪಡಿಸಿಕೊಂಡು ಸದ್ದಾಂನ ಶೋಧದ ಹೆಸರಿನಲ್ಲಿ ಇಡೀ ಇರಾಕ್‌ನ ಮೇಲೆ ಬಾಂಬ್ ಸುರಿಸಿತು. ಈ ಮೂಲಕ ಅಮೆರಿಕಾವು 10 ಲಕ್ಷಕ್ಕೂ ಹೆಚ್ಚು ಅಮಾಯಕ ಜನರನ್ನು ಬಲಿ ಪಡೆದುಕೊಂಡಿರುವುದನ್ನು ಇಡೀ ವಿಶ್ವವೇ ನೋಡಿದೆ. ಆ ಬಳಿಕ ಸದ್ದಾಂನನ್ನು ಪತ್ತೆ ಹಚ್ಚಿದ ಅಮೆರಿಕಾ ಯಾವುದೇ ವಿಚಾರಣೆ ಇಲ್ಲದೆ ಆತನನ್ನು ಗಲ್ಲಿಗೇರಿಸಿತು.

ಪಾಕಿಸ್ತಾನದಲ್ಲಿ ಮುಷರಫ್ ನೇತೃತ್ವದ ಮಿಲಿಟರಿ ಅಧಿಕಾರ ಇದ್ದಂತಹ ಸಂದರ್ಭದಲ್ಲಿ ಪಾಕಿಸ್ತನ ಮತ್ತು ಅಮೆರಿಕಾ ಅನ್ಯೋನ್ಯ ಸಂಬಂಧ ಹೊಂದಿದ್ದವು. ಪಾಕಿಸ್ತಾನದಲ್ಲಿಯೇ ಅಮೆರಿಕಾವು ಹಲವು ಸೇನಾ ನೆಲೆಗಳನ್ನು ಸ್ಥಾಪಿಸಿತ್ತು. ಈ ಮೂಲಕ ಅಮೆರಿಕಾವು ಪಾಕಿಸ್ತಾನವನ್ನು ಭಾರತದ ವಿರುದ್ಧ ಛೂಬಿಟ್ಟಿತ್ತು.

> ಅಮೆರಿಕಾವು ಜಾಗತಿಕವಾಗಿ ತನ್ನ ಸಾಮ್ರಾಜ್ಯಶಾಹಿ ನೀತಿಯನ್ನು ವಿಸ್ತರಿಸಲು ಯತ್ನಿಸುತ್ತಲೇ ಇದೆ. ಹಾಗೆಯೇ ತನ್ನ ಎದುರಾಳಿಗಳನ್ನು ಅಮೆರಿಕಾವು ಬಹಳ ವ್ಯವಸ್ಥಿತವಾಗಿ ಮುಗಿಸಲು ಕಾರ್ಯತಂತ್ರಗಳನ್ನು ರೂಪಿಸುತ್ತದೆ. ಇದರಿಂದಾಗಿ ಅಮೆರಿಕಾವು ತನ್ನ ಮಿತ್ರರಾಗಿದ್ದ ಸದ್ದಾಂ ಹುಸೈನ್ ಮತ್ತು ಉಸಾಮಾನ ತಿರುಗಿಬಿತ್ತು. ತನ್ನ ಶತ್ರುಗಳ ವಿರುದ್ಧ ಹೋರಾಟ ನಡೆಸುವಾಗ ಇವರನ್ನು ಸ್ವಾತಂತ್ರ್ಯ ಹೋರಾಟಗಾರರು ಎಂದು ಕರೆಯುತ್ತಿದ್ದ ಅಮೆರಿಕಾ, ಈ ಜನಗತ್ತಿನ ಮುಂದೆ ಇವರನ್ನು ಭಯೋತ್ಪಾದಕರು ಎಂದು ಚಿತ್ರೀಕರಿಸಿ ವಿಶ್ವವೇ ನಂಬುವಂತೆ ಮಾಡಿತು.

ಒಂದು ದೇಶವನ್ನು ಇನ್ನೊಂದು ದೇಶದ ಮೇಲೆ ಎತ್ತಿ ಕಟ್ಟಿ ಲಾಭ ಪಡೆಯುತ್ತಿರುವ ಅಮೆರಿಕಾದ ಕುಂತಂತ್ರದ ಫಲವಾಗಿಯೇ ಇಂದು ಅಮೆರಿಕಾ ದೊಡ್ಡಣ್ಣನ ಸ್ಥಾನದಲ್ಲಿ ನಿಂತು ವಿಶ್ವವನ್ನೇ ತನ್ನ ರಿಮೋಟ್ ಕಂಟ್ರೋಲ್‌ನಲ್ಲಿಟ್ಟಿರುವುದು.

ಇರಾಕ್‌ನಲ್ಲಿ ತನ್ನ ತೈಲ ದಾಹ ತೀರದ ಕಾರಣ ಇದೀಗ ಅಮೆರಿಕಾ ಲಿಬಿಯಾದ ಮೇಲೆ ತನ್ನ ಹಿಡಿತವನ್ನು ಸಾಧಿಸುವ ಯೋಜನೆಗೆ ಕೈಹಾಕಿದೆ. ಇದರಿಂದಾಗಿಯೇ ಅಮೆರಿಕಾವು ಅರಬ್ ರಾಷ್ಟ್ರದಲ್ಲಿ ನಡೆಯುತ್ತಿರುವ ಜನಾಂದೋಲದಲ್ಲಿ ತನ್ನ ಹಸ್ತಕ್ಷೇಪವನ್ನು ಮಾಡುತ್ತಿದೆ. ಈ ಹಿಂದೆ ಈಜಿಪ್ಟ್‌ನ ಅಧ್ಯಕ್ಷ ಹುಸ್ನಿ ಮುಬಾರಕ್ ಕೂಡ ಇಸ್ರೇಲ್ ಹಾಗೂ ಅಮೆರಿಕಾದ ಕೈಗೊಂಬೆಯಾಗಿ ಕೆಲಸ ಮಾಡುತ್ತಿದ್ದ. ಈಜಿಪ್ಟ್‌ನಲ್ಲಿ ನಡೆದ ಜನಾಂದೋಲನದ ಬಳಿಕ ಈತನ ಉಚ್ಚಾಟನೆಯಾಗಿದೆ. ಹುಸ್ನಿ ಮುಬಾರಕ್ ಎಂಬ ಸರ್ವಾಧಿಕಾರಿಯ ಪತನ ಹಾಗೂ ಅರಬ್ ದೇಶಗಳಲ್ಲಿ ಎದ್ದಿರುವ ಪ್ರಜಾಪ್ರಭುತ್ವ ಪರವಾದ ಅಲೆಗಳು ಅಮೆರಿಕಾಕ್ಕೆ ಭಾರೀ ನಷ್ಟ ಉಂಟು ಮಾಡಲಿದೆ. ತನ್ನ ಕೈಗೊಂಬೆಗಳಾಗಿದ್ದ ಸರ್ವಾಧಿಕಾರಿಗಳ ಪತನದಿಂದ ತೈಲದ ಅಭಾವವು ಕೂಡ ಉಂಟಾಗಲಿದೆ ಎಂಬುದನ್ನು ಅಮೆರಿಕಾವು ಬಹಳ ಸ್ಪಷ್ಟವಾಗಿ ಅರಿತುಕೊಂಡಿದೆ.

ಈ ಹಿನ್ನೆಲೆಯಿಂದಲೇ ಅಮೆರಿಕಾವು ಅರಬ್ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವ ಜಾರಿಯಾಗಬಾರದು ಎಂಬ ಹುನ್ನಾರವನ್ನು ನಡೆಸುತ್ತಿದೆ. ಗದ್ದಾಫಿ ವಿರುದ್ಧ ಸಮರ ಎಂದು ಬಿಂಬಿಸಿಕೊಂಡು ಅಮೆರಿಕಾದ ಸೈನಿಕ ಪಡೆಗಳು ಲಿಬಿಯಾದಲ್ಲಿ ಬಾಂಬ್ ಸುರಿಸಿ ಅಲ್ಲಿನ ಅಮಾಯಕ ಜನತೆಯನ್ನು ಬಲಿತೆಗೆದುಕೊಳ್ಳುತ್ತಿವೆ. ಲಿಬಿಯಾದಲ್ಲಿರುವ ತೈಲ ಸಂಪತ್ತನ್ನು ತನ್ನ ಸುರ್ಪದಿಗೆ ತೆಗೆದುಕೊಳ್ಳಬೇಕು ಎನ್ನುವ ಉದ್ದೇಶದಿಂದಲೇ ಅಮೆಕನ್ ಪಡೆಗಳು ಲಿಬಿಯಾದ ಮೇಲೆ ದಾಳಿಯನ್ನು ಮುಂದುವರಿಸಿದೆ.

ಅಮೆರಿಕಾವು ಜಾಗತಿಕವಾಗಿ ತನ್ನ ಸಾಮ್ರಾಜ್ಯಶಾಹಿ ನೀತಿಯನ್ನು ವಿಸ್ತರಿಸಲು ಯತ್ನಿಸುತ್ತಲೇ ಇದೆ. ಹಾಗೆಯೇ ತನ್ನ ಎದುರಾಳಿಗಳನ್ನು ಅಮೆರಿಕಾವು ಬಹಳ ವ್ಯವಸ್ಥಿತವಾಗಿ ಮುಗಿಸಲು ಕಾರ್ಯತಂತ್ರಗಳನ್ನು ರೂಪಿಸುತ್ತದೆ. ಇದರಿಂದಾಗಿ

ಅಮೆರಿಕಾವು ತನ್ನ ಮಿತ್ರರಾಗಿದ್ದ ಸದ್ದಾಂ ಹುಸೈನ್ ಮತ್ತು ಒಸಾಮಾನ ತಿರುಗಿಬಿತ್ತು. ತನ್ನ ಶತ್ರುಗಳ ವಿರುದ್ಧ ಹೋರಾಟ ನಡೆಸುವಾಗ ಇವರನ್ನು ಸ್ವಾತಂತ್ರ್ಯ ಹೋರಾಟಗಾರರು ಎಂದು ಕರೆಯುತ್ತಿದ್ದ ಅಮೆರಿಕಾ, ಈ ಜನಗತ್ತಿನ ಮುಂದೆ ಇವರನ್ನು ಭಯೋತ್ಪಾದಕರು ಎಂದು ಚಿತ್ರೀಕರಿಸಿ ವಿಶ್ವವೇ ನಂಬುವಂತೆ ಮಾಡಿತು.

ಇಡೀ ಜಗತ್ತನ್ನೇ ಅಮೆರಿಕವು ತನ್ನ ನಿಯಂತ್ರಣ ದಲ್ಲಿಟ್ಟುಕೊಂಡು ಸರ್ವಾಧಿಕಾರಿಯಂತೆ ವರ್ತಿಸುತ್ತಿದೆ. ಅದಕ್ಕೆ ಯಾವುದೇ ಅಂತಾರಾಷ್ಟ್ರೀಯ ಕಾನೂನುಗಳು ಅನ್ವಯಿಸುತ್ತಿಲ್ಲ. ಇನ್ನೊಂದು ದೇಶದ ಮೇಲೆ ದಾಳಿ ನಡೆಸಲು ಮತ್ತು ಇನ್ನೊಂದು ದೇಶದ ಆಂತರಿಕ ವ್ಯವಹಾರದಲ್ಲಿ ಹಸ್ತಕ್ಷೇಪ ನಡೆಸುವುದರ ವಿರುದ್ಧ ಪ್ರಶ್ನಿಸಲು ಯಾವುದೇ ದೇಶವು ಮುಂದಾಗುತ್ತಿಲ್ಲ. ಏಕೆಂದರೆ ಅಮೆರಿಕಾ ಜಗತ್ತಿನ ಕುಖ್ಯಾತ ಭಯೋತ್ಪಾದಕ ರಾಷ್ಟ್ರ. ಯಾವುದೇ ದೇಶವು ತನ್ನ ವಿರುದ್ಧ ಸೊಲ್ಲೆತ್ತಿದರೆ ಅದನ್ನು ಸಂಪೂರ್ಣವಾಗಿ ಮಟ್ಟ ಹಾಕುವ ತಾಕತ್ತು ಹೊಂದಿದೆ. ಇಡೀ ವಿಶ್ವವನ್ನೇ ಬೆಚ್ಚಿಬೀಳಿಸುವಂತಹ ಅಣ್ವಸ್ತ್ರಗಳನ್ನು ತನ್ನಲ್ಲಿ ಅದು ಶೇಖರಿಸಿಟ್ಟುಕೊಂಡಿದೆ. ಸಾಮ್ರಾಜ್ಯಶಾಹಿ ನೀತಿಯನ್ನು ಮುಂದುವರಿಸುತ್ತಿರುವ ಅಮೆರಿಕಾ ಈಗಾಗಲೇ ವಿವಿಧ ದೇಶಗಳ ಮೇಲೆ ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ದಾಳಿ ನಡೆಸಿದೆ. ಹಿರೋಷಿಮಾ, ನಾಗಸಾಕಿಗಳ ಮೇಲೆ ಬಾಂಬ್ ದಾಳಿ ನಡೆಸಿ ಇಡೀ ವಿಶ್ವವನ್ನೇ ಬೆಚ್ಚಿ ಬೀಳಿಸಿತು. ವಿಯೆಟ್ನಾಂ, ಇಂಡೋನೇಶ್ಯ, ಸುಡಾನ್ ಹೀಗೆ ಪಟ್ಟಿಯು ಬೆಳೆಯುತ್ತಾ ಹೋಗುತ್ತದೆ.



ಜಗತ್ತಿನಾದ್ಯಂತ ಹೆಚ್ಚಿನ ಮಾಧ್ಯಮಗಳು ಸಾಮ್ರಾಜ್ಯಶಾಹಿ, ಬಂಡವಾಳಶಾಹಿಗಳ ಪರವಾಗಿ ಕಾರ್ಯನಿರ್ವಹಿಸುತ್ತಿವೆ. ಇನ್ನು ಕೆಲವು ಕೋಮುವಾದವನ್ನು ಹೆಚ್ಚು ಪ್ರಚಾರ ಪಡಿಸಲು ಕಾರ್ಯನಿರ್ವಹಿಸುತಿವೆ ಎಂಬುದರಲ್ಲಿ ಎರಡು ಮಾತಿಲ್ಲ.

ಈಗಾಗಲೇ ನಾವು ಲಾಡೆನ್ ಸಾವಿನ ಸುದ್ದಿಯನ್ನು ಪತ್ರಿಕೆಗಳು ಪ್ರಕಟಿಸಿರುವ ಪರಿಯನ್ನು ಗಮನಿಸಿದರೆ ಅವು ಪೂರ್ವಾಗ್ರಹಪೀಡಿತ ಮತ್ತು ಅಮೆರಿಕನ್ ಬೆಂಬಲಿತ ಮಾಧ್ಯಮಗಳೆಂದು ಬಹಳ ಸ್ಪಷ್ಟವಾಗಿ ಗುರುತಿಸಿಕೊಳ್ಳಬಹುದು.

ಇತ್ತೀಚಿಗೆ ಉಸಾಮಾ ಬಿನ್ ಲಾಡೆನ್‌ನನ್ನು ಹತ್ಯೆಗೈಯ್ಯಲಾಗಿದೆ ಎಂಬ ಸುದ್ದಿ ಬಿತ್ತರವಾಗುವುದರೊಂದಿಗೆ ಮಾಧ್ಯಮಗಳು ಕೂಡ ತಮ್ಮ ಪೂರ್ವಾಗ್ರಹಪೀಡಿತ ಮನೋಸ್ಥಿತಿಯನ್ನು ಪ್ರದರ್ಶಿಸಿದೆ. ಒಸಾಮಾನ ಹತ್ಯೆಯಿಂದ ಭಯೋತ್ಪಾದನೆಯ ನಿರ್ಮೂಲನೆ, ಭಯೋತ್ಪಾದಕನ ಅಂತ್ಯ, ಅಮೆರಿಕಾದ ಎದೆಗಾರಿಕೆಯನ್ನು ಮೆಚ್ಚಲೇಬೇಕು, ಬರಾಕ್ ಒಬಾಮಾ ಹೀರೋ ಎಂಬ ರೀತಿಯಲ್ಲಿ ವರ್ಣರಂಜಿತ ಶಿರ್ಷಿಕೆಯಡಿ ವರದಿಯನ್ನು ಪ್ರಕಟಿಸುತ್ತವೆ. ಉಸಾಮಾನನ್ನು ಭಯೋತ್ಪಾದಕ ಎನ್ನುವ ಮಾಧ್ಯಮಗಳು ಆತನನ್ನು ಭಯೋತ್ಪಾದಕನನ್ನಾಗಿ ಮಾಡಿದವರಾರು? ಎಂಬ ಬಗ್ಗೆ ವರದಿ ಪ್ರಕಟಿಸುವುದಿರುವುದು ವಿಪರ್ಯಾಸ.

ಅದೇ ರೀತಿ ಮಾಧ್ಯಮಗಳು ಅಮೆರಿಕಾದ ಜಾಗತಿಕ ಷಡ್ಯಂತ್ರದ ವಿರುದ್ಧವೂ ಬರೆಯುವುದಿಲ್ಲ. 2001ರ ಸೆಪ್ಟೆಂಬರ್ 11ರಂದು ಅಮೆರಿಕಾದ ವರ್ಲ್ಡ್ ಟ್ರೇಡ್ ಸೆಂಟರ್‌ನ ಮೇಲೆ ದಾಳಿಯನ್ನು ಯಾರು ನಡೆಸಿದ್ದಾರೆ ಎಂಬ ನಿಗೂಢತೆಯನ್ನು ಇದುವರೆಗೂ ಭೇದಿಸಲಾಗಿಲ್ಲ. ಆದರೆ ಅಮೆರಿಕಾ ಕಕ್ಕಿದಂತೆ ಮಾಧ್ಯಮಗಳು ಕೂಡ ಉಸಾಮಾ ಬಿನ್ ಲಾಡೆನ್‌ನನ್ನು ಆ ದಾಳಿಯ ಹೊಣೆಗಾರರನ್ನಾಗಿಸಿತು. 2400 ಜನರು ಸಾವನ್ನಪ್ಪಿದ ಈ ಘಟನೆ ಮಾಧ್ಯಮಗಳ ಕರುಳು ಹಿಂಡಿತ್ತು. ಆದರೆ ದಾಳಿಯ ಬಳಿಕ ಅಮೆರಿಕಾವು ಅಫ್ಘಾನಿಸ್ತಾನ ಮತ್ತು ಇರಾಕ್‌ನಲ್ಲಿ ಬಾಂಬ್ ಸುರಿಸುವ ಮೂಲಕ ನಡೆಸಿದ ರಕ್ತಪಾತಕ್ಕೆ ಮಹಿಳೆಯರು, ಹಸೂಗೂಸುಗಳೆನ್ನದೇ ಲಕ್ಷಾಂತರ ಮಂದಿ ಬಲಿಯಾಗಿದ್ದಾರೆ.



ಅಮೆರಿಕಾದಲ್ಲಿ ನಡೆದ ದಾಳಿಯು ನಿಗೂಢವಾಗಿದ್ದರೂ ಅಫ್ಘಾಸ್ತಾನ ಮತ್ತು ಇರಾಕ್‌ನಲ್ಲಿ ನಡೆದಿರುವ ರಕ್ತಪಾತಕ್ಕೆ ಅಮೆರಿಕಾವೇ ನೇರ ಹೊಣೆಯಾಗಿದೆ ಎಂಬುದು ಜನಜನಿತವಾಗಿದೆ. ಆದರೆ ಮಾಧ್ಯಮಗಳು ಈ ಪ್ರಕರಣದಲ್ಲಿ ಅಮೆರಿಕಾ ನಡೆಸಿದ ಮಾರಣಹೋಮವನ್ನು ಮಾರೆಮಾಚಿ ಕೇವಲ ಅಮೆರಿಕಾ ಮಾಡಿದ ಆರೋಪವನ್ನು ಇನ್ನಷ್ಟು ಗಂಭೀರ ವಿಷಯವನ್ನಾಗಿ ಪರಿವರ್ತಿಸಿ ಜಗತ್ತಿನ ಜನತೆಯನ್ನು ನಂಬಿಸಲು ಯಶಸ್ವಿಯಾಗಿವೆ.

ಅಮೆರಿಕಾವು 'ಭೂಮಿಯಲ್ಲಿ ಸೃಷ್ಟಿಸಿರುವ ನರಕ' ಎಂದು ಕರೆಯಲ್ಪಡುತ್ತಿರುವ ಗ್ವಾಂಟೆನಾಮೋ ಜೈಲುಗಳಲ್ಲಿ ವಿವಿಧ ದೇಶಗಳ ಹಲವು ಅಮಾಯಕರನ್ನು ಬಂಧಿಸಿಡಲಾಗಿದೆ. ಅಮಾಯಕರನ್ನು ಭಯೋತ್ಪಾದಕರೆಂದು ಆರೋಪಿಸಿ ಆ ಬಳಿಕ ಅವರನ್ನು ವಿವಿಧ ರೀತಿಯ ಚಿತ್ರಹಿಂಸೆಗೆ ಗುರಿಪಡಿಸಲಾಗುತ್ತದೆ. ಮಾನವಹಕ್ಕುಗಳ ಹೋರಾಟಗಾರರನ್ನು ಮತ್ತು ಅಮಾಯಕ ಮುಸ್ಲಿಮರನ್ನು ಭಯೋತ್ಪಾದಕರೆಂದು ಆರೋಪಿಸಿ ಈ ಜೈಲುಗಳಲ್ಲಿ ಬಂಧಿಸಿ ಇಡಲಾಗುತ್ತದೆ. ಈ ಜೈಲುಗಳಲ್ಲಿ ಬಹಳ ಕಿರಿದಾದ ಕೋಣೆಗಳಿರುತ್ತವೆ. ಕೈದಿಗಳಿಗೆ ವಿಚಿತ್ರ ರೀತಿಯ ಯಾತನಾಮಯವಾದಂತಹ ಶಿಕ್ಷೆಗಳನ್ನು ನೀಡಲಾಗುತ್ತದೆ. ಕೈದಿಗಳನ್ನು ಅಮಾನವೀಯ ಚಿತ್ರಹಿಂಸೆಗೊಳಪಡಿಸುವ ಅಮೆರಿಕನ್ ಪಡೆಗಳು, ಹಲವು ವರ್ಷಗಳ ವರೆಗೂ ಇಲ್ಲಿ ಬಂಧಿಸಿಡಲಾಗಿರುವ ಕೈದಿಗಳ ಬಗ್ಗೆ ಹೊರ ಜಗತ್ತಿಗೆ ಸುಳಿವೇ ನೀಡುವುದಿಲ್ಲ.

ಅಮೆರಿಕಾವು ವಿಶ್ವದಲ್ಲಿಯೇ ಅತೀ ಹೆಚ್ಚು ಮಾನವ ಹಕ್ಕುಗಳ ಉಲ್ಲಂಘನೆಯನ್ನು ಮಾಡುವ ರಾಷ್ಟ್ರವಾಗಿರುವುದಲ್ಲಿ ಯಾವುದೇ ಸಂದೇಹಗಳಿಲ್ಲ. ಅಮೆರಿಕಾದ ತುತ್ತೂರಿಗೆ ತಲೆದೂಗುವ ಮಾಧ್ಯಮಗಳು, ಮಾನವ ಹಕ್ಕುಗಳ ಉಲ್ಲಂಘನೆಯನ್ನು ಮಾಡುತ್ತಿರುವ ಅಮೆರಿಕಾದ ವಿರುದ್ಧ ಯಾವುದೇ ರೀತಿಯ ವರದಿಯನ್ನು ಪ್ರಕಟಿಸುವುದಿಲ್ಲ. ಬದಲಾಗಿ ಅಮೆರಿಕಾವು ಭಯೋತ್ಪಾದಕ ಎಂದು ಫತ್ವಾ ನೀಡಿದ ದೇಶ ಅಥವಾ ಒಬ್ಬನ ವಿರುದ್ಧವೇ ಬರೆಯಲು ತಮ್ಮನ್ನು ಮೀಸಲಿಡುತ್ತವೆ. ಆದರೆ ಜಗತ್ತಿನಾದ್ಯಂತ ಭಯೋತ್ಪಾದನೆಯನ್ನು ಪಸರಿಸುವ ಜಾರ್ಜ್ ಬುಶ್ ಅಥವಾ ಒಬಾಮಾ ವಿರುದ್ಧ ಮಾಧ್ಯಮಗಳ ಧ್ವನಿಗಳು ಮಂಕಾಗಿವೆ.

ಅಮೆರಿಕಾ ಜಗತ್ತಿನ ನಿಜವಾದ ಭಯೋತ್ಪಾದಕ ರಾಷ್ಟ್ರ ಎಂಬುದರಲ್ಲಿ ಎರಡು ಮಾತಿಲ್ಲ. ಇದೀಗ 2400 ಜನರ ಸಾವಿಗೆ ಕಾರಣನಾಗಿದ್ದಾನೆ ಎಂಬ ಆರೋಪವಿರುವ ಉಸಾಮಾ ಬಿನ್ ಲಾಡೆನ್ ಹತ್ಯೆಯಾಗಿದಾನೆ. ಆದರೆ ಅಫ್ಘಾನಿಸ್ತಾನ, ಇರಾಕ್‌ನಲ್ಲಿ ಲಕ್ಷಾಂತರ ಮಂದಿಯ ಸಾವು-ನೋವಿಗೆ ಅಮೆರಿಕಾದ ಪ್ರಭುತ್ವವೇ ನೇರ ಕಾರಣ ಎಂಬುದು ಸ್ಪಷ್ಟವಾಗಿದೆ. ಅಮೆರಿಕಾದ ದಾಳಿಗೂ ಉಸಾಮಾನಿಗೂ ಯಾವುದೇ ಸಂಬಂಧವಿದೆಯೇ ಎಂಬುದು ಕೂಡ ದೃಢಪಟ್ಟಿಲ್ಲ. ಆದರೆ ಅಮೆರಿಕಾ ನಡೆಸಿದ ರಕ್ತಪಾತದ ವಿರುದ್ಧ ಹಲವು ಸಾಕ್ಷಿಗಳಿವೆ.

ಅಫ್ಘಾನಿಸ್ತಾನ ಹಾಗೂ ಇರಾಕ್‌ನಲ್ಲಿ ಜೀವಿಸುತ್ತಿರುವ ಲಕ್ಷಾಂತರ ವಿಧವೆಯರು, ಕಣ್ಣು, ಕೈಕಾಲು ಕಳೆದುಕೊಂಡು ನರಳುತ್ತಿರುವ ಜನರು, ಸಮರ್ಪಕ ಔಷಧೋಪಚಾರವಿಲ್ಲದೇ ದಿನಂಪ್ರತಿ ಸಾಯುತ್ತಿರುವ ಹಸುಗೂಸುಗಳು, ಅಮೆರಿಕದ ಮಿಲಿಟರಿ ಪಡೆಗಳು ಹರಿಸುತ್ತಿರುವ ರಕ್ತದೋಕುಳಿಯಲ್ಲಿ ಒದ್ದಾಡಿ ಸಾಯುತ್ತಿರುವ ಯುವಕರು, ಸದಾ ಭೀತಿಯಿಂದಲೇ ಜೀವನ ಸಾಗಿಸುತ್ತಿರುವ ಜನತೆ, ಬಾಂಬ್‌ನ ಸದ್ದುಗಳಿಂದ ಕಿವುಡರಾಗಿರುವ ಜನರು, ದೈಹಿಕ ನಿಯಂತ್ರಣವನ್ನು ಕಳೆದುಕೊಂಡು ಜೀವಂತ ಶವವಾಗಿ ಬುದುಕುತ್ತಿರುವ ನಾಗರಿಕರು, ಮಾತ್ರವಲ್ಲ ಎಳ್ಳಷ್ಟು ಧೂಳು ಮೇಲೆದ್ದರೂ ಅಲ್ಲಲ್ಲಿ ಪತ್ತೆಯಾಗುವ ಅಸ್ಥಿಪಂಜರಗಳು. ಹೀಗೆ ಅಮೆರಿಕಾದ ವಿರುದ್ಧ ಲಕ್ಷಾಂತರ ಪುರಾವೆಗಳು ಬಹಿರಂಗವಾಗಿ ಸಾಕ್ಷ್ಯವನ್ನು ನುಡಿಯುತ್ತಿವೆ.

ಅಮೆರಿಕಾ ತನ್ನ ಸಾಮ್ರಾಜ್ಯಶಾಹಿ ನೀತಿಯನ್ನು ಮುಂದುವರಿಸಲು ಇನ್ನಷ್ಟು ಭಯೋತ್ಪಾದಕರನ್ನು ಸೃಷ್ಟಿಸುತ್ತಲೇ ಇರುತ್ತದೆ. ಹೀಗೆ ತನ್ನ ಜಾಗತಿಕ ಯುದ್ಧ ನೀತಿಯನ್ನು ಕೂಡ ಇನ್ನಷ್ಟು ಬಲಪಡಿಸುತ್ತದೆ. ಅಮೆರಿಕಾದಲ್ಲಿ ಬುಶ್ ಆಡಳಿತವಿರಲಿ, ಒಬಾಮಾ ಆಡಳಿತವಿರಲಿ ಭಯೋತ್ಪಾದನೆ ಮಾತ್ರ ಮುಂದುವರೆಯುತ್ತಲೇ ಇರುವುದು. ಇದೀಗ ಭಯೋತ್ಪಾದಕನೆಂಬ ಆರೋಪವಿರುವ ಉಸಾಮಾನ ಹತ್ಯೆಯಾಗಿದೆ. ಇನ್ನು ಲಕ್ಷಾಂತರ ಸಾಕ್ಷ್ಯಾಧಾರವುಳ್ಳ ಆರೋಪಿ ಸ್ಥಾನದಲ್ಲಿರುವ ಕುಖ್ಯಾತ ಭಯೋತ್ಪಾದಕ ಅಮೆರಿಕವನ್ನು ಗಲ್ಲಿಗೇರಿಸುವುದು ಭಯೋತ್ಪಾದನೆಯನ್ನು ಮಟ್ಟಹಾಕಲು ಹಾಗೂ ವಿಶ್ವಶಾಂತಿಗೆ ಅತ್ಯಗತ್ಯವಾಗಿದೆ.

# ಬಿಡುಗಡೆಯ ಸಂಭ್ರಮದಲ್ಲಿ ಸುಲೈಮಾನ್

ಸೌದಿ ಅರೇಬಿಯದ ತಾಯಿಫ್ ಜೈಲಿನಲ್ಲಿ ಸುಮಾರು 3 ವರ್ಷಗಳಿಂದ ಬಂಧಿಯಾಗಿದ್ದು ಇದೀಗ ಬಿಡುಗಡೆಗೊಂಡು ಶೀಘ್ರವೇ ತವರಿಗೆ ಆಗಮಿಸಲಿರುವ ನೆಲ್ಯಾಡಿಯ ಸುಲೈಮಾನ್ ಅವರನ್ನು ಪ್ರಸ್ತುತ ಪಾಕ್ಷಿಕವು ಫೋನು ಮೂಲಕ ಸಂಪರ್ಕಿಸಿ ಸಂದರ್ಶನ ನಡೆಸಿತು. ತನ್ನ ಸಂಸಾರದ ಹೊಣೆಗಾರಿಕೆಯನ್ನು ನಿಭಾಯಿಸುವುದಕ್ಕಾಗಿ 2008 ಜನವರಿ 29ರಂದು ಸೌದಿ ಅರೇಬಿಯಕ್ಕೆ ತೆರಳಿದ್ದ ಸುಲೈಮಾನ್, ಇದಕ್ಕಾಗಿ ಆಸ್ತಿಪಾಸ್ತಿ ಹಾಗೂ ಪತ್ನಿಯ ಚಿನ್ನಾಭರಣವನ್ನು ಮಾರಿದ್ದರು. ಸೌದಿಅರೇಬಿಯದಲ್ಲಿ ಟ್ರಕ್ ಚಾಲಕರಾಗಿ ಕೆಲಸಕ್ಕೆ ಸೇರಿದ ಎರಡೇ ತಿಂಗಳಲ್ಲಿ ಅವರು ಚಲಾಯಿಸುತ್ತಿದ್ದ ಟ್ರಕ್ ಅಪಘಾತಕ್ಕೀಡಾಗಿ, 6 ಮಂದಿ ಸೌದಿಪ್ರಜೆಗಳು ಸ್ಥಳದಲ್ಲೇ ಸಾವನ್ನಪ್ಪಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿ ಜೈಲು ಶಿಕ್ಷೆಗೊಳಗಾದ ಸುಲೈಮಾನ್, ಬಿಡುಗಡೆಯಾಗಬೇಕಿದ್ದಲ್ಲಿ ಸುಮಾರು 75 ಲಕ್ಷ ರೂಪಾಯಿಯನ್ನು ಸಂತ್ರಸ್ತ ಕುಟುಂಬಗಳಿಗೆ ಪಾವತಿಸಬೇಕಾಗಿತ್ತು. ತಿಂಗಳ ಮನೆಬಾಡಿಗೆ 700 ರೂಪಾಯಿ ಪಾವತಿಸಲು ಸಾಧ್ಯವಿಲ್ಲದ ಸುಲೈಮಾನ್‌ರ ಕುಟುಂಬ, ಇಷ್ಟೊಂದು ಹಣವನ್ನು ಪಾವತಿಸುವುದಾದರೂ ಹೇಗೆ? ಹೀಗಾಗಿ ಸುಲೈಮಾನ್ ವಿಧಿಯಿಲ್ಲದೆ ಜೈಲು ಸೇರಬೇಕಾಯಿತು.

ದಕ್ಷಿಣ ಕನ್ನಡ ಜಿಲ್ಲೆಯ ನೆಲ್ಯಾಡಿಯ ಸುಲೈಮಾನ್‌ರ ಸೌದಿಅರೇಬಿಯದ ಜೈಲಿನಲ್ಲಿ ಬಂಧಿಯಾಗಿರುವ ವಿಚಾರ ಮತ್ತು ಅವರ ಬಡಸಂಸಾರ ಕಂಗಾಲಾಗಿರುವ ಬಗ್ಗೆ ಪ್ರಸ್ತುತ ಪಾಕ್ಷಿಕವು ವಿಸ್ತೃತ ವರದಿಯನ್ನು ಪ್ರಕಟಿಸಿತ್ತು. ವರದಿಗೆ ಪ್ರತಿಕ್ರಿಯಿಸಿದ ಇಂಡಿಯಾ ಫ್ರೆಟರ್ನಿಟಿ ಫೋರಮ್, ಸುಲೈಮಾನ್‌ರ ಬಿಡುಗಡೆಗೆ ಕಾರ್ಯೋನ್ಮುಖವಾಯಿತು. ಪ್ರಕರಣದ ಮರುವಿಚಾರಣೆ ನಡೆಸುವಂತೆ ಮತ್ತು ಅದರ ಜವಾಬ್ದಾರಿಯನ್ನು ಇಂಡಿಯಾ ಫ್ರೆಟರ್ನಿಟಿ ಫೋರಮ್‌ನ ಅಲ್ತಾಫ್ ಎಂಬವರಿಗೆ ವಹಿಸಿಕೊಡುವುದಾಗಿ ಸುಲೈಮಾನ್‌ರ ಪತ್ನಿ ಜಮೀಲಾ ಅಫಿದಾವಿತ್‌ನ್ನು ಸೌದಿಯಲ್ಲಿರುವ ಭಾರತೀಯ ರಾಯಭಾರ ಕಚೇರಿಗೆ ಸಲ್ಲಿಸಿದ್ದರು. ಈ ಪ್ರಕಾರವಾಗಿ ಕಾನೂನು ಹೋರಾಟ ನಡೆಸಿದ ಇಂಡಿಯಾ ಫ್ರೆಟರ್ನಿಟಿ



ಐಎಫ್‌ಎಫ್ ಕಾರ್ಯಕರ್ತರೊಂದಿಗೆ ಸುಲೈಮಾನ್

ಫೋರಮ್ ಸುಮಾರು ಎರಡೂವರೆ ವರ್ಷಗಳ ಕಾಲ ನಿರಂತರವಾಗಿ ಕಾರ್ಯನಿರ್ವಹಿಸಿತ್ತು. ಇದೀಗ ಊರಿಗೆ ಮರಳಲು ತುದಿಗಾಲಲ್ಲಿ ನಿಂತಿರುವ ಸುಲೈಮಾನ್‌ರನ್ನು ಫೋನು ಮೂಲಕ ಸಂಪರ್ಕಿಸಿದ ಪ್ರಸ್ತುತ ಪಾಕ್ಷಿಕವು ಅವರೊಂದಿಗೆ ಮಾತುಕತೆ ನಡೆಸಿತು. ಅದರ ಸಂಕ್ಷಿಪ್ತ ವಿವರ ಇಲ್ಲಿದೆ;

ಪ್ರಸ್ತುತ : ಅಸ್ಸಲಾಮು ಅಲೈಕುಮ್

ಸುಲೈಮಾನ್ : ವ ಅಲೈಕುಮುಸ್ಸಲಾಮ್

**ಪ್ರಶ್ನೆ: ಹೇಗಿದ್ದೀರಿ, ಹೇಗನಿಸುತ್ತಿದೆ ಈಗ?**

ಸುಲೈಮಾನ್ : ಅಲ್‌ಹಮ್ದುಲಿಲ್ಲಾಹ್, ಚೆನ್ನಾಗಿದ್ದೇನೆ. ವಿಮೋಚನೆಯ ಖುಷಿಯಲ್ಲಿದ್ದೇನೆ.

**ಪ್ರಶ್ನೆ: ಇಲ್ಲಿ ಉದ್ಯೋಗದಲ್ಲಿದ್ದ ನೀವು ದಿಢೀರ್ ಸೌದಿಅರೇಬಿಯಕ್ಕೆ ತೆರಳಲು ಕಾರಣ?**

ಸುಲೈಮಾನ್ : ಮೈ ತುಂಬಾ ಸಾಲ, ಸಂಸಾರದ ಜಂಜಾಟ. ಲಾರಿಡ್ರೈವರ್ ಆಗಿ ಊರಿನಲ್ಲಿ ದುಡಿಯುತ್ತಿದ್ದೆ. ಸ್ವಂತ ಮನೆ ಎಂಬುದು ಇರಲಿಲ್ಲ. ಸಂಬಂಧಿಕರೊಬ್ಬರು ವೀಸಾ ಇದೆ ಎಂದು ಹೇಳಿದ್ದರು. ನೋಡೋಣ... ಅಲ್ಲಾಹನು ಇಚ್ಛಿಸಿದಂತಾಗುತ್ತದೆ

ಎಂದು ಸೌದಿಅರೇಬಿಯಕ್ಕೆ ತೆರಳು ಸಿದ್ಧನಾದೆ. ಒಟ್ಟು ಒಂದು ಲಕ್ಷದ ಹತ್ತು ಸಾವಿರ ರೂಪಾಯಿ ಖರ್ಚು ಮಾಡಿ ಸೌದಿಅರೇಬಿಯಕ್ಕೆ ಬಂದೆ.

**ಪ್ರಶ್ನೆ : ಎಷ್ಟು ತಿಂಗಳು ಅಲ್ಲಿ ಉದ್ಯೋಗ ನಿರ್ವಹಿಸಿದ್ದೀರಿ?**

ಸುಲೈಮಾನ್ : ಒಂದೂವರೆ ತಿಂಗಳು.

**ಪ್ರಶ್ನೆ : ಸೌದಿಅರೇಬಿಯಕ್ಕೆ ತೆರಳಿದ ಮೊದಲೆರಡು ತಿಂಗಳು ಹೇಗನಿಸಿತ್ತು?**

ಸುಲೈಮಾನ್ : ಇಲ್ಲಿಗೆ ಕಾಲಿಟ್ಟ 15 ದಿನಗಳ ಕಾಲ ಹಿಖಾಮ ಪಡೆಯುವುದಕ್ಕಾಗಿ ಕಾದು ಕುಳಿತೆ. ಮತ್ತೆ 40 ದಿನಗಳು ಲೈಸೆನ್ಸ್ ಪಡೆಯಲು ಕಳೆಯಿತು. ಲೈಸೆನ್ಸ್ ಸಿಕ್ಕಿದ ನಂತರ ಒಂದು ತಿಂಗಳು ಚಾಲಕನಾಗಿ ದುಡಿದೆ. ಆದರೆ ಮಾಲಕ ಸಂಬಳ ಕೊಡಲಿಲ್ಲ. ಆತನೊಂದಿಗೆ ಚರ್ಚೆ, ವಾಗ್ವಾದ ನಡೆಸಿ ಕೊನೆಗೆ ಆತ ವಾಹನವನ್ನು ಲೀಸ್‌ಗೆ ಕೊಟ್ಟ. ಹಳೆಯ 1982ರ ಮೋಡೆಲ್‌ನ ಮರ್ಸಿಡೆಸ್ ಬೆಂಝ್ ಟ್ರೈಲರ್ ವಾಹನ ಅದಾಗಿತ್ತು. ತಿಂಗಳಿಗೆ 50,000 ಪಾವತಿಸುವುದಾಗಿ ಒಪ್ಪಂದವಾಗಿತ್ತು. ಮಾಲಕನು ತಿಂಗಳೊಂದು ಪೂರ್ತಿಯಾಗುವುದರೊಳಗೆ 50,000 ರೂಪಾಯಿ ಕೇಳಿದ. ಹಣ ನೀಡಿದೆ. ವಾಹನಕ್ಕೆ ಎರಡು ಹೊಸ ಟಯರ್ ಕೂಡ ಹಾಕಿಸಿದೆ. ಚೆನ್ನಾಗಿ ದುಡಿಯಬಹುದು ಎಂದುಕೊಂಡಿದ್ದೆ. ಆದರೆ ವಿಧಿಯಾಟ ಬೇರೆಯೇ ಆಗಿತ್ತು.

**ಪ್ರಶ್ನೆ : ಅಪಘಾತ ನಡೆದ ಬಗ್ಗೆ..**

ಸುಲೈಮಾನ್ : ಎಂದಿನಂತೆ ನಾನು ಚಲಾಯಿಸುತ್ತಿದ್ದ ವಾಹನಕ್ಕೆ ಸೌದಿ ಯುವಕರು ಚಲಾಯಿಸುತ್ತಿದ್ದ ಕಾರು ಡಿಕ್ಕಿಯಾಯಿತು. ಅಪಘಾತದಲ್ಲಿ ಕಾರಿನಲ್ಲಿದ್ದ 6 ಮಂದಿ ಸೌದಿ ಯುವಕರು ಮೃತಪಟ್ಟರು. ಅನಂತರದ ದಿನಗಳಲ್ಲಿ ಜೈಲು ವಾಸ...

56ನೇ ಪುಟಕ್ಕೆ


# SUHANA TRAVELS

SHIFTED TO NEW LOCATION
FIND YOUR ALL TRAVEL REQUIREMENTS UNDER ONE ROOF

**OUR SERVICES:**

•DOMESTIC AND INTERNATIONAL AIR-TICKETING •VISA STAMPING
•PASSPORT •EMIGRATION •RECRUITMENT •CERTIFICATE ATTESTATOIN

CONTACT ANY ISTHIQDHAM OFFICE IN ALL OVER SAUDI ARABIA

**OUR FREE SERVICES:**

SAUDI AIR-TICKET RE-CONFIRMATION
RE-ENTRY VISA DATE CHECKING

**CONTACT**

**HEAD OFFICE:**
Shop no.25 printing house
2nd floor, behind handloom house
28 D, Police Court Lane,
Fort, Mumbai - 400 001
E-mail: suhanatravel@mail.com
Tel : 0091 22 22692680
Telefax: 0091 22 22692690
Mobile : 091 9820945999

**MANGALORE OFFICE**
No: 5, Ground Floor
Shivali Arcade, Falnir Tower
opp: B.P Petrole Pump, Falnir
Mangalore - 575002
**Tel: 0091 824 2442020. (4lines)**
Telefax: 00918244277690
Mobile: 0091 9448253825
Email:suhanamglr@yahoo.co.in

**FOR OUR WAKALA**



# ದಲಿತರ ಸಬಲೀಕರಣ

1950ರಲ್ಲಿ ಭಾರತದ ಸಂವಿಧಾನ ಜಾರಿಗೆ ತರುವಾಗ ಈ ದೇಶದ ದಲಿತ, ಶೋಷಿತ, ಹಿಂದುಳಿದ ಸಮುದಾಯಗಳನ್ನು ಅಭಿವೃದ್ಧಿಗೊಳಿಸುವ ಹಲವಾರು ಯೋಜನೆಗಳನ್ನೂ ಅದರಲ್ಲಿ ಅಡಕಗೊಂಡಿದ್ದವು. ಅದರಲ್ಲೂ ದಲಿತರ ಅಭಿವೃದ್ಧಿಗಾಗಿ ಪ್ರತಿಬಾರಿಯೂ ಸರಕಾರ ನಾನಾ ರೀತಿಯ ಯೋಜನೆಗಳನ್ನು ಹಾಕಿಕೊಳ್ಳುತ್ತಲೂ ಇದೆ. ದಲಿತರ ಸಬಲೀಕರಣಕ್ಕಾಗಿ ಸರಕಾರ ಅದೆಷ್ಟೋ ಯೋಜನೆಗಳನ್ನು ಜಾರಿಗೆ ತಂದಿದೆ. ಬುಡಕಟ್ಟು ಜನರ ಕಲ್ಯಾಣ ಅಭಿವೃದ್ಧಿ ಯೋಜನೆ, ಹಿಂದುಳಿದವರ ಅಭಿವೃದ್ಧಿ ಯೋಜನೆ, ದಲಿತರ ಕಲ್ಯಾಣ ಅಭಿವೃದ್ಧಿ ಯೋಜನೆ ಹೀಗೆ ಹತ್ತು ಹಲವು ಯೋಜನೆಗಳು ದಲಿತರ ಅಭಿವೃದ್ಧಿಯ ಹೆಸರಿನಲ್ಲಿ ಜಾರಿಗೆ ಬಂದವು. ಆದರೆ ಈ ಎಲ್ಲ ಯೋಜನೆಗಳ ಫಲಾನುಭವಿಗಳು ಮಾತ್ರ ಅನ್ಯರು. ಈ ದೇಶದ ಇತರ ಯೋಜನೆಗಳಂತೆ ಇವುಗಳು ಕೂಡ ಯಾರ್ಯಾರದ್ದೋ ಪಾಲಾಗುತ್ತಿವೆ. ಯೋಜನೆಗೆಂದು ಸರಕಾರಗಳು ಬಿಡುಗಡೆಗೊಳಿಸಿದ ಹಣ ಎಲ್ಲಿಗೆ ಹೋಗಿ ಸೇರುತ್ತಿದೆ ಎಂಬ ಪರಿಜ್ಞಾನವೂ ದಲಿತರಿಗೆ ಇರುವುದಿಲ್ಲ. ತಮ್ಮ ಹಕ್ಕು, ಅವಕಾಶಗಳನ್ನು ಕೇಳಿ ಪಡೆಯುವಷ್ಟು ದಲಿತರು ಸಂಘಟಿತರಾಗಿಲ್ಲ ಎಂಬುದು ಬೇರೆ ವಿಚಾರ.



ಇತರ ಹಿಂದುಳಿದ ಸಮುದಾಯದಂತೆಯೇ ದಲಿತರು ಕೂಡ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೇವಲ ಓಟಿಗಾಗಿ ಮಾತ್ರ ಬಳಸಲ್ಪಡುವ ಸರಕಾಗುತ್ತಿದ್ದಾರೆ. ರಾಜಕೀಯ ಪುಡಾರಿಗಳು ಹೇಳುವ ಸುಳ್ಳಿನ ಕಂತೆಗಳನ್ನು ದಲಿತರು ಸುಲಭವಾಗಿ ನಂಬಿ ಬಿಡುತ್ತಾರೆ. ಇಂತಹ ಅಪಾಯಕಾರಿ ಸಂದರ್ಭವನ್ನು ಅಂದೇ ಗುರುತಿಸಿದ್ದ ದೂರಗಾಮಿ ಚಿಂತನೆ ಹೊಂದಿದ್ದ ಸಂವಿಧಾನಶಿಲ್ಪಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ''ದಲಿತರು ಶೋಷಿತರು ಕೇವಲ ದೇಶದಲ್ಲಿ ಸಾಮಾಜಿಕವಾಗಿ ರಾಜಕೀಯವಾಗಿ ಶೈಕ್ಷಣಿಕವಾಗಿ ಮುಂದುವರಿದರೆ ಸಾಲದು ಅವರು ಆರ್ಥಿಕವಾಗಿ ಅಭಿವೃದ್ಧಿ ಹೊಂದಿದರೆ ಮಾತ್ರ ದಲಿತರ ಸಬಲೀಕರಣ ಸಾಧ್ಯ'' ಎಂದಿದ್ದರು. ದಲಿತರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ಕೆಲವೊಂದು ಸಾಂವಿಧಾನಿಕ ಯೋಜನೆಗಳನ್ನು ಅವರು ಅಂದೇ ಸೂಚಿಸಿದ್ದರು.

ಈ ಕಾನೂನೇ ವಿಶೇಷ ಘಟಕ ಯೋಜನೆ (ಎಸ್‌ಸಿಪಿ). ಈ ಯೋಜನೆಯ ಹಣವನ್ನು ಸರಕಾರವು ಪ್ರತಿಯೊಂದು ಇಲಾಖೆಯಲ್ಲೂ ಶೇಕಡವಾರು ದಲಿತರ ಜನಸಂಖ್ಯೆಗೆ ಅನುಗುಣವಾಗಿ ಕೇವಲ ಅವರ ಆರ್ಥಿಕ ಅಭಿವೃದ್ಧಿಗಾಗಿ

ಈ ದೇಶದಲ್ಲಿ ದಲಿತರು ಮತ್ತೆ ಮತ್ತೆ ಮೋಸಹೋಗುತ್ತಿದ್ದಾರೆ. ಇದರಲ್ಲಿ ವಂಚಕ ರಾಜಕೀಯ ಪುಡಾರಿಗಳ ಪಾಲು ಎಷ್ಟಿದೆಯೋ ಅಷ್ಟೇ ಪಾಲು ಮತ್ತೆ ಮತ್ತೆ ವಂಚನೆಗೊಳಪಡುವ ದಲಿತರದ್ದೂ ಇದೆ. ದಲಿತರು ಜಾಗೃತ ರಾಗಬೇಕಾಗಿದೆ. ಸಂಘಟಿತರಾಗಬೇಕಾಗಿದೆ. ರಾಜಕೀಯ ಅಧಿಕಾರದತ್ತ ದಾಪುಗಾಲು ಇಡಬೇಕಾಗಿದೆ. ರಾಜಕೀಯ ಪುಡಾರಿಗಳ ಸರಕಾಗುವ ಬದಲು ಜನಪ್ರತಿನಿಧಿಗಳನ್ನು ನಿರ್ಧರಿಸುವ ಒಂದು ಶಕ್ತಿಯುತ ಸಮುದಾಯವಾಗಿ ದಲಿತ ಸಮುದಾಯವು ಬೆಳೆಯಬೇಕಾಗಿದೆ. ಅದರೊಡನೆ ದಲಿತರ ಅಭಿವೃದ್ಧಿಗಾಗಿ ಬಿಡುಗಡೆಯಾಗುವ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಪ್ರಜ್ಞಾವಂತಿಕೆಯು ದಲಿತರಲ್ಲಿ ಬೆಳೆಯಬೇಕಾಗಿದೆ. ಆಗ ಮಾತ್ರ ದಲಿತರ ಸಬಲೀಕರಣ ಸಾಧ್ಯ.

ಖರ್ಚುಮಾಡಬೇಕು. 2004 ರಿಂದ ಈವರೆಗೆ ಅದು ಶೇಕಡಾ 18 ಇತ್ತು. ಈಗ ಯೋಜನೆಯ ಮೊತ್ತವನ್ನು ಹೆಚ್ಚಿಸಲಾಗಿದ್ದು, ಶೇ.22.20 ಕ್ಕೇರಿಸಲಾಗಿದೆ. ಈ ಹಣವನ್ನು ಸಂಪೂರ್ಣವಾಗಿ ದಲಿತರ ಅಭಿವೃದ್ಧಿಗಾಗಿ ವಿನಿಯೋಗಿಸಬೇಕು. ದಲಿತರ ಅಭಿವೃದ್ಧಿಯ ದೃಷ್ಟಿಯಿಂದ ಉಚಿತ ವಾಗಿ ನೀಡಬೇಕಾದಂತಹ ಹಣ ಇದು. ಸ್ವ ಉದ್ಯೋಗ, ಶೈಕ್ಷಣಿಕ ಅಗತ್ಯತೆ, ಆರೋಗ್ಯ, ಕರಕುಶಲ ತರಬೇತಿ, ಟೈಲರಿಂಗ್, ವ್ಯಾಪಾರ, ತರಕಾರಿ ಮಾರಾಟ ಮುಂತಾದ ಕಾರ್ಯಚಟುವಟಿಕೆಗಳಿಗೆ ಈ ಯೋಜನೆಯಡಿ ನೆರವು ಒದಗಿಸಬೇಕು ಎಂಬುದು ಎಸ್‌ಸಿಪಿಯ ಉದ್ದೇಶ.

ಆದರೆ ಈ ವಿಶೇಷ ಯೋಜನೆಯನ್ನು ಯಾವ ರೀತಿ ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು ಎಂಬುದಕ್ಕೆ ಸರಕಾರದ ಬಳಿ ಯಾವುದೇ ಕಾರ್ಯಯೋಜನೆಗಳಿಲ್ಲ. ಮಾತ್ರವಲ್ಲ ಇದರ ಕುರಿತು ದಲಿತರಿಗೂ ಮಾಹಿತಿ ಇಲ್ಲ. ಇದರಿಂದಾಗಿ ದಲಿತರ ಅಭಿವೃದ್ಧಿಗೆಂದು ಬಿಡುಗಡೆಗೊಂಡ ಅನುದಾನವು ಮತ್ತೆ ಕೇಂದ್ರ ಸರಕಾರಕ್ಕೆ ವಾಪಾಸಾಗುತ್ತಿದೆ. 2004, 2005 ಮತ್ತು 2006 ಈ ಮೂರು ವರ್ಷಗಳಲ್ಲಿ ನಿರಂತರವಾಗಿ ದಲಿತರ ಹಣ ವಾಪಾಸಾಗುತ್ತಿದೆ. ಈ ಬಗ್ಗೆ ಕೇಂದ್ರ ಸರಕಾರವಾಗಲೀ, ರಾಜ್ಯ ಸರಕಾರಗಳಾಗಲೀ ತಲೆಕೆಡಿಸಿಕೊಳ್ಳುವ ಗೋಜಿಗೇ ಹೋಗಲಿಲ್ಲ. ವಿಶೇಷವಾಗಿ ದಲಿತ ಸಮುದಾಯವು ಇದನ್ನು ಪ್ರಶ್ನಿಸಲೂ ಇಲ್ಲ. ಹೀಗೆ ಸುಮಾರು ಎಂಟು ರಾಜ್ಯಗಳಿಂದ ಕೇಂದ್ರಕ್ಕೆ ವಾಪಾಸಾದ ಹಣ 34.41ಕೋಟಿ ರೂಪಾಯಿ.

ತಮಿಳುನಾಡಿನಲ್ಲಿ ದಲಿತರು ಒಂದು ಹೊತ್ತಿನ ಊಟಕ್ಕೆ ಪರದಾಡುತ್ತಿರುವ ಸಮಯದಲ್ಲಿ ಆಡಳಿತದಲ್ಲಿದ್ದ ಮುಖ್ಯಮಂತ್ರಿ ಕರುಣಾನಿಧಿ ಪ್ರತಿ ದಲಿತನ ಮನೆಗೆ ಕಲರ್ ಟಿವಿ ಉಚಿತವಾಗಿ ನೀಡಿದ್ದರು. ಮಾತ್ರವಲ್ಲ, ಕರುಣಾನಿಧಿಯವರ ನಿಯಂತ್ರಣದ ಚಾನೆಲ್ ಕೂಡ ತಮಿಳುನಾಡಿನಲ್ಲಿ ಜನಪ್ರಿಯವಾಗಿದೆ. ಪ್ರತಿ ದಲಿತನ ಮನೆಗೂ ಟಿವಿ ನೀಡಿದ್ದು ಮಾತ್ರವಲ್ಲದೆ, ಅದೇ ಟಿವಿಯ ಮೂಲಕ ಸುಳ್ಳಿನ ಕಂತೆಯನ್ನೂ ಕರುಣಾನಿಧಿ ಹಂಚಿದ್ದಾರೆ. ಇದು ಕರುಣಾನಿಧಿ ಸೇರಿದಂತೆ ಹೆಚ್ಚಿನ ಎಲ್ಲ ರಾಜಕೀಯ ನಾಯಕರು ದಲಿತರನ್ನು ಮೋಸಗೊಳಿಸುವ ತಂತ್ರವಾಗಿದೆ.

ಕರ್ನಾಟಕದ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ಮುಖ್ಯಮಂತ್ರಿ ಯಡಿಯೂರಪ್ಪ ಅಧಿಕಾರಕ್ಕೇರಿದ ದಿನದಂದೇ ಕಚೇರಿಯಲ್ಲಿದ್ದ ಅಂಬೇಡ್ಕರ್‌ರ ಭಾವಚಿತ್ರವನ್ನು ತೆರವುಗೊಳಿಸಿದ್ದರು. ಕೇವಲ ಭಾವಚಿತ್ರವನ್ನು ಇಟ್ಟುಕೊಳ್ಳಲು ಇಷ್ಟಪಡದ ಬಿಜೆಪಿ ಸರಕಾರ, ದಲಿತರ ಅಭಿವೃದ್ಧಿಯನ್ನು ಹೇಗೆ ತಾನೇ ಸಹಿಸೀತು? ಆದರೆ ಚುನಾವಣೆಯ ಸಂದರ್ಭದಲ್ಲಿ ದಲಿತರಿಗೆ ಹೆಂಡ ಸಾರಾಯಿ ನೀಡಿ ಓಟು ಗಿಟ್ಟಿಸಿ ಮಹಾ ವಂಚನೆ ಮಾಡಲಾಗುತ್ತಿದೆ.

ಈ ದೇಶದಲ್ಲಿ ದಲಿತರು ಮತ್ತೆ ಮತ್ತೆ ಮೋಸಹೋಗುತ್ತಿದ್ದಾರೆ. ಇದರಲ್ಲಿ ವಂಚಕ ರಾಜಕೀಯ ಪುಡಾರಿಗಳ ಪಾಲು ಎಷ್ಟಿದೆಯೋ ಅಷ್ಟೇ ಪಾಲು ಮತ್ತೆ ಮತ್ತೆ ವಂಚನೆಗೊಳಪಡುವ ದಲಿತರದ್ದೂ ಇದೆ. ದಲಿತರು ಜಾಗೃತರಾಗಬೇಕಾಗಿದೆ. ಸಂಘಟಿತರಾಗಬೇಕಾಗಿದೆ. ರಾಜಕೀಯ ಅಧಿಕಾರದತ್ತ ದಾಪುಗಾಲು ಇಡಬೇಕಾಗಿದೆ. ರಾಜಕೀಯ ಪುಡಾರಿಗಳ ಸರಕಾಗುವ ಬದಲು ಜನಪ್ರತಿನಿಧಿಗಳನ್ನು ನಿರ್ಧರಿಸುವ ಒಂದು ಶಕ್ತಿಯುತ ಸಮುದಾಯವಾಗಿ ದಲಿತ ಸಮುದಾಯವು ಬೆಳೆಯಬೇಕಾಗಿದೆ. ಅದರೊಡನೆ ದಲಿತರ ಅಭಿವೃದ್ಧಿಗಾಗಿ ಬಿಡುಗಡೆಯಾಗುವ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಪ್ರಜ್ಞಾವಂತಿಕೆಯು ದಲಿತರಲ್ಲಿ ಬೆಳೆಯಬೇಕಾಗಿದೆ. ಆಗ ಮಾತ್ರ ದಲಿತರ ಸಬಲೀಕರಣ ಸಾಧ್ಯ.

**ಗಂಗರಾಜು ಕೆ., ಕನ್ನಮೇಡಿ ಪಾವಗಡ ತಾ.**

## ■ ರಾಜದ್ರೋಹ ಕಾನೂನಿಗೆ ತಿದ್ದುಪಡಿಗೆ ಆಗ್ರಹಿಸಿ ಮೊಯ್ಲಿಗೆ ಪತ್ರ

ಹೊಸದಿಲ್ಲಿ: ಮಾನವ ಹಕ್ಕು ಕಾರ್ಯಕರ್ತ ಡಾ। ಬಿನಾಯಕ್ ಸೇನ್‌ಗೆ ಜಾಮೀನು ನೀಡುವ ವೇಳೆ ದೇಶಭ್ರಷ್ಟ ಕಾನೂನಿಗೆ ತಿದ್ದುಪಡಿ ತರಬೇಕೆಂಬ ಸುಪ್ರೀಂ ಕೋರ್ಟ್‌ನ ಅಭಿಪ್ರಾಯವನ್ನು ಬೆಂಬಲಿಸಿ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ರಾಷ್ಟ್ರೀಯ ಅಧ್ಯಕ್ಷ ಇ.ಎಂ.ಅಬ್ದುಲ್ ರಹ್ಮಾನ್ ಕೇಂದ್ರ ಕಾನೂನು ಸಚಿವ ವೀರಪ್ಪ ಮೊಯ್ಲಿಯವರಿಗೆ ಪತ್ರ ಬರೆದಿದ್ದಾರೆ.

ಸಾಮಾಜಿಕ ಚಳವಳಿಗಳು ಮತ್ತು ಮಾನವ ಹಕ್ಕು ಹೋರಾಟಗಾರರನ್ನು ದಮನಿಸುವುದಕ್ಕಾಗಿ ಈ ಕಾನೂನನ್ನು ಕೇಂದ್ರ ಹಾಗೂ ರಾಜ್ಯಗಳು ದುರುಪಯೋಗಪಡಿಸುತ್ತಿವೆ ಎಂದು ಅವರು ಪತ್ರದಲ್ಲಿ ದೂರಿದ್ದಾರೆ.

ರಾಜದ್ರೋಹ ಮತ್ತು ಕಾನೂನು ವಿರೋಧಿ ಚಟುವಟಿಕೆಗಳ ಆರೋಪದಲ್ಲಿ ಹಲವು ವಿಚಾರಣಾಧೀನ ಕೈದಿಗಳು ಜೈಲಿನಲ್ಲಿ ಕೊಳೆಯುತ್ತಿದ್ದಾರೆ. ಸುಪ್ರೀಂ ಕೋರ್ಟ್ ಕೆಲವರನ್ನು ಅಮಾಯಕರೆಂದು ಬಿಡುಗಡೆಗೊಳಿಸಿರುವ ಹೊರತಾಗಿಯೂ ವಿಚಾರಣಾವಧಿಯಲ್ಲಿ ಅಕ್ರಮವಾಗಿ ಬಂಧನದಲ್ಲಿಟ್ಟದ್ದಕ್ಕಾಗಿ ಸಂತ್ರಸ್ತರಿಗೆ ಯಾವುದೇ ಪರಿಹಾರ ನೀಡದಿರುವುದು ಮತ್ತು ಅವರನ್ನು ಜೈಲಿನಲ್ಲಿ ಕೂಡಿ ಹಾಕಿದ ಅಧಿಕಾರಿಗಳನ್ನು ಶಿಕ್ಷಿಸದಿರುವುದು ಹಾಸ್ಯಾಸ್ಪದ ಎಂದು ಪಾಪ್ಯುಲರ್ ಫ್ರಂಟ್ ಅಧ್ಯಕ್ಷರು ಹೇಳಿದ್ದಾರೆ.

## ■ ಚಿಕ್ಕಪೇಟೆ: ಚರಂಡಿ ಅವ್ಯವಸ್ಥೆ ಸರಿಪಡಿಸಿದ ಎಸ್‌ಡಿಪಿಐ ಕಾರ್ಯಕರ್ತರು




ಬೆಂಗಳೂರಿನ: ಚಿಕ್ಕಪೇಟೆಯ ಸಿದ್ದಾಪುರ ವಾರ್ಡ್‌ನ ದಯಾನಂದ ಸ್ಲಮ್‌ನಲ್ಲಿ ಇತ್ತೀಚೆಗೆ ಮಳೆಯಿಂದಾಗಿ ಚರಂಡಿ ನೀರು ತುಂಬಿ ಹರಿದು ಹಲವು ಮನೆಗಳಿಗೆ ನುಗ್ಗಿತ್ತು. ಈ ಸಂದರ್ಭದಲ್ಲಿ ಕಾರ್ಯಪ್ರವೃತ್ತರಾದ ಎಸ್‌ಡಿಪಿಐ ಸದಸ್ಯರು ಮನೆಗಳನ್ನು ಶುಚಿಗೊಳಿಸಿದ್ದು, ಚರಂಡಿಯಲ್ಲಿದ್ದ ಕಸ ಕಡ್ಡಿಗಳನ್ನು ತೆರವುಗೊಳಿಸುವ ಮೂಲಕ ಚರಂಡಿಯಲ್ಲಿ ನೀರು ಸರಾಗವಾಗಿ ಹರಿಯಲು ವ್ಯವಸ್ಥೆಗೊಳಿಸಿದ್ದಾರೆ.

ಬಿಬಿಎಂಪಿ ಈ ಸ್ಲಮ್‌ನಲ್ಲಿರುವ ಬಡವರ ಸಮಸ್ಯೆಯನ್ನು ಪರಿಹರಿಸಲು ಮುಂದೆ ಬರದ ಹಿನ್ನೆಲೆಯಲ್ಲಿ ಎಸ್‌ಡಿಪಿಐ ಕಾರ್ಯಕರ್ತರು ಈ ಕೆಲಸಕ್ಕಿಳಿದಿದ್ದಾರೆ.

ಚಿಕ್ಕಪೇಟೆ ಅಸೆಂಬ್ಲಿ ಅಧ್ಯಕ್ಷ ಸಯ್ಯದ್ ಮುದಸ್ಸಿರ್ ಕೂಡ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ■ ಮೋದಿ ವಿರುದ್ಧ ಕಾನೂನು ಕ್ರಮಕ್ಕೆ ಪಾಪ್ಯುಲರ್ ಫ್ರಂಟ್ ಆಗ್ರಹ

ಬೆಂಗಳೂರು: 2002ರಲ್ಲಿ ಗುಜರಾತ್‌ನಲ್ಲಿ ನಡೆದ ಮುಸ್ಲಿಮರ ನರಮೇಧದಲ್ಲಿ ಮುಖ್ಯಮಂತ್ರಿ ನರೇಂದ್ರ ಮೋದಿ ಪ್ರಮುಖ ಪಾತ್ರವಹಿಸಿರುವುದು ಈಗ ಮತ್ತೊಮ್ಮೆ ಸಾಬೀತಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಆತನ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕೆಂದು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ರಾಷ್ಟ್ರೀಯ ಕಾರ್ಯಕಾರಿ ಸಭೆ ಆಗ್ರಹಿಸಿದೆ.

ಸಂಘಪರಿವಾರ ಪ್ರಾಯೋಜಿತ ಗುಜರಾತ್ ಹತ್ಯಾಕಾಂಡದ ವೇಳೆ ಹಿಂದುತ್ವ ಕಾರ್ಯಕರ್ತರಿಗೆ ಗಲಭೆಗೆ ಸಂಪೂರ್ಣ ಅವಕಾಶವನ್ನು ನೀಡುವಂತೆ ಮತ್ತು ಅಲ್ಪಸಂಖ್ಯಾತರು ದಾಳಿಗೊಳಗಾಗುವಾಗ ಬೇರೆಡೆಗೆ ಮುಖ ತಿರುಗಿಸುವಂತೆ ಮೋದಿ ಪೊಲೀಸರಿಗೆ ಸೂಚಿಸಿರುವುದು ಗುಜರಾತ್‌ನ ಹಿರಿಯ ಅಧಿಕಾರಿ ಸಂಜೀವ್ ಭಟ್ ಸಲ್ಲಿಸಿರುವ ಅಫಿದಾವಿತ್ ಬಹಿರಂಗಪಡಿಸಿದೆ ಎಂದು ಸಭೆ ಹೇಳಿದೆ.

ಸಭೆಯು ಜೀವ ಜಗತ್ತಿಗೆ ಮಾರಕವಾದ ಎಂಡೊಸಲ್ಫಾನ್ ಕೀಟನಾಶಕವನ್ನು ನಿಷೇಧಿಸುವಂತೆ ಒತ್ತಾಯಿಸಿದೆ.

ಅಧ್ಯಕ್ಷ ಇ.ಎಂ.ಅಬ್ದುಲ್ ರಹ್ಮಾನ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದರು. ಪ್ರಧಾನ ಕಾರ್ಯದರ್ಶಿ ಕೆ.ಎಂ.ಶರೀಫ್ ವರದಿಯನ್ನಿತ್ತರು ಮತ್ತು ನಿರ್ಣಯವನ್ನು ಓದಿದರು. ಉಪಾಧ್ಯಕ್ಷ ಮುಹಮ್ಮದ್ ಅಲಿ ಜಿನ್ನಾ ಮತ್ತು ಸದಸ್ಯರಾದ ಮೌಲಾನಾ ಉಸ್ಮಾನ್ ಬೇಗ್, ಪ್ರೊಫೆಸರ್ ಕೋಯ, ಯಾಸಿರ್ ಹಸನ್, ಯಾ ಮೊಯ್ದೀನ್, ಹಮೀದ್ ಮುಹಮ್ಮದ್, ಅನೀಸ್ ಅಹ್ಮದ್, ಇಲ್ಯಾಸ್ ತುಂಬೆ, ಕರಮನ ಅಶ್ರಫ್ ಮೌಲವಿ, ಒ.ಎಂ.ಎ.ಸಲಾಮ್, ಮುಹಮ್ಮದ್ ರೋಶನ್ ಮತ್ತು ಎ.ಎಸ್.ಇಸ್ಮಾಯೀಲ್ ಸಭೆಯಲ್ಲಿ ಉಪಸ್ಥಿತರಿದ್ದರು.

## ■ ಮಂಗಳೂರು: ಬೀದಿ ವ್ಯಾಪಾರಸ್ಥರ ಪ್ರತಿಭಟನೆಗೆ ಎಸ್‌ಡಿಪಿಐ ಬೆಂಬಲ



ಮಂಗಳೂರು: ತಮ್ಮ ಅಂಗಡಿಯನ್ನು ತೆರವುಗೊಳಿಸಿರುವುದರ ವಿರುದ್ಧ ಮಂಗಳೂರಿನ ಬೀದಿ ವ್ಯಾಪಾರಸ್ಥರು ಇತ್ತೀಚೆಗೆ ಹಮ್ಮಿಕೊಂಡಿದ್ದ ಪ್ರತಿಭಟನೆಯನ್ನು ಎಸ್‌ಡಿಪಿಐ ಬೆಂಬಲಿಸಿದೆ.

ಪ್ರತಿಭಟನೆಯ ಅಂಗವಾಗಿ ರ್‍ಯಾಲಿ ನಡೆಸಲಾಯಿತು.ನಂತರ ಒಂದು ದಿನದ ಉಪವಾಸ ಧರಣಿ ನಡೆಸಲಾಯಿತು. ಎಸ್‌ಡಿಪಿಐ ಕೂಡ ಧರಣಿಯಲ್ಲಿ ಪಾಲ್ಗೊಂಡಿತು. ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಎಸ್‌ಡಿಪಿಐ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಕ್ಬರ್ ಅಲಿ ಮತ್ತು ಕಾರ್ಯದರ್ಶಿ ಸಲೀಂ ಗುರುವಾಯನಕೆರೆ ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ಮಂಗಳೂರು, ಉಳ್ಳಾಲ ವಿಧಾನ ಸಭಾ ಕ್ಷೇತ್ರಾಧ್ಯಕ್ಷರಾದ ನವಾಝ್ ಉಳ್ಳಾಲ್, ಬಂಟ್ವಾಳ ವಿಧಾನಸಭಾ ಕ್ಷೇತ್ರ ಕಾರ್ಯದರ್ಶಿ ಅಶ್ರಫ್ ಮಂಚಿ, ಮಂಗಳೂರು ವಿಧಾನಸಭಾ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಝುಮೀರ್ ಬೆಂಗ್ರೆ, ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ನಿಯಾಝ್ ಅಹ್ಮದ್ ಹಾಗೂ ಇತರರು ಭಾಗವಹಿಸಿದ್ದರು.

## ■ ಬೆಳ್ತಂಗಡಿ: ಸದಸ್ಯತ್ವ ಅಭಿಯಾನಕ್ಕೆ ಚಾಲನೆ



ಬೆಳ್ತಂಗಡಿ: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಕರ್ನಾಟಕ ರಾಜ್ಯಾದ್ಯಂತ 'ಪ್ರಜಾಪ್ರಭುತ್ವಕ್ಕೆ ಕಾಯಕಲ್ಪ-ಎಸ್‌ಡಿಪಿಐ ಸಂಕಲ್ಪ' ಎಂಬ ಘೋಷಣೆಯೊಂದಿಗೆ ಹಮ್ಮಿಕೊಂಡಿರುವ ಸದಸ್ಯತ್ವ ಅಭಿಯಾನಕ್ಕೆ ನಗರದ ಅಂಬೇಡ್ಕರ್ ಭವನದಲ್ಲಿ ಶುಕ್ರವಾರ ಚಾಲನೆ ನೀಡಲಾಯಿತು.

ಎಸ್‌ಡಿಪಿಐ ಬೆಳ್ತಂಗಡಿ ವಿಧಾನ ಸಭಾ ಕ್ಷೇತ್ರದ ಅಧ್ಯಕ್ಷ ಅಕ್ಬರ್ ಬೆಳ್ತಂಗಡಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ದಿಕ್ಸೂಚಿ ಭಾಷಣ ಮಾಡಿದ ಎಸ್‌ಡಿಪಿಐ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಕ್ಬರ್ ಅಲಿ, ಎಸ್‌ಡಿಪಿಐ ಬೆಳವಣಿಗೆ ಮತ್ತು ಅದರ ಉದ್ದೇಶದ ಬಗ್ಗೆ ವಿವರಿಸಿದರು.

ವೇದಿಕೆಯಲ್ಲಿ ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಜಲೀಲ್ ಕೃಷ್ಣಾಪುರ, ಕಾರ್ಯದರ್ಶಿ ಸಲೀಂ ಗುರುವಾಯನಕೆರೆ, ತಾಲೂಕು ಪ್ರ. ಕಾರ್ಯದರ್ಶಿ ಹಮೀದ್ ವೇಣೂರು, ಸದಸ್ಯರಾದ ಇಸ್ಮಾಯೀಲ್ ಹಾಜಿ, ಹೈದರ್ ನೀರ್‌ಸಾಲ್ ಉಪಸ್ಥಿತರಿದ್ದರು. ತಾಲೂಕು ಕಾರ್ಯದರ್ಶಿ ಅನೀಸ್ ಗೇರುಕಟ್ಟೆ ಸ್ವಾಗತಿಸಿ, ಅಶ್ರಫ್ ಪಿ. ವಂದಿಸಿದರು. ನಿಝಾಮುದ್ದೀನ್ ಗೇರುಕಟ್ಟೆ ಕಾರ್ಯಕ್ರಮ ನಿರೂಪಿಸಿದರು.

## ■ ಅಮೆರಿಕ ಉಗ್ರ ರಾಷ್ಟ್ರ: ಪಾಪ್ಯುಲರ್ ಫ್ರಂಟ್ ಆರೋಪ

ಹೊಸದಿಲ್ಲಿ: ವಿಶ್ವದ ದುರ್ಬಲ ರಾಷ್ಟ್ರಗಳ ಮೇಲೆ ಯಜಮಾನಿಕೆಯನ್ನು ತೋರಿಸುವ ಅಮೆರಿಕ ಒಂದು ಉಗ್ರ ರಾಷ್ಟ್ರವಾಗಿದೆ ಎಂಬುದು ಈಗ ಮತ್ತೊಮ್ಮೆ ಸಾಬೀತಾಗಿದೆ ಎಂದು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ರಾಷ್ಟ್ರೀಯ ಅಧ್ಯಕ್ಷ ಇ.ಎಂ.ಅಬ್ದುಲ್ ರಹಿಮಾನ್ ಪ್ರಕಟನೆಯೊಂದರಲ್ಲಿ ಆರೋಪಿಸಿದ್ದಾರೆ.

2001ರಲ್ಲಿ ವಿಶ್ವ ವಾಣಿಜ್ಯ ಕೇಂದ್ರ ಹಾಗೂ ಪೆಂಟಗಾನ್ ಮೇಲೆ ದಾಳಿ ನಡೆದಾಗ ಅಮೆರಿಕ ಲಾದೆನ್‌ನತ್ತ ಬೆಟ್ಟು ಮಾಡಲು ಪ್ರಾರಂಭಿಸಿತು. ಲಾದೆನ್‌ನನ್ನು ಅಂತಾರಾಷ್ಟ್ರೀಯ ನ್ಯಾಯಾಲಯ ಅಥವಾ ಸೌದಿ ಅಥವಾ ಕತಾರ್ ನ್ಯಾಯಾಲಯಗಳಿಗೆ ಒಪ್ಪಿಸುವುದಾಗಿ ತಾಲಿಬಾನ್ ಪ್ರಸ್ತಾಪವಿಟ್ಟರೂ ಅದನ್ನು ಒಪ್ಪದ ಅಮೆರಿಕ ಭಯೋತ್ಪಾದನೆಯ ವಿರುದ್ಧ ಯುದ್ಧವೆಂಬ ನೆಪದಲ್ಲಿ ಅಫ್ಘಾನ್ ಮೇಲೆ ದಾಳಿ ನಡೆಸಿ ಸಾವಿರಾರು ಅಮಾಯಕರನ್ನು ಕೊಂದಿದೆ ಎಂದು ಅವರು ದೂರಿದ್ದಾರೆ.

ಒಂದು ಮೃತದೇಹವನ್ನು ಸಮುದ್ರಕ್ಕೆ ಎಸೆಯುವುದು ಎಲ್ಲಾ ಧಾರ್ಮಿಕ ನಿಯಮಗಳು ಹಾಗೂ ಸಭ್ಯತೆಯ ಆದರ್ಶಗಳ ಉಲ್ಲಂಘನೆಯಾಗಿದೆ ಎಂದು ಅವರು ಲಾದೆನ್ ಮೃತದೇಹವನ್ನು ಸಮುದ್ರದಲ್ಲಿ ದಫನ ಮಾಡಿರುವ ಬಗ್ಗೆ ಪ್ರಸ್ತಾಪಿಸುತ್ತಾ ಹೇಳಿದ್ದಾರೆ.

ಎಲ್ಲಾ ರೀತಿಯ ಭಯೋತ್ಪಾದನೆಯನ್ನೂ ವಿರೋಧಿಸಿರುವ ಅವರು, ವಿಶ್ವದಲ್ಲಿ ಒಂದೊಮ್ಮೆ ಸೂಪರ್ ಪವರ್ ರಾಷ್ಟ್ರಗಳ ದಮನಕಾರಿ ನೀತಿಗೆ ಅಂತ್ಯವುಂಟಾಗಲಿದೆ ಎಂಬ ಭರವಸೆ ವ್ಯಕ್ತಪಡಿಸಿದ್ದಾರೆ.

# ■ ''ಬೀಚ್ ಉಳಿಸಿ'' ಕಾರ್ಯಕ್ರಮದಲ್ಲಿ ಎಸ್‌ಡಿಪಿಐ ಭಾಗಿ






ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾಡಳಿತ ಮೇ 1ರಂದು ಆಯೋಜಿಸಿದ್ದ 'ಬೀಚ್ ಉಳಿಸಿ' ಸ್ವಚ್ಛತಾ ಕಾರ್ಯಕ್ರಮದಲ್ಲಿ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ ಕಾರ್ಯಕರ್ತರು ಪಾಲ್ಗೊಂಡರು.

ಎಸ್‌ಡಿಪಿಐಯ ವಿವಿಧ ಗುಂಪುಗಳು ಬೆಂಗ್ರೆ ಮತ್ತು ಚಿತ್ರಾಪುರದಲ್ಲಿ ನಡೆದ ಬೀಚ್ ಸ್ವಚ್ಛತಾ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಬೆಂಗ್ರೆಯಲ್ಲಿ ನಡೆದ ಬೀಚ್ ಸ್ವಚ್ಛತಾ ಕಾರ್ಯಕ್ರಮದಲ್ಲಿ ಎಸ್‌ಡಿಪಿಐ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಕ್ಬರ್ ಅಲಿ ಹಾಗೂ ಕಾರ್ಯದರ್ಶಿ ಸಲೀಂ ಗುರುವಾಯನಕೆರೆ ಮತ್ತು ಚಿತ್ರಾಪುರ ಬೀಚ್‌ನಲ್ಲಿ ನಡೆದ ಸ್ವಚ್ಛತಾ ಕಾರ್ಯಕ್ರಮ ಎಸ್‌ಡಿಪಿಐ ಮೂಡಬಿದ್ರೆ ವಿಧಾನ ಸಭಾ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಶರೀಫ್ ಮುಲ್ಕಿ ಪಾಲ್ಗೊಂಡಿದ್ದರು.

## ■ ಮೈಸೂರಿನಲ್ಲಿ ಸ್ವಚ್ಛತಾ ಕಾರ್ಯಕ್ರಮ



ಮೈಸೂರು: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ, ಚಾಮರಾಜ ಅಸೆಂಬ್ಲಿ ವತಿಯಿಂದ ಇತ್ತೀಚೆಗೆ ಇಲ್ಲಿನ ಪಾಳ್ಯದಲ್ಲಿ ಸ್ವಚ್ಛತಾ ಕಾರ್ಯಕ್ರಮವೊಂದನ್ನು ನಡೆಸಲಾಯಿತು.

ಜಿಲ್ಲಾ ಕಾರ್ಯದರ್ಶಿ ಮತೀನ್ ಬೇಗ್, ಚಾಮರಾಜ ಅಸೆಂಬ್ಲಿ ಅಧ್ಯಕ್ಷ ತಬ್ರೇಝ್ ಸೇಟ್, ಗೋಲ್ಡನ್ ಸ್ಟಾರ್ ಬ್ರಾಂಚ್‌ನ ಅಧ್ಯಕ್ಷ ಅಕ್ಬರ್ ಪಾಶ, ಉಪಾಧ್ಯಕ್ಷ ಝುಲ್ಫಿಕಾರ್ ಮತ್ತು ಜಾಫರ್ ಸ್ವಚ್ಛತಾ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

## ■ ಟಿಪ್ಪು ಜನ್ಮ ದಿನೋತ್ಸವ

ಮೈಸೂರು: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ವಂತಿಯಿಂದ ಮೇ 4ರಂದು ಮೈಸೂರಿನಲ್ಲಿ ಟಿಪ್ಪು ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು.

ಈ ಸಂದರ್ಭ ಎಸ್‌ಡಿಪಿಐ ಮುಖಂಡರು ಟಿಪ್ಪು ಸಮಾಧಿಯನ್ನು ಸಂದರ್ಶಿಸಿದರು.

ಎಸ್‌ಡಿಪಿಐ ಜಿಲ್ಲಾ ಉಪಾಧ್ಯಕ್ಷ ಕಿರಣ್ ಕುಮಾರ್, ಚಾಮರಾಜ್ ಅಸೆಂಬ್ಲಿ ಅಧ್ಯಕ್ಷ ತಬ್ರೇಝ್ ಸೇಟ್, ಅಬ್ದುಲ್ಲಾ ಅನ್ಸಾರಿ, ಸಮಾಜ ಸೇವಕ ಅಝ್ಗರ್ ಖಾನ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ■ ಮೈಸೂರು: ಕಿರಣ್ ಕುಮಾರ್ ಕುಟುಂಬ ಎಸ್‌ಡಿಪಿಐಗೆ ಸೇರ್ಪಡೆ

ಮೈಸೂರು: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟ್ ಆಫ್ ಇಂಡಿಯಾ ಮೈಸೂರು ಜಿಲ್ಲಾ ಘಟಕದ ಉಪಾಧ್ಯಕ್ಷ ಕಿರಣ್ ಕುಮಾರ್‌ರವರ ಕುಟುಂಬದ ಸದಸ್ಯರು ಮೈಸೂರಿನಲ್ಲಿ ನಡೆದ ಎಸ್‌ಡಿಪಿಐನ ಸದಸ್ಯತ್ವ ಅಭಿಯಾನದ ಉದ್ಘಾಟನಾ ಸಮಾರಂಭದಲ್ಲಿ ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ.

## ■ ಬಂಟ್ವಾಳ: ಎನ್‌ಡಬ್ಲ್ಯುಎಫ್‌ನಿಂದ ಮಹಿಳಾ ಜಾಗೃತಿ ಸಮಾವೇಶ



ಬಂಟ್ವಾಳ: ನ್ಯಾಶನಲ್ ವುಮೆನ್ಸ್ ಫ್ರಂಟ್ ಬಂಟ್ವಾಳ ವಲಯದ ವತಿಯಿಂದ ಇತ್ತೀಚಿಗೆ ತಲಪಾಡಿಯ ಅರಫಾ ಹಾಲ್‌ನಲ್ಲಿ ಮಹಿಳೆಯರಿಗಾಗಿ ಜಾಗೃತಿ ಸಮಾವೇಶ ನಡೆಯಿತು.

ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಎನ್‌ಡಬ್ಲ್ಯುಎಫ್ ರಾಜ್ಯಾಧ್ಯಕ್ಷೆ ಶಾಹಿದಾ ಎ. ಪ್ರಸಕ್ತ ಸನ್ನಿವೇಶದಲ್ಲಿ ಮಹಿಳೆಯರು ಮನೆ ಜವಾಬ್ದಾರಿ ನಿಭಾಯಿಸುವುದರ ಜೊತೆಗೆ ಬಡತನ, ಅನಾರೋಗ್ಯ, ರಾಜಕೀಯ ದೌರ್ಬಲ್ಯ, ವರದಕ್ಷಿಣೆ, ನ್ಯಾಯನಿರಾಕರಣೆ ಮೊದಲಾದ ಸಾಮಾಜಿಕ ಸಮಸ್ಯೆಯಗಳನ್ನು ಹೋಗಲಾಡಿಸುವ ಹೊಣೆಗಾರಿಕೆಯನ್ನು ವಹಿಸಬೇಕು ಎಂದರು.

ಎನ್‌ಡಬ್ಲ್ಯುಎಫ್ ರಾಜ್ಯ ಉಪಾಧ್ಯಕ್ಷೆ ಫಾತಿಮಾ ನಸೀಮಾ ಸಂಘಟನೆಯ ಪರಿಚಯವನ್ನು ನೀಡಿದರು.

ಎಸ್‌ಡಿಪಿಐ ಜಿಲ್ಲಾ ಕಾರ್ಯದರ್ಶಿ ಅಕ್ಬರ್ ಅಲಿ, ಎನ್‌ಡಬ್ಲ್ಯುಎಫ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶಾಹಿದಾ ತಸ್ನೀಮ್ ಮತ್ತು ಕಾರ್ಯದರ್ಶಿ ಆಯಿಶಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ■ ಎಸ್‌ಡಿಪಿಐ ಟಿ.ಆರ್.ವಿಧಾನಸಭಾ ಕ್ಷೇತ್ರದ ನೂತನ ಪದಾಧಿಕಾರಿಗಳ ಆಯ್ಕೆ

ಮೈಸೂರು: ಮೈಸೂರು ಜಿಲ್ಲೆಯ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಟಿ.ಆರ್.ವಿಧಾನಸಭಾ ಕ್ಷೇತ್ರದ ನೂತನ ಪದಾಧಿಕಾರಿಗಳ ಆಯ್ಕೆ ಇತ್ತೀಚಿಗೆ ನಡೆಯಿತು. ಈ ಸಂದರ್ಭ ತಬ್ರೇಝ್ ಸೇಠ್‌ರವರು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರುಗಳಾಗಿ ಡಾ.ಝಮೀರ್ ಮತ್ತು ಖಾಲಿದ್, ಕಾರ್ಯದರ್ಶಿಯಾಗಿ ನಈಮ್, ಜೊತೆ ಕಾರ್ಯದರ್ಶಿಯಾಗಿ ನೂರ್ ಖಾನ್, ಕೋಶಾಧಿಕಾರಿಯಾಗಿ ಅಲ್ತಾಫ್, ಸಮಿತಿಯ ಸದಸ್ಯರಾಗಿ ಅವ್ವುದ್ ಹುಸೈನ್, ಕವ್ರಾನ್, ಇಕ್ಬಾಲ್ ಆಯ್ಕೆಯಾದರು.

## ■ ಎಂಡೊಸಲ್ಫಾನ್ ನಿಷೇಧಕ್ಕೆ ಆಗ್ರಹಿಸಿ ಜಂತರ್ ಮಂತರ್‌ನಲ್ಲಿ ಎಸ್‌ಡಿಪಿಐ ಪ್ರತಿಭಟನೆ

ಹೊಸದಿಲ್ಲಿ: ಎಂಡೊಸಲ್ಫಾನ್ ಮೇಲೆ ರಾಷ್ಟ್ರವ್ಯಾಪಿ ನಿಷೇಧ ಹೇರಬೇಕೆಂದು ಆಗ್ರಹಿಸಿ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಗುರುವಾರ ಹೊಸದಿಲ್ಲಿಯಲ್ಲಿ ಪ್ರತಿಭಟನೆ ನಡೆಸಿತು.

ರಾಜಧಾನಿಯ ವಿವಿಧ ಭಾಗಗಳಿಂದ ಹಾಗೂ ಸಮೀಪದ ರಾಜ್ಯಗಳಿಂದ ಆಗಮಿಸಿದ ಕಾರ್ಯಕರ್ತರು ಜಂತರ್ ಮಂತರ್‌ನಲ್ಲಿ ಸೇರಿದರು. ಎಂಡೋಸಲ್ಫಾನ್ ಉತ್ಪಾದನೆ ಮತ್ತು ಬಳಕೆಯ ಮೇಲೆ ಸಂಪೂರ್ಣ ನಿಷೇಧ ಹೇರಬೇಕು ಮತ್ತು ಸ್ಟಾಕ್ ಹೋಮ್ ಸಮಾವೇಶದಲ್ಲಿ ಈ ಅಪಾಯಕಾರಿ ಕ್ರಿಮಿನಾಶಕದ ಮೇಲೆ ಜಾಗತಿಕ ನಿಷೇಧವನ್ನು ಬೆಂಬಲಿಸಿ ಸಹಿ ಹಾಕಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಎಸ್‌ಡಿಪಿಐಯ ದಿಲ್ಲಿ ಘಟಕದ ಸಂಚಾಲಕ ಮತ್ತು ಖ್ಯಾತ ಪರಿಸರ ತಜ್ಞ ಎ.ಆರ್‌ಅಗ್ವಾನ್ ಈ ಕೀಟನಾಶಕದಿಂದ ಪರಿಸರ ಹಾಗೂ ಮನುಷ್ಯರ ಮೇಲಾಗುವ ಅಡ್ಡಪರಿಣಾಮದ ಬಗ್ಗೆ ತಿಳಿಸಿದರು.

ಈ ವಿಷಕಾರಕ ಕ್ರಿಮಿನಾಶಕದಿಂದ 9000 ಜನರು ಸಾವನ್ನಪ್ಪಿದ್ದಾರೆ. ಇತರ 5000 ಮಂದಿ ಸಂಪೂರ್ಣವಾಗಿ ಅಂಗವೂನರಾಗಿದ್ದಾರೆ. ಆದಾಗ್ಯೂ ಕೇಂದ್ರ ಹಾಗೂ ಹಲವು ರಾಜ್ಯ ಸರಕಾರಗಳು ಇದರ ವಿರುದ್ಧ ಕ್ರಮಕೈಗೊಳ್ಳಲು ಮೀನಾಮೇಷ ಎಣಿಸುತ್ತಿದೆ ಎಂದು ಅಡ್ವೊಕೇಟ್ ಕೆ.ಎಂ.ಅಶ್ರಫ್ ಹೇಳಿದರು.

## ■ ಕ್ಯಾಂಪಸ್ ಫ್ರಂಟ್‌ನಿಂದ 'ಬಾ ಶಾಲೆಗೆ' ಅಭಿಯಾನ

ಬೆಂಗಳೂರು: ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ಕರ್ನಾಟಕ ಘಟಕದ ವತಿಯಿಂದ ಎಪ್ರಿಲ್ 15ರಿಂದ ಮೇ 31ರ ವರೆಗೆ ರಾಜ್ಯಮಟ್ಟದ ''ಬಾ ಶಾಲೆಗೆ'' ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ.

ಅಭಿಯಾನದ ಅಂಗವಾಗಿ ವಿದ್ಯಾಭ್ಯಾಸದ ಬಗ್ಗೆ ಸಾಮಾನ್ಯ ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕೆರಿಯರ್ ಗೈಡೆನ್ಸ್, ಪೋಷಕರಿಗೆ ಕೌನ್ಸೆಲಿಂಗ್ ಮತ್ತು ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದು ಸಂಘಟನೆಯ ರಾಜ್ಯಾಧ್ಯಕ್ಷ ಮುಹಮ್ಮದ್ ಶಾಕಿರ್ ತಿಳಿಸಿದ್ದಾರೆ.

## ■ ಮಧ್ಯಪ್ರದೇಶ: ಎಸ್‌ಡಿಪಿಐ ರಾಜ್ಯಾಧ್ಯಕ್ಷರಾಗಿ ಅಡ್ವೊಕೇಟ್ ಸಾಜಿದ್ ಸಿದ್ದೀಕಿ ಮರು ಆಯ್ಕೆ



ಭೋಪಾಲ: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ ಮಧ್ಯಪ್ರದೇಶ ರಾಜ್ಯಾಧ್ಯಕ್ಷರಾಗಿ ಅಡ್ವೊಕೇಟ್ ಸಾಜಿದ್ ಸಿದ್ದಿಕಿ ಸೋಮವಾರ ಮರು ಆಯ್ಕೆಯಾಗಿದ್ದಾರೆ. ರಾಜ್ಯದ ಇತರ ಪದಾಧಿಕಾರಿಗಳನ್ನೂ ಆಯ್ಕೆ ಮಾಡಲಾಗಿದೆ.

ಎಸ್‌ಡಿಪಿಐ ರಾಷ್ಟ್ರೀಯ ಕಾರ್ಯದರ್ಶಿ ಹಫೀಝ್ ಮನ್ಸೂರ್ ಅಲಿಯ ಮೇಲ್ವಿಚಾರಣೆಯಲ್ಲಿ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ನಡೆಯಿತು. ರಾಜ್ಯದ ವಿವಿಧ ಜಿಲ್ಲೆಗಳಿಂದ ಸುಮಾರು 30 ಪ್ರತಿನಿಧಿಗಳು ಚುನಾವಣೆಯಲ್ಲಿ ಭಾಗವಹಿಸಿದ್ದರು.

ಪದಾಧಿಕಾರಿಗಳು: ಅಧ್ಯಕ್ಷರಾಗಿ ಅಡ್ವೊಕೇಟ್ ಸಾಜಿದ್ ಸಿದ್ದೀಕಿ ಉಪಾಧ್ಯಕ್ಷರಾಗಿ ಅಡ್ವೊಕೇಟ್ ಶರೀಫ್ ಅನ್ಸಾರಿ, ಪ್ರಧಾನ ಕಾರ್ಯದರ್ಶಿಯಾಗಿ ಇರ್ಫಾನುಲ್ಲಾ ಜಬಲ್ಪುರ, ಕಾರ್ಯದರ್ಶಿಗಳಾಗಿ ಅಬ್ದುಲ್ ಘಾನಿ ಖಾನ್ ಮತ್ತು ಸಲೀಮ್ ಅನ್ಸಾರಿ, ಕೋಶಾಧಿಕಾರಿಯಾಗಿ ಅಬ್ದುಲ್ ರವೂಫ್ ಆಯ್ಕೆಯಾದರು.

ಅಡ್ವೊಕೇಟ್ ನಸೀಮ್ ಖಾನ್ ಮತ್ತು ಅಬ್ದುಲ್ ವಾಹಿದ್ ರಾಜ್ಯ ಸಮಿತಿ ಸದಸ್ಯರಾಗಿ ಆಯ್ಕೆಯಾದರು. ಕಶಿಫ್, ಅಬ್ದುಲ್ ಸಮದ್ ಮತ್ತು ಸಯೀದ್ ಬಿಲ್ಗಾಮಿ ರಾಷ್ಟ್ರೀಯ ಪ್ರತಿನಿಧಿಗಳಾಗಿ ಆಯ್ಕೆಯಾಗಿದ್ದಾರೆ.

ಸಾಜಿದ್ ಸಿದ್ದೀಕಿ ಈಗಾಗಲೇ ರಾಷ್ಟ್ರೀಯ ಉಪಾಧ್ಯಕ್ಷರಾಗಿದ್ದರೆಂಬುದು ಇಲ್ಲಿ ಉಲ್ಲೇಖನೀಯ.

---

## ■ ಬೆಳ್ತಂಗಡಿ: ಎಸ್‌ಡಿಪಿಐನಿಂದ ಪರಿಹಾರ ಕಾಮಗಾರಿ



ಬೆಳ್ತಂಗಡಿ: ಬಿರುಸಿನ ಮಳೆಗೆ ಮನೆ ಹಾನಿಗೊಳಗಾಗಿ ಕಷ್ಟಕ್ಕೀಡಾದ ಇಲ್ಲಿನ ಕಾಜೂರಿನ ಮಹಿಳೆಯೊಬ್ಬರಿಗೆ ಎಸ್‌ಡಿಪಿಐ ಕಾರ್ಯಕರ್ತರು ನೆರವಾಗಿದ್ದಾರೆ.

ಹಲೀಮಮ್ಮ ಎಂಬವರ ಮನೆಯು ಇತ್ತೀಚೆಗೆ ಸುರಿದ ಬಿರುಸಿನ ಮಳೆಯೊಂದಕ್ಕೆ ಭಾಗಶ: ಕುಸಿದಿತ್ತು. ಈ ಸಂದರ್ಭದಲ್ಲಿ ದಿಕ್ಕೆಟ್ಟ ಹಲೀಮಮ್ಮಾ ಎಸ್‌ಡಿಪಿಐ ಕಾರ್ಯಕರ್ತರಿಗೆ ಕರೆ ಮಾಡಿ ತಿಳಿಸಿದ್ದರು. ತಕ್ಷಣ ಕಾರ್ಯೋನ್ಮುಖರಾದ ಸ್ಥಳೀಯ ಎಸ್‌ಡಿಪಿಐ ಕಾರ್ಯಕರ್ತರು ರಾತೋರಾತ್ರಿ ಮಹಿಳೆಯ ಕುಟುಂಬದ ಸುರಕ್ಷತೆಗೆ ಬೇಕಾದ ಪ್ರಾಥಮಿಕ ಪರಿಹಾರವನ್ನು ಕೈಗೊಂಡರು.

ಮರುದಿನ ತಾಲೂಕು ಎಸ್‌ಡಿಪಿಐ ನಾಯಕರನ್ನೊಳಗೊಂಡ ಒಂದು ನಿಯೋಗ ಕಾಜೂರಿಗೆ ತೆರಳಿ ಪರಿಶೀಲನೆ ನಡೆಸಿದ್ದಲ್ಲದೆ, ಬಡ ಮಹಿಳೆಯ ಮನೆಯ ಸಂಪೂರ್ಣ ಕಾಮಗಾರಿಯ ವೆಚ್ಚವನ್ನು ಭರಿಸಿತು. ಪರಿಹಾರ ಕಾಮಗಾರಿಯ ನೇತೃತ್ವ ವನ್ನು ಬೆಳ್ತಂಗಡಿ ಎಸ್‌ಡಿಪಿಐ ವಿಧಾನ ಸಭಾ ಕ್ಷೇತ್ರಾಧ್ಯಕ್ಷರಾದ ಅಕ್ಬರ್ ಬೆಳ್ತಂಗಡಿ, ಕಾರ್ಯದರ್ಶಿ ಅನೀಸ್ ಗೇರುಕಟ್ಟೆ, ಕೋಶಾಧಿಕಾರಿ ಇಸ್ಮಾಯಿಲ್ ಜಿ.ಕೆರೆ, ಸದಸ್ಯರಾದ ಕಬೀರ್,ಅಶ್ರಫ್ ಮತ್ತಿತರರು ವಹಿಸಿದ್ದರು. ಎಸ್‌ಡಿಪಿಐಯ ಈ ಕಾರ್ಯಕ್ಕೆ ಸಾರ್ವಜನಿಕರಿಂದ ಪ್ರಶಂಸೆ ವ್ಯಕ್ತವಾಗಿದೆ.

## ■ ಬೆಂಗಳೂರು: ಕ್ಯಾಂಪಸ್ ಫ್ರಂಟ್‌ನಿಂದ ಕೇರಿಯರ್ ಗೈಡೆನ್ಸ್

ಬೆಂಗಳೂರು: ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾದ ರಾಜ್ಯ ಮಟ್ಟದ 'ಬಾ ಶಾಲೆಗೆ' ಅಭಿಯಾನದ ಅಂಗವಾಗಿ ಇತ್ತೀಚೆಗೆ ಬೆಂಗಳೂರಿನ ಕೆ.ಜಿ.ಹಳ್ಳಿಯ ಸೋಫಿಯಾ ಇಂಗ್ಲಿಷ್ ಹೈಸ್ಕೂಲ್‌ನಲ್ಲಿ ಕೇರಿಯರ್ ಗೈಡೆನ್ಸ್ ಕಾರ್ಯಕ್ರಮವನ್ನು ಹಮ್ಮಿಕೊಂಡಿತು.

ಈ ಸಂದರ್ಭ ಕ್ಯಾಂಪಸ್ ಬೆಂಗಳೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಬ್ದುಲ್ ರಹೀಂ, ಕೋಶಾಧಿಕಾರಿ ಝುಬೈರ್ ಅಹ್ಮದ್, ಸಮಿತಿ ಸದಸ್ಯರಾದ ಮುಹಮ್ಮದ್ ಸುಲ್ತಾನ್, ಮೆಹಬೂಬ್ ಪಾಷ ಉಪಸ್ಥಿತರಿದ್ದರು.

## ■ ಮೊಬೈಲ್ ಟೆಕ್ನೀಶಿಯನ್ ಕೋರ್ಸ್: ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ

ಕಾಪೂರು: ಫ್ರೀಡಂ ಎಜುಕೇಶನ್ ಆ್ಯಂಡ್ ಚಾರಿಟೇಬಲ್ ಟ್ರಸ್ಟ್ ಆಯೋಜಿಸಿದ್ದ ಮೊಬೈಲ್ ಟೆಕ್ನಿಷಿಯನ್ ಕೋರ್ಸ್‌ನಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳಿಗೆ ಇತ್ತೀಚೆಗೆ ಇಲ್ಲಿನ ಶಾಂತಿ ನಗರದ ಫ್ರೀಡಂ ಕಚೇರಿಯಲ್ಲಿ ಸರ್ಟಿಫಿಕೇಟ್ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ತರಬೇತಿ ನೀಡಿದ ಶಿಕ್ಷಕರನ್ನು ಸನ್ಮಾನಿಸಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ಮುಹಮ್ಮದ್ ಶಾಂತಿ ನಗರ ವಹಿಸಿದ್ದರು. ಫ್ರೀಡಂ ಟ್ರಸ್ಟ್‌ನ ಕಾರ್ಯ ವೈಖರಿಯ ಬಗ್ಗೆ ಇಬ್ರಾಹೀಂ ಸಂಕ್ಷಿಪ್ತವಾಗಿ ವಿವರಿಸಿದರು.

ಮೊಯ್ದಿನಬ್ಬ ಶಾಂತಿನಗರ, ಮುಹಮ್ಮದ್ ಮತ್ತು ಸಿರಾಜುದ್ದೀನ್ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಿದರು. ಕಾರ್ಯಕ್ರಮದ ಆರಂಭದಲ್ಲಿ ಇಮ್ರಾನ್ ಖಿರಾಅತ್ ಪಠಿಸಿದರು. ನೌಶಾದ್ ಸ್ವಾಗತಿಸಿ ಇಮ್ರಾನ್ ವಂದಿಸಿದರು ಮತ್ತು ನವಾಝ್ ಕಾರ್ಯಕ್ರಮ ನಿರೂಪಿಸಿದರು.

## ■ ಮೈಸೂರಿನಲ್ಲಿ ಮುಂಜಿ ಕಾರ್ಯಕ್ರಮ

ಮೈಸೂರು: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ, ಟಿಪ್ಪು ಬ್ರಾಂಚ್, ಸಿಆರ್ ಬ್ರಾಂಚ್‌ನ ವತಿಯಿಂದ ಇತ್ತೀಚೆಗೆ ಮುಂಜಿ ಕಾರ್ಯಕ್ರಮವನ್ನು ನಡೆಸಲಾಯಿತು.



ಕಾರ್ಯಕ್ರಮದಲ್ಲಿ ಮೈಸೂರು ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಫೈರೋಝ್, ಉಪಾಧ್ಯಕ್ಷ ಟಿ.ಎಂ.ಹುಸೈನ್, ಕೋಶಾಧಿಕಾರಿ ಘರುಲುಲ್ಲಾ, ಜಿಲ್ಲಾ ಸಮಿತಿ ಸದಸ್ಯ ಹಾಗೂ ಟಿ.ಆರ್.ಅಸೆಂಬ್ಲಿಯ ಅಧ್ಯಕ್ಷ ತಬ್ರೇಝ್ ಸೇಟ್, ಜಿಲ್ಲಾ ಸಮಿತಿ ಸದಸ್ಯೆ ಫಾತಿಮಾ, ಎನ್.ಆರ್.ಅಸೆಂಬ್ಲಿ ಅಧ್ಯಕ್ಷ ಸೈಫುಲ್ಲಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ■ 'ಪ್ರಜಾಪ್ರಭುತ್ವದ ರಕ್ಷಣೆ ಎಸ್‌ಡಿಪಿಐ ಗುರಿ'




ಹಾಸನ: ಹಾಸನ ಜಿಲ್ಲೆಯನ್ನು ಸ್ವಾರ್ಥ ರಾಜಕಾರಣಿಗಳಿಂದ ಮುಕ್ತಿಗೊಳಿಸಿ, ಜನಪರ ಆಡಳಿತವನ್ನು ಸ್ಥಾಪಿಸುವಲ್ಲಿ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್.ಡಿ.ಪಿ.ಐ) ಮಹತ್ವದ ಪಾತ್ರ ವಹಿಸಲಿದೆ ಎಂದು ಪಕ್ಷದ ಜಿಲ್ಲಾಧ್ಯಕ್ಷರಾದ ಅಮೀರ್ ಜಾನ್ ಹೇಳಿದ್ದಾರೆ.

ಶುಕ್ರವಾರ ಎಸ್.ಡಿ.ಪಿ.ಐ ಸದಸ್ಯತ್ವ ಅಂದೋಲನವನ್ನು ಚಾಲನೆ ನೀಡಿದ ನಂತರ ಮಾತನಾಡಿದ ಅವರು, ದೇಶದಲ್ಲಿ ಪ್ರಜಾಪ್ರಭುತ್ವವನ್ನು ಕಾಪಾಡುವುದು ಪಕ್ಷದ ಗುರಿಯಾಗಿದೆ ಎಂದರು.

ಪತ್ರಕರ್ತ ಮಲ್ನಾಡ್ ಮೆಹಬೂಬ್, ಪಕ್ಷದ ಹಾಸನ ವಿಧಾನ ಸಭಾ ಕ್ಷೇತ್ರದ ಅಧ್ಯಕ್ಷ ಸಾದಿಖ್ ಕಣತೂರ್, ಜಿಲ್ಲಾ ಕಾರ್ಯದರ್ಶಿ ಸೂಫಿ ಇಬ್ರಾಹಿಂ, ಮುಹಮ್ಮದ್ ಇನಾಯತ್ ವೇದಿಕೆಯಲ್ಲಿದ್ದರು.

## ■ ಸ್ಕೂಲ್ ಚಲೊ ಅಭಿಯಾನಕ್ಕೆ ಚಾಲನೆ

ಹೊಸದಿಲ್ಲಿ: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ರಾಷ್ಟ್ರಮಟ್ಟದ ಸ್ಕೂಲ್ ಚಲೊ (ಗೋ ಟು ಸ್ಕೂಲ್) ಅಭಿಯಾನವು ಮೇ 1ರಿಂದ ಆರಂಭವಾಗಿದೆ ಎಂದು ಸಂಘಟನೆಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೆ.ಎಂ.ಶರೀಫ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಲ್ಲಾ ಹುಡುಗರು ಹಾಗೂ ಹುಡುಗಿಯರು ಪ್ರಾಥಮಿಕ ಹಾಗೂ ಪ್ರೌಢ ಮಟ್ಟದಲ್ಲಿ ಶಾಲೆಗೆ ಹೋಗುವುದನ್ನು ಖಚಿತಪಡಿಸುವುದು ಅಭಿಯಾನದ ಉದ್ದೇಶವಾಗಿದೆ. ಅಭಿಯಾನದ ಅಂಗವಾಗಿ ಪೋಸ್ಟರ್ ಪ್ರಚಾರ, ವಿದ್ಯಾರ್ಥಿಗಳ ಸಮೀಕ್ಷೆ ನಡೆಸುವುದು, ಅವರನ್ನು ಶಾಲೆಗೆ ಸೇರಿಸಲು ನೆರವು, ಡ್ರಾಪ್ ಔಟ್ ವಿದ್ಯಾರ್ಥಿಗಳನ್ನು ಶಾಲೆಗೆ ಮರು ದಾಖಲಾತಿ ಮಾಡುವುದು, ಸ್ಕೂಲ್ ಕಿಟ್ ಹಾಗೂ ಸ್ಕಾಲರ್ ಶಿಪ್ ವಿತರಣೆ ಹಾಗೂ ಪೋಷಕರಿಗೆ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುವುದು ಎಂದು ಪ್ರಕಟನೆಯಲ್ಲಿ ತಿಳಿಸಲಾಗಿದೆ.

47ನೇ ಪುಟದಿಂದ

ಪ್ರಶ್ನೆ : ಜೈಲು ವಾಸದ ಅನುಭವ...

ಸುಲೈಮಾನ್ : ಸುಮಾರು ಮೂರು ವರ್ಷ ಜೈಲು ಶಿಕ್ಷೆ ಅನುಭವಿಸಿದೆ. ಊಟ ತಿಂಡಿ ಸಿಗುತ್ತದೆ. ಆದರೇನು ಸ್ವಾತಂತ್ರ್ಯ ಇಲ್ಲವಲ್ಲ. ಆ ಮೂರು ವರ್ಷ ನನ್ನ ಪಾಲಿಗೆ 15 ವರ್ಷ. ಊರಿನ ಚಿಂತೆ ಕಾಡತೊಡಗಿತು. ಹೆಂಡತಿ ಮಕ್ಕಳು ನೆನಪಾಗುತ್ತಿದ್ದರು. ಆರೋಗ್ಯ ಕೆಟ್ಟಿತು. ನನಗೆ ಬ್ಲಡಪ್ರೆಶರ್ ಕೂಡ ಇತ್ತು. ಜೈಲಿನಲ್ಲಿ ಅದಕ್ಕೆ ಗುಳಿಗೆ ಕೊಡುತ್ತಾರೆ. ಆದರೆ ನೆಮ್ಮದಿ ಎಂಬುದೇ ಇರಲಿಲ್ಲ. ದಿನನಿತ್ಯ ತಹಜ್ಜುದ್ ನಮಾಝ್ ನಿರ್ವಹಿಸಿ ವಿಮೋಚನೆಗಾಗಿ ಪ್ರಾರ್ಥಿಸುತ್ತಿದ್ದೆ. ಯಾವಾಗ ಬಿಡುಗಡೆಯಾಗುತ್ತದೋ ಎಂದು ನಿರೀಕ್ಷೆಯಲ್ಲೇ ದಿನ ಕಳೆಯುತ್ತಿದ್ದೆ.

ಪ್ರಶ್ನೆ : ನೀವು ಜೈಲಿನಲ್ಲಿದ್ದಾಗ ನಿಮಗೆ ಮತ್ತು ನಿಮ್ಮ ಕುಟುಂಬಕ್ಕೆ ಯಾರಾದರೂ ನೆರವು ನೀಡಿದ್ದರೇ?

ಸುಲೈಮಾನ್ : ಜೈಲಿನಲ್ಲಿದ್ದಾಗ ಮೊದಲ ಒಂದು ವರ್ಷ ಯಾರಿಗೂ ಮಾಹಿತಿ ಇರಲಿಲ್ಲ. ಆ ಸಮಯದಲ್ಲಿ ಹನೀಫ್ ಎಂಬ ವ್ಯಕ್ತಿ ಜೈಲಿಗೆ ಬಂದು ನನ್ನೊಡನೆ ಮಾತನಾಡಿದ್ದರು. ನಾನು ಅವರೊಂದಿಗೆ ಸಂಕಷ್ಟ ತಿಳಿಸಿದೆ. ಅವರು ಭರವಸೆಗಳ ಕಂತೆಯನ್ನೇ ನೀಡಿದರು. ಮತ್ತೆ ಅವರು ಎಲ್ಲಿಗೆ ಹೋದರು ಎಂಬುದೇ ಪತ್ತೆಯಿಲ್ಲ. ಆದರೆ ಎರಡನೇ ವರ್ಷದ ನಂತರ ನನ್ನ ಕುರಿತು ಮಾಹಿತಿ ಪಡೆದ ಇಂಡಿಯಾ ಫ್ರೆಟರ್ನಿಟಿ ಫೋರಮ್‌ನ ಕಾರ್ಯಕರ್ತರಾದ ಅಲ್ತಾಫ್ ಮತ್ತು ರಫೀಕ್ ಎಂಬವರು ಜೈಲಿಗೆ ಬಂದು ಭೇಟಿ ನೀಡಿ ಸಾಂತ್ವನ ನೀಡಿದರು. ನಿರಂತರವಾಗಿ ಜೈಲಿಗೆ ಬಂದು ಭೇಟಿ ನೀಡಿದ ನಂತರ ನಾನು ಮನೆಯವರೊಂದಿಗೆ ಮಾತನಾಡುವ ವ್ಯವಸ್ಥೆಯನ್ನೂ ಮಾಡಿದರು. ನನ್ನ ಬಿಡುಗಡೆಗಾಗಿ ಇರುವ ಕಾನೂನು ರೀತಿಯ ಮಾರ್ಗಗಳನ್ನು ಕಂಡು ಹುಡುಕಿದ್ದು ಇಂಡಿಯಾ ಫ್ರೆಟರ್ನಿಟಿ ಫೋರಮ್‌ನವರು. ನನಗೆ ಗೊತ್ತಿರುವುದು ಕೆಲವೇ ಮಂದಿಯ ಹೆಸರು ಮಾತ್ರ. ಆದರೆ ನನ್ನ ಬಿಡುಗಡೆಗಾಗಿ ಐಎಫ್‌ಎಫ್‌ನ ಸುಮಾರು ಮಂದಿ ಕಾರ್ಯಕರ್ತರು ತುಂಬಾ ಶ್ರಮಪಟ್ಟಿದ್ದಾರೆ.

ಪತ್ರಿಕೆಯಲ್ಲಿ ನನ್ನ ವಿಚಾರ ಪ್ರಕಟವಾದದ್ದನ್ನು ಗಮನಿಸಿ ಹಲವು ಮಂದಿ ಮನೆಯವರಿಗೆ ಸಹಾಯ ಮಾಡಿದ್ದಾರೆ. ಪಾಪ್ಯುಲರ್ ಫ್ರಂಟ್‌ನವರು ಖರ್ಚಿಗೆ ಮತ್ತು ಮಕ್ಕಳ ಶಿಕ್ಷಣಕ್ಕೆ ನೆರವು ನೀಡಿದ್ದಾರೆ ಎಂದು ಮನೆಗೆ ಫೋನು ಮಾಡಿದಾಗ ತಿಳಿಸಿದ್ದಾರೆ. ಐಎಫ್‌ಎಫ್‌ನವರು ಕೂಡ ನನ್ನ ಮನೆಗೆ ಭೇಟಿ ನೀಡಿ ನೆರವು ನೀಡಿದ್ದರು.

ಪ್ರಶ್ನೆ : ನಿಮ್ಮ ಬಿಡುಗಡೆಗೆ ಪಾವತಿಸಬೇಕಾಗಿದ್ದ 75 ಲಕ್ಷ ರೂಪಾಯಿಯನ್ನು ಹೇಗೆ ಹೊಂದಿಸಲಾಯಿತು?

ಸುಲೈಮಾನ್ : ನನ್ನ ಬಿಡುಗಡೆಗಾಗಿ 75 ಲಕ್ಷ ಪಾವತಿಸಬೇಕಾಗಿರುವುದು ನಿಜ. ಆದರೆ ಆ ಹಣವನ್ನು ಪಾವತಿಸಲು ಕಾನೂನು ರೀತಿಯ ಮಾರ್ಗವಿತ್ತು. ಅದನ್ನು ಕಂಡುಕೊಂಡ ಐಎಫ್‌ಎಫ್‌ನವರು ಕಾನೂನು ಹೋರಾಟ ನಡೆಸಿ ಅಪಘಾತಕ್ಕೀಡಾದ ವಾಹನದ ಇನ್ಶೂರೆನ್ಸ್‌ನ ಮೂಲಕ 75 ಲಕ್ಷ ರೂಪಾಯಿಯನ್ನು ಪಾವತಿಸಿದರು. ಸೌದಿಅರೇಬಿಯದಲ್ಲಿ ಈ ರೀತಿ ಇನ್ಶೂರೆನ್ಸ್ ಕ್ಲೇಮ್ ಮಾಡುವುದು ಅಷ್ಟು ಸುಲಭದ ಕೆಲಸವಲ್ಲ. ನನಗೆ ಗೊತ್ತಿರುವಂತೆ ಐಎಫ್‌ಎಫ್‌ನ ನೌಶಾದ್ ಎಂಬವರು ಇದಕ್ಕಾಗಿ ನನ್ನ ಮಾಲಕನ ಬಳಿ, ಜೈಲು ಅಧಿಕಾರಿಗಳ ಬಳಿ, ಶೇಖ್‌ಗಳ ಬಳಿ ಅಲೆದಾಡಿದ್ದಾರೆ. ಒಂದೂವರೆ ವರ್ಷದ ನಿರಂತರ ಪರಿಶ್ರಮದಿಂದಾಗಿ ಇದು ಸಾಧ್ಯವಾಯಿತು. ರಫೀಕ್‌ರವರು ಆಗಾಗ ಜೈಲಿಗೆ ಬಂದು ನನಗೆ ಮಾಹಿತಿ ಒಪ್ಪಿಸುತ್ತಿದ್ದರು.

ಪ್ರಶ್ನೆ: ಬಿಡುಗಡೆಯ ಕ್ಷಣಗಳನ್ನು ನೀವು ಹೇಗೆ ಆನಂದಿಸಿದ್ದೀರಿ?

ಸುಲೈಮಾನ್ : ಜೈಲಿನಿಂದ ಬಿಡುಗಡೆಗೊಂಡಾಗ ಅತೀವ ಸಂತೋಷವಾಗಿ 'ಅಲ್‌ಹಮ್ದುಲಿಲ್ಲಾಹ್...' ಎಂದೆ. ಅದೇ ಸಂಭ್ರಮದಲ್ಲಿ ಉಮ್ರಾ ನಿರ್ವಹಿಸಿದೆ. ಇನ್ನು ಮದೀನ ಸಂದರ್ಶಿಸಬೇಕೆಂದಿದ್ದೇನೆ. ನನ್ನ ಬಳಿ ನಯಾ ಪೈಸೆ ಇಲ್ಲ. ನಾನು ಐಎಫ್‌ಎಫ್‌ನವರೊಂದಿಗೆ ಇಷ್ಟು ದಿನ ಕಳೆದಿದ್ದೇನೆ. ನಿನ್ನೆಯಷ್ಟೇ ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಮದ್ದು ಮಾಡಿಸಿದ್ದಾರೆ.

ಪ್ರಶ್ನೆ: ಮತ್ತೆ ವಿದೇಶಕ್ಕೆ ಹಿಂತಿರುಗುವ ಯೋಜನೆ ಇದೆಯೇ?

ಸುಲೈಮಾನ್ : ಇಲ್ಲಿ ಇಬ್ಬರು ವೀಸಾ ಕೊಡುವುದಾಗಿ ಭರವಸೆ ನೀಡಿದ್ದಾರೆ. ನೋಡಬೇಕು, ಅಲ್ಲಾಹನ ಇಚ್ಛೆ ಏನಿದೆಯೋ ಅದು ನಡೆಯುತ್ತದೆ.

ಪ್ರಶ್ನೆ: ವಿದೇಶ ಉದ್ಯೋಗದ ಬಗ್ಗೆ ನಿಮ್ಮ ನಿಲುವು?

ಸುಲೈಮಾನ್ : ಒಳ್ಳೆಯ ವೀಸಾ, ಕೆಲಸ ಇದ್ದರೆ ಇಲ್ಲಿಗೆ ಬರಬಹುದು. ಎಲ್ಲವನ್ನೂ ತಿಳಿದುಕೊಂಡೇ ಇಲ್ಲಿಗೆ ಬರುವುದು ಒಳ್ಳೆಯದು.

ಪ್ರಶ್ನೆ: ನಿಮ್ಮ ಮುಂದಿನ ಯೋಜನೆ?

ಸುಲೈಮಾನ್ : ಪಾಸ್‌ಪೋರ್ಟ್ ಕೈಗೆ ಸಿಕ್ಕಿದ ತಕ್ಷಣ ಮದೀನಾ ಸಂದರ್ಶಿಸಬೇಕೆಂದುಕೊಂಡಿದ್ದೇನೆ. ಕೆಲವರು ಇಲ್ಲಿ ದುಡಿದು ಏನಾದರೂ ಸಂಪಾದಿಸಿ ಮತ್ತೆ ಊರಿಗೆ ಹೋಗು ಎಂದು ಹೇಳುತ್ತಿದ್ದಾರೆ. ಐಎಫ್‌ಎಫ್‌ನವರು ಏನು ಹೇಳುತ್ತಾರೋ ನೋಡಬೇಕು. ಆದಷ್ಟು ಬೇಗ ಊರಿಗೆ ಬರಲು ಕಾತರನಾಗಿದ್ದೇನೆ.

# ಉಸಾಮ ಈ ಹಿಂದೆಯೇ ಸಾವನ್ನಪ್ಪಿದ್ದ: ಇರಾನ್‌ನ ಬೇಹುಗಾರಿಕಾ ಸಚಿವ

ಟೆಹ್ರಾನ್: ಅಲ್ ಕಾಯಿದಾ ಸಂಘಟನೆಯ ಮುಖ್ಯಸ್ಥ ಉಸಾಮಾ ಬಿನ್ ಲಾದೆನ್ ಹಲವು ಸಮಯಗಳ ಹಿಂದೆ ಅನಾರೋಗ್ಯವೊಂದರಲ್ಲಿ ಸಾವನ್ನಪ್ಪಿದ್ದಾನೆ ಎಂಬುದಕ್ಕೆ ನಮ್ಮಲ್ಲಿ ಸ್ಪಷ್ಟ ಮಾಹಿತಿಗಳಿವೆ ಎಂದು ಇರಾನ್‌ನ ಬೇಹುಗಾರಿಕಾ ಸಚಿವರೊಬ್ಬರು ತಿಳಿಸಿದ್ದಾರೆ.

ಪಾಕಿಸ್ತಾನದಲ್ಲಿ ಮೇ 1ರಂದು ಅಮೆರಿಕ ಸೇನೆ ಉಸಾಮಾನನ್ನು ಕೊಂದಿರುವುದಾಗಿ ಅಮೆರಿಕದ ಹೇಳಿಕೆಯನ್ನು ಅವರು ಪ್ರಶ್ನಿಸಿದ್ದಾರೆ.

''ಅಮೆರಿಕ ಸೇನೆ ಹಾಗೂ ಬೇಹುಗಾರಿಕೆ ನಿಜವಾಗಿ ಬಿನ್ ಲಾಡೆನ್‌ನನ್ನು ಬಂಧಿಸಿದ್ದರೆ ಅಥವಾ ಕೊಂದು ಹಾಕಿದ್ದರೆ, ಅವರು ಆತನ ದೇಹವನ್ನೇಕೆ ತೋರಿಸುತ್ತಿಲ್ಲ? ಆತನ ಮೃತದೇಹವನ್ನೇಕೆ ಅವರು ಸಮುದ್ರಕ್ಕೆ ಎಸೆದಿದ್ದಾರೆ? ಎಂದು ಇರಾನ್‌ನ ಬೇಹುಗಾರಿಕಾ ಸಚಿವ ಹೈದರ್ ಮಸ್ಲೇಹಿ ಪ್ರಶ್ನಿಸಿದ್ದಾರೆ.

''ಜುಂದುಲ್ಲಾದ ನಾಯಕ ಅಬ್ದುಲ್ ಮಲಿಕ್ ರಿಜಿಯನ್ನು ನಾವು ಬಂಧಿಸಿದಾಗ ನಾವು ಆತನನ್ನು ಜಗತ್ತಿಗೆ ತೋರಿಸಿದೆವು ಮತ್ತು ಆತನ ಸಂದರ್ಶನವನ್ನು ಪ್ರಸಾರ ಮಾಡಿದೆವು'' ಎಂದು ಅವರು ಹೇಳಿದರು.

ಪ್ರಾದೇಶಿಕವಾಗಿ ಎದ್ದಿರುವ ಕೆಲವು ಜಾಗೃತಿಯ ಅಲೆಗಳನ್ನು ಮರೆಮಾಚುವುದಕ್ಕಾಗಿ ವೈಟ್ ಹೌಸ್ ಈ ರೀತಿಯ ಸುಳ್ಳು ಸುದ್ದಿಗಳನ್ನು ಬಿಡುಗಡೆಗೊಳಿಸುತ್ತಿದೆ ಎಂದು ಅವರು ಟೀಕಿಸಿದರು.

ತಮ್ಮ ಕುಂದುತ್ತಿರುವ ಆರ್ಥಿಕ ಪರಿಸ್ಥಿತಿ ಹಾಗೂ ಹೆಚ್ಚುತ್ತಿರುವ ದೇಶೀಯ ಸಮಸ್ಯೆಗಳಿಂದ ಜನರ ಮನಸ್ಸನ್ನು ಬೇರೆಡೆಗೆ ಕೊಂಡೊಯ್ಯುವುದಕ್ಕಾಗಿ ಅಮೆರಿಕ ಅಧಿಕಾರಿಗಳು ಈ ರೀತಿಯ ಸುಳ್ಳು ಪ್ರಚಾರದಲ್ಲಿ ತೊಡಗಿದ್ದಾರೆ ಎಂದು ಅವರು ಆರೋಪಿಸಿದ್ದಾರೆ.

ಬಿನ್ ಲಾದೆನ್ ಮೃತದೇಹವನ್ನು ಇಸ್ಲಾಮಿಕ್ ಕಾನೂನಿನಂತೆ 24 ಗಂಟೆಗಳೊಳಗಾಗಿ ಸಮುದ್ರದಲ್ಲಿ ದಫನ ಮಾಡಲಾಗಿದೆ ಎಂದು ಅಮೆರಿಕ ಅಧಿಕಾರಿಗಳು ತಿಳಿಸಿದ್ದಾರೆ. ಆದರೆ ಸಮುದ್ರದಲ್ಲಿ ಕಳೇಬರವನ್ನು ದಫನ ಮಾಡುವುದು ಇಸ್ಲಾಮಿಕ್ ಪದ್ಧತಿಯಲ್ಲ ಮತ್ತು ಇಸ್ಲಾಮ್‌ನಲ್ಲಿ ಧಫನ ಕಾರ್ಯ ನಡೆಸಲು ಯಾವುದೇ ಸಮಯದ ಮಿತಿಯಿಲ್ಲ.

ಬಿನ್ ಲಾದೆನ್‌ನ ಶವವನ್ನು ದಫನ ಮಾಡಲು ಯಾವುದೇ ದೇಶಗಳು ಮುಂದೆ ಬರುವುದಿಲ್ಲವೆಂದು ಸಮುದ್ರದಲ್ಲಿ ದಫನ ಮಾಡುವ ನಿರ್ಧಾರವನ್ನು ಕೈಗೊಳ್ಳಲಾಯಿತು ಎಂದು ಅಮೆರಿಕ ಅಧಿಕಾರಿಗಳು ಹೇಳಿದ್ದಾರೆ. ಆದರೆ ಈ ವಿಷಯಕ್ಕೆ ಸಂಬಂಧಿಸಿದಂತೆ ಅದು ಯಾವ ರಾಷ್ಟ್ರವನ್ನು ಸಂಪರ್ಕಿಸಿದೆಯೆಂದೂ ಹೇಳಲಾಗಿಲ್ಲ.



## ಬಹ್ರೈನ್ ಹಿಂಸೆ: ಕುರುಡಾಗಿರುವ ಪಾಶ್ಚಿಮಾತ್ಯರು



ಬಹ್ರೈನ್: ಸೌದಿ ಅರೇಬಿಯಾ ಬೆಂಬಲಿತ ಮಾನಾಮಾ ಆಡಳಿತವು ಬಹ್ರೈನ್ ಜನತೆಯನ್ನು ಸಾಮೂಹಿಕವಾಗಿ ಶಿಕ್ಷೆಗೆ ಗುರಿಪಡಿಸುವುತ್ತಿರುವುದರ ಬಗ್ಗೆ ಪಾಶ್ಚಿಮಾತ್ಯರು ಕುರುಡುತನ ಪ್ರದರ್ಶಿಸುತ್ತಿರುವುದರ ಬಗ್ಗೆ ಟೀಕೆಗಳು ಎದ್ದಿವೆ.

ಬಹ್ರೈನ್‌ನಲ್ಲಿ ಏನು ನಡೆಯುತ್ತಿದೆಯೋ, ಅದು ತುಂಬಾ ಗಂಭೀರವಾದದ್ದು. ಸೌದಿ ಬೆಂಬಲಿತ ಆಕ್ರಮಣದಲ್ಲಿ 20 ಮಸೀದಿಗಳನ್ನು ಧ್ವಂಸಗೊಳಿಸಲಾಗಿದೆ. ಮನೆಗಳನ್ನು ಧ್ವಂಸಗಯ್ಯಲಾಗುತ್ತಿದೆ. ವಿರೋಧ ಪಕ್ಷದ ಬೆಂಬಲಿಗರನ್ನು ಸಾಮೂಹಿಕವಾಗಿ ವಜಾಗೊಳಿಸಲಾಗುತ್ತಿದೆ ಎಂದು ಮಧ್ಯಪ್ರಾಚ್ಯದ ತಜ್ಞ ಕ್ರಿಸ್ ಬಾಂಬೆರಿ ಹೇಳಿದ್ದಾರೆ.

ದ್ವಿತೀಯ ಮಹಾಯುದ್ಧದ ಬಳಿಕ ಅಂತಾರಾಷ್ಟ್ರೀಯ ಕಾನೂನಿನಂತೆ ಸಾಮೂಹಿಕ ಶಿಕ್ಷೆಯು ಕಾನೂನು ಬಾಹಿರವಾಗಿದೆ. ಆದರೆ ಪಾಶ್ಚಿಮಾತ್ಯರು ಬಹ್ರೈನ್‌ನಲ್ಲಿ ಭಯಂಕರ ಸ್ಥಿತಿಯನ್ನು ಒಪ್ಪಿಕೊಳ್ಳಲು ತಯಾರಿಲ್ಲ ಎಂದು ಅವರು ದೂರಿದ್ದಾರೆ.

ಪ್ರತಿಭಟನಾಕಾರರ ಹತ್ಯೆ, ಮಸೀದಿಗಳ ಧ್ವಂಸ, ಗಾಯಗೊಂಡ ಪ್ರತಿಭಟನಾಕಾರರನ್ನು ಚಿಕಿತ್ಸಿಸುವ ಫಿಸೀಶಿಯನ್‌ಗಳು ಮತ್ತು ಡಾಕ್ಟರ್‌ಗಳ ನಾಪತ್ತೆಯ ಬಗ್ಗೆ ಬಾಂಬ್ರೆ ಕಳವಳ ವ್ಯಕ್ತಪಡಿಸಿದ್ದಾರೆ.

ಅಲ್ಲಿ ಸಣ್ಣ ಪ್ರಮಾಣದಲ್ಲಿ ಮಾನವ ಹಕ್ಕ ಸಂಘಟನೆಗಳಿವೆ. ಅವು ಏರುತ್ತಿರುವ ಬಂಧನಗಳ ಬಗ್ಗೆ ಕಳವಳ ವ್ಯಕ್ತಪಡಿಸಿವೆ. ಬಹ್ರೈನ್‌ನಲ್ಲಿ ನಡೆಯುತ್ತಿರುವ ಅನ್ಯಾಯದ ಬಗ್ಗೆ ಕಡಿಮೆ ಕವರೇಜ್ ನೀಡಲಾಗುತ್ತಿದೆ ಎಂದು ಬಾಂಬ್ರೆಬೇಸರ ವ್ಯಕ್ತಪಡಿಸಿದ್ದಾರೆ.

ಬಹ್ರೈನ್ ಒಂದು ಪ್ರಮುಖ ಆರ್ಥಿಕ ಕೇಂದ್ರವಾಗಿದೆ. ಬ್ರಿಟನ್ ಹಾಗೂ ಅಮೆರಿಕ ಅಲ್ಲಿ ಬೃಹತ್ ಹೂಡಿಕೆಯನ್ನು ಹೊಂದಿವೆ ಎಂದು ಅವರು ಹೇಳಿದ್ದಾರೆ.

ಶಸ್ತ್ರಾಸ್ತ್ರ ವ್ಯಾಪಾರಸ್ಥರ ಕೂಟದೊಂದಿಗೆ ಬ್ರಿಟಿಷ್ ಪ್ರಧಾನಿ ಡೇವಿಡ್ ಕ್ಯಾಮರೂನ್ ಈಜಿಪ್ಟ್ ಕ್ರಾಂತಿಯ ನಂತರ ಮಧ್ಯಪ್ರಾಚ್ಯಕ್ಕೆ ಪ್ರವಾಸ ಕೈಗೊಂಡಿರುವುದನ್ನು ನಾವು ಕಂಡಿದ್ದೇವೆ. ಕ್ಯಾಮರೂನ್ ಮತ್ತು ಕನ್ಸರ್ವೇಟೀವ್ ಕ್ಯಾಬಿನೇಟ್‌ನ ಇತರ ಪ್ರಮುಖ ಸಚಿವರು ಬಹ್ರೈನ್‌ನೊಂದಿಗೆ ದೀರ್ಘಾವಧಿಯ ಸಂಬಂಧವನ್ನು ಹೊಂದಿದ್ದಾರೆ.

ಬ್ರಿಟನ್‌ನ ಶಸ್ತ್ರಾಸ್ತ್ರ ಉತ್ಪಾದಕರು ಸಿಎಸ್ ಗ್ರೆನೇಡ್, ಧ್ವಂಸ ಸ್ಫೋಟಕಗಳು, ಹೊಗೆ ಡಬ್ಬಿಗಳನ್ನೊಳಗೊಂಡಂತೆ ಗುಂಪು ನಿಯಂತ್ರಕ ಉತ್ಪಾದನೆಗಳನ್ನು ಬಹ್ರೈನ್ ಸರಕಾರಕ್ಕೆ ಮಾರುತ್ತಿದ್ದಾರೆ. ಇದನ್ನು ಪ್ರತಿಭಟನಕಾರರ ಮೇಲೆ ಬಳಸಲಾಗುತ್ತಿದೆ.

ಸರಕಾರ ವಿರೋಧಿ ಪ್ರತಿಭಟನಕಾರರು ಫೆಬ್ರವರಿ ಮಧ್ಯಭಾಗದಿಂದ ಬಹ್ರೈನ್‌ನಾದ್ಯಂತ ಪ್ರತಿಭಟನೆಗಳನ್ನು ನಡೆಸುತ್ತಿದ್ದಾರೆ. ಅವರು ಅಲ್ ಖಲೀಫಾನ 40 ವರ್ಷಗಳ ಆಡಳಿತವನ್ನು ಕೊನಗೊಳಿಸುವಂತೆ ಆಗ್ರಹಿಸುತ್ತಿದ್ದಾರೆ. ರಾಷ್ಟ್ರ ವ್ಯಾಪಿ ಎದ್ದಿರುವ ಪ್ರತಿಭಟನೆಯನ್ನು ಅಡಗಿಸುವುದಕ್ಕಾಗಿ ಸಹಾಯ ಕೋರಿದ ಮಾನಾಮಕ್ಕೆ ಸೌದಿ ಅರೇಬಿಯಾ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ ಪೊಲೀಸ್ ಮತ್ತು ಸೇನಾ ಪಡೆಗಳನ್ನು ಕಳುಹಿಸಿತು.

ಸ್ಥಳೀಯರ ಪ್ರಕಾರ ಮಾನವ ಹಕ್ಕು ಕಾರ್ಯಕರ್ತರನ್ನೊಳಗೊಂಡಂತೆ ಹಲವು ಮಂದಿಯನ್ನು ಹತ್ಯೆಗೆಯ್ಯಲಾಗಿದೆ. ಕೆಲವರನ್ನು ಚಿತ್ರಹಿಂಸೆಗೆ ಗುರಿಪಡಿಸಿ ಕೊಂದರೆ, ಇನ್ನು ಕೆಲವರನ್ನು ಕಸ್ಟಡಿಯಲ್ಲಿ ಇಡಲಾಗಿದೆ.

## ಯಮನ್: ಮೂವರು ಪ್ರತಿಭಟನಕಾರರ ಕೊಲೆ



ತಾಯಿಝ್: ಇಲ್ಲಿನ ಸರಕಾರಿ ಕಚೇರಿಯ ಆವರಣದಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಪ್ರತಿಭಟನಕಾರರ ಮೇಲೆ ಗುಂಡಿಕ್ಕಿದ ಯಮನ್ ಭದ್ರತಾ ಪಡೆಗಳು ಮೂವರನ್ನು ಕೊಂದು ಹಾಕಿದೆ ಮತ್ತು ಕನಿಷ್ಠ 10 ಮಂದಿಯನ್ನು ಗಾಯಗೊಳಿಸಿದೆ.

### ಕ್ವಿಝ್ ಟೈಮ್-7ರ ಉತ್ತರಗಳು

| | |
|---|---|
| 1.ವಲ್ಲಭ ಬಾಯಿ ಪಟೇಲ್ | 6.ನಾಂದಿ |
| 2.ರಝಿಯಾ ಸುಲ್ತಾನ | 7.120/80 ಮಿ.ಮೀ. |
| 3.ಬೇನಝೀರ್ ಭುಟ್ಟೋ | 8.ಸಕ್ಕರೆ ಆಹಾರ |
| 4.ಕಾರ್ಲ್‌ಮಾರ್ಕ್ಸ್ | 9.ರಾಣಿ |
| 5.ಪಿಟೀಲು | 10.ವಿಶ್ವನಾಥನ್ ಆನಂದ್ |